

ಗೆಳೆಯರೇ,


‘ಅರ್ಥ–೪’ ಆದ ಮೇಲೆ ಮುಂದಿನ ಸಂಚಿಕೆಗಳನ್ನು ತರಲಾಗಿರಲಿಲ್ಲ. ಈ ನಡುವೆ ಎರಡು ಪುಸ್ತಕಗಳನ್ನು ಪ್ರಕಟಿಸಿದ್ದೆವು. ಒಂದು ನಗರಗಳಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಕುರಿತಂತೆ ಜೀನ್ ಡ್ರೀಜ್ ಮುಂದಿಟ್ಟಿದ್ದ ಡ್ಯುಯೆಟ್ ಪರಿಕಲ್ಪನೆಯನ್ನು ಕುರಿತಂತೆ ನಡೆದ ಚರ್ಚೆಗೆ ಸಂಬಂಧಿಸಿದ ಪುಸ್ತಕ. ಇನ್ನೊಂದು ಥಾಮಸ್ ಪಿಕೆಟ್ಟಿಯವರ ಅಸಮಾನತೆಯನ್ನು ಕುರಿತ ಅಧ್ಯಯನಗಳನ್ನು ಸ್ಥೂಲವಾಗಿ ಪರಿಚಯಿಸುವ ಪುಸ್ತಕ. ಈಗ ಮತ್ತೆ ಧೈರ್ಯ ಮಾಡಿ, ಅರ್ಥವನ್ನು ಮುಂದುವರಿಸುವ ಸಾಹಸಕ್ಕೆ ಕೈಹಾಕಲಾಗಿದೆ. ಇನ್ನು ಮುಂದೆ ಸಾಕಷ್ಟು ನಿಯತವಾಗಿ ತರುವ ಆಸೆ ಇದೆ. ಈ ಸಂಚಿಕೆಯಲ್ಲಿ ಹಲವು ಲೇಖನಗಳು, ಅನುವಾದಗಳು ಇವೆ. ಅಮರ್ತ್ಯ ಸೇನ್ ಅವರ ಚಿಂತನೆಗಳನ್ನು ಪರಿಚಯಿಸುವ ಮಾಲಿಕೆಯೊಂದನ್ನು ಪ್ರಾರಂಭಿಸಲಾಗಿದೆ. ಹಾಗೆಯೇ ಭಾರತೀಯ ಅರ್ಥಶಾಸ್ತ್ರಜ್ಞರ ಕಿರು ಪರಿಚಯವನ್ನು ನೀಡಲಾಗುತ್ತಿದೆ. ಜೊತೆಗೆ ಕಾರ್ತಿಕ್ ಮುರಳಿಧರನ್ ಅವರ ಆಕ್ಸಿಲಿರೇಟಿಂಗ್ ಇಂಡಿಯಾಸ್ ಡೆವಲಪ್‌ಮೆಂಟ್ ಎಂಬ ಬೃಹತ್ ಪುಸ್ತಕವನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಕೆಲಸವನ್ನು ಪ್ರಾರಂಭಿಸಲಾಗಿದೆ. ಈಗ ಅರ್ಥ–೫ ನಿಮ್ಮ ಕೈಯಲ್ಲಿದೆ. ಓದಿ ಪ್ರತಿಕ್ರಿಯಿಸಿ.

ಎಂದಿನಂತೆ ಪಿಡಿಎಫ್ ಪ್ರತಿಗಳನ್ನು ಹಂಚಿಕೊಳ್ಳಲಾಗುತ್ತಿದೆ. ಇದು ನಮ್ಮ ವೆಬ್‌ಸೈಟಿನಲ್ಲೂ ಸಿಗುತ್ತಿದೆ. ನಿಮ್ಮ ಹಾಗೂ ಈ ನಿಟ್ಟಿನಲ್ಲಿ ಆಸಕ್ತಿ ಹೊಂದಿರುವ ನಿಮ್ಮ ಗೆಳೆಯರ ಇಮೇಲ್ ವಿಳಾಸ ಕೊಟ್ಟರೆ ಅವರಿಗೂ ಕಳುಹಿಸಬಹುದು. ಹಿಂದಿನ ಅರ್ಥ ಸಂಪುಟಗಳು ಬೇಕಾದರೆ lokayatha.com ಗಮನಿಸಿ

ನಿಮ್ಮ ಅಭಿಪ್ರಾಯ, ಸಲಹೆ ಅನುಕೂಲವಾಗುತ್ತದೆ.


ಟಿ. ಎಸ್ ವೇಣುಗೋಪಾಲ್


ಒಳಪುಟಗಳಲ್ಲಿ












ವಿಶ್ವಾಸ ಕಳೆದುಕೊಂಡ ವಿಶ್ವ ಬ್ಯಾಂಕ್

“ಭಾರತ ಆರ್ಥಿಕ ಸಮಾನತೆಯಲ್ಲಿ ವಿಶ್ವದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಕಳೆದ ಹತ್ತು ವರ್ಷಗಳಲ್ಲಿ ಬಡತನ ಗಣನೀಯವಾಗಿ ಕಡಿಮೆಯಾಗಿದೆ. ೨೦೧೧–೧೨ರಲ್ಲಿ ಕಡುಬಡವರು ನಮ್ಮಲ್ಲಿ ಒಟ್ಟು ಜನಸಂಖ್ಯೆಯ ಶೇಕಡ ೬.೩ರಷ್ಟು ಇದ್ದರು. ಈಗ ಅವರ ಸಂಖ್ಯೆ. ಶೇಕಡ ೨.೩ಕ್ಕೆ ಇಳಿದಿದೆ. ೧೭.೧೦ ಕೋಟಿ ಜನ ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆ.” ಇದು ಜಾಗತಿಕ ಬ್ಯಾಂಕ್ ಪ್ರಕಟಿಸಿರುವ ವರದಿ. ಜಾಗತಿಕ ಬ್ಯಾಂಕ್ ಕಳೆದ ಕೆಲವು ವರ್ಷಗಳಿಂದ ಅಸಮಾನತೆಯನ್ನು ಕುರಿತಂತೆ ವರದಿಯನ್ನು ಪ್ರಕಟಿಸುತ್ತಿದೆ. ಈ ವರ್ಷ ಜೂನ್ ತಿಂಗಳಿನಲ್ಲಿ ಅದರ ಇತ್ತೀಚಿನ ವರದಿ ಪ್ರಕಟವಾಗಿದೆ.
ನಮ್ಮ ಪತ್ರಿಕಾ ಮಾಹಿತಿ ಬ್ಯೂರೊ ಇದಕ್ಕೆ ವ್ಯಾಪಕ ಪ್ರಚಾರ ನೀಡಿದೆ. ನಮ್ಮ ಮುಖ್ಯವಾಹಿನಿಯ ಸುದ್ದಿಮಾಧ್ಯಮಗಳು ದೊಡ್ಡದಾಗಿಯೇ ಈ ಬಗ್ಗೆ ಮಾತನಾಡುತ್ತಿವೆ. ಸಹಜವಾಗಿಯೇ ನಮ್ಮ ಸರ್ಕಾರ ಕೂಡ ಸಂಭ್ರಮಿಸುತ್ತಿದೆ. ವಿದೇಶಿ ವರದಿಗಳ ಉದ್ದೇಶವನ್ನೇ ಸಾಮಾನ್ಯವಾಗಿ ಅನುಮಾನಿಸುವ, ಕೊನೆಗೆ ವರದಿಯನ್ನು ಅಲ್ಲಗೆಳೆಯುವ ನಮ್ಮ ಸರ್ಕಾರ ಇದನ್ನು ಮಾತ್ರ ತಲೆಯ ಮೇಲೆ ಹೊತ್ತು ತನ್ನ ಸಾಧನೆಗೆ ಸಾಕ್ಷಿಯಾಗಿ ಪ್ರದರ್ಶಿಸುತ್ತಿದೆ.

ಜಾಗತಿಕ ಬ್ಯಾಂಕ್ ವರಮಾನದ ಅಸಮಾನತೆಯನ್ನು ಅಂದಾಜು ಮಾಡಲು ಜಿನಿ ಗುಣಾಂಕವನ್ನು ಬಳಸಿಕೊಳ್ಳುತ್ತದೆ. ಜಿನಿ ಸೂಚಿ ಅನ್ನುವುದು ವರಮಾನದ ಅಸಮಾನತೆಯನ್ನು ಅಳೆಯುವುದಕ್ಕೆ ಬಳಸುವ ಒಂದು ಸಾಂಖ್ಯಿಕ ಸೂಚಿ. ಇದರ ಮೌಲ್ಯ ಹೆಚ್ಚಾದಷ್ಟೂ ಆ ದೇಶದಲ್ಲಿ ವರಮಾನದ ಅಸಮಾನತೆ ಹೆಚ್ಚಿದೆ ಎಂದು ಅರ್ಥ. ಭಾರತಕ್ಕೆ ಸಂಬಂಧಿಸಿದಂತೆ ಜಿನಿ ಸೂಚಿಯನ್ನು ಲೆಕ್ಕ ಹಾಕುವುದಕ್ಕೆ ಜಾಗತಿಕ ಬ್ಯಾಂಕ್ ಎನ್‌ಎಸ್‌ಎಸ್‌ಒ ಪ್ರಕಟಿಸಿರುವ ೨೦೨೨–೨೩ರ ಬಳಕೆ ವೆಚ್ಚದ ಸಮೀಕ್ಷೆಯನ್ನು ಬಳಸಿಕೊಂಡಿದೆ. ಅದು ೬೧ ದೇಶಗಳ ಜಿನಿ ಗುಣಾಂಕವನ್ನು ಲೆಕ್ಕ ಹಾಕಿದೆ. ಅದನ್ನು ಆಧರಿಸಿ ಭಾರತ ಜಗತ್ತಿನಲ್ಲೇ ನಾಲ್ಕನೇ ಅತಿ ಸಮಾನ ರಾಷ್ಟ್ರ ಎಂದು ವರದಿ ಮಾಡಿದೆ. ಅದರ ವಿಶ್ಲೇಷಣೆಯ ಎಲ್ಲಾ ಸಮಸ್ಯೆಗಳನ್ನು ಬದಿಗಿಟ್ಟು ನೋಡಿದರೂ ಅದು ಲೆಕ್ಕ ಹಾಕಿರುವುದು ೬೧ ರಾಷ್ಟ್ರಗಳಿಗೆ ಮಾತ್ರ. ಜಗತ್ತು ಅಂದರೆ ೬೧ ರಾಷ್ಟ್ರಗಳಷ್ಟೇ ಅಲ್ಲ.

ಸಾಮಾನ್ಯವಾಗಿ ಆದಾಯವನ್ನು ಬಳಸಿ ಜಿನಿ ಗುಣಾಂಕವನ್ನು ಲೆಕ್ಕ ಹಾಕಲಾಗುತ್ತದೆ. ಇಲ್ಲವೇ ಜನರ ಗೃಹಬಳಕೆಯ ಖರ್ಚನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಕೆಲವು ರಾಷ್ಟ್ರಗಳಲ್ಲಿ ಆದಾಯವನ್ನು ಕುರಿತ ಸಮೀಕ್ಷೆ ನಡೆಯುತ್ತದೆ. ಇನ್ನು ಕೆಲವು ರಾಷ್ಟ್ರಗಳು ಬಳಕೆಯ ಖರ್ಚನ್ನು ಕುರಿತಂತೆ ಸಮೀಕ್ಷೆ ನಡೆಸುತ್ತವೆ. ನಮ್ಮ ದೇಶವೂ ಸೇರಿದಂತೆ, ಬಹುತೇಕ ಹಿಂದುಳಿದ ದೇಶಗಳಲ್ಲಿ ಗೃಹಬಳಕೆ ವೆಚ್ಚದ ಸಮೀಕ್ಷೆಯನ್ನು ನಡೆಸಲಾಗುತ್ತದೆ. ಸಬ್‌ಸಹರನ್ ಆಫ್ರಿಕಾ, ದಕ್ಷಿಣ ಏಷ್ಯಾ, ಉತ್ತರ ಆಫ್ರಿಕಾ ಇತ್ಯಾದಿ ಕಡೆಗಳಲ್ಲಿ ಗೃಹಬಳಕೆಯ ಖರ್ಚಿನ ಸಮೀಕ್ಷೆಯನ್ನೇ ನಡೆಸಲಾಗುತ್ತದೆ. ಶ್ರೀಮಂತ ದೇಶಗಳಲ್ಲಿ ಹಾಗೂ ಲ್ಯಾಟಿನ್ ಅಮೇರಿಕೆಯ ದೇಶಗಳಲ್ಲಿ ವರಮಾನದ ಸಮೀಕ್ಷೆಯನ್ನು ನಡೆಸಲಾಗುತ್ತಿದೆ. ಅಲ್ಲಿ ವರಮಾನದ ಸಮೀಕ್ಷೆಯನ್ನು ನಡೆಸುವುದಕ್ಕೆ ಒಂದು ಕಾರಣವೆಂದರೆ, ಅಲ್ಲಿ ಆರ್ಥಿಕತೆ ಹೆಚ್ಚು ಔಪಚಾರಿಕವಾಗಿದೆ. ಹಾಗಾಗಿ ಅಲ್ಲಿ ವರಮಾನಕ್ಕೆ ಸಂಬಂಧಿಸಿದಂತೆ ಹೆಚ್ಚು ವಿಶ್ವಾಸಾರ್ಹವಾದ ಮಾಹಿತಿ ಸಿಗುತ್ತದೆ. ಲ್ಯಾಟಿನ್ ಅಮೇರಿಕೆಯಲ್ಲೂ ಆರ್ಥಿಕತೆ ಹೆಚ್ಚು ಔಪಚಾರಿಕವಾಗಿದೆ. ಬಡರಾಷ್ಟ್ರಗಳಲ್ಲಿ ಖರ್ಚಿನ ಸಮೀಕ್ಷೆ ನಡೆಸುವುದಕ್ಕೆ ಮುಖ್ಯ ಕಾರಣವೇನೆಂದರೆ, ಅಲ್ಲಿ ಅರ್ಥಿಕತೆ ಹೆಚ್ಚಾಗಿ ಅನೌಪಚಾರಿಕವಾಗಿರುತ್ತದೆ. ಇನ್ನೊಂದು ಕಾರಣವೆಂದರೆ ಬಡರಾಷ್ಟ್ರಗಳಲ್ಲಿ ಬಡತನ ಮುಖ್ಯವಾದ ಸಮಸ್ಯೆ. ವರಮಾನಕ್ಕಿಂತ, ಬಳಕೆಯ ಖರ್ಚನ್ನು ನೋಡಿದರೆ ಬಡತನದ ಹೆಚ್ಚು ಸ್ಪಷ್ಟವಾದ ಚಿತ್ರ



ಸಿಗುತ್ತದೆ.

ಭಾರತದಲ್ಲಿ ಗೃಹಬಳಕೆ ವೆಚ್ಚದ ಸಮೀಕ್ಷೆಯನ್ನು ೧೯೭೭ರಿಂದ ನಡೆಸಲಾಗುತ್ತಿದೆ. ನಮ್ಮ ಈಗಿನ ಸರ್ಕಾರಕ್ಕೆ ಸಮೀಕ್ಷೆಗಳ ಬಗ್ಗೆಯೇ ಅಂತಹ ಉತ್ಸಾಹವಿಲ್ಲ. ಸಮೀಕ್ಷೆಯ ವರದಿಗಳು ತಮಗೆ ಹಿತಕರವಾಗಿಲ್ಲದೇ ಹೋದರೆ ಅವನ್ನು ಪ್ರಕಟಿಸುವ ಗೋಜಿಗೆ ಹೋಗುವುದಿಲ್ಲ. ಕಳೆದ ಬಾರಿಯ ಬಳಕೆ ಖರ್ಚಿನ ಸಮೀಕ್ಷೆಯನ್ನು ಸರ್ಕಾರ ಪ್ರಕಟಿಸಲೇ ಇಲ್ಲ. ಹಲವು ಬಾರಿ ಸಮೀಕ್ಷೆಯನ್ನೂ ನಡೆಸುವುದಿಲ್ಲ. ಆದರೆ ಹಿಂದಿನ ಸರ್ಕಾರಗಳು ಒಪ್ಪಿಗೆಯಾಗದಿದ್ದರೂ ವರದಿಗಳನ್ನು ಪ್ರಕಟಿಸುತ್ತಿದ್ದವು. ವಾಜಪೇಯಿ ಸರ್ಕಾರ ಕೂಡ ತನಗೆ ಒಪ್ಪಿಗೆ ಇಲ್ಲದ ವರದಿಯನ್ನು ಪ್ರಕಟಿಸಿದ್ದ ಉದಾಹರಣೆ ಇದೆ. ಈಗ ಜನರ ಗೃಹಬಳಕೆಯ ಖರ್ಚಿಗೆ ಸಂಬಂಧಿಸಿದ ೨೦೨೨–೨೩ರ ಸಮೀಕ್ಷೆ ವರದಿ ಲಭ್ಯವಿದೆ. ಜಾಗತಿಕ ಬ್ಯಾಂಕ್ ತನ್ನ ಲೆಕ್ಕಾಚಾರಕ್ಕೆ ಆ ಮಾಹಿತಿಯನ್ನು ಬಳಸಿಕೊಂಡಿದೆ.

ನಮ್ಮಲ್ಲಿ ವರಮಾನದ ಸಮೀಕ್ಷೆಯನ್ನು ನಡೆಸುವುದಿಲ್ಲ. ಹಾಗಾಗಿ ಬಳಕೆಯ ಖರ್ಚನ್ನು ಆಧರಿಸಿ ಜಿನಿ ಗುಣಾಂಕವನ್ನು ಲೆಕ್ಕ ಹಾಕಲಾಗುತ್ತದೆ. ಮುಂದುವರಿದ ದೇಶಗಳಲ್ಲಿ ವರಮಾನವನ್ನು ಆಧರಿಸಿ ಅಸಮಾನತೆಯ ಗುಣಾಂಕವನ್ನು ಲೆಕ್ಕ ಹಾಕಲಾಗುತ್ತದೆ. ವರಮಾನವನ್ನು ಆಧರಿಸಿ ಲೆಕ್ಕ ಹಾಕಿದ ಜಿನಿ ಗುಣಾಂಕವು, ಗೃಹಬಳಕೆಯ ಖರ್ಚನ್ನು ಆಧರಿಸಿ ಲೆಕ್ಕ ಹಾಕಿದ ಜಿನಿ ಗುಣಾಂಕಕ್ಕಿಂತ ಹೆಚ್ಚಿಗೆ ಇರುತ್ತದೆ. ಸಾಮಾನ್ಯವಾಗಿ ಶೇಕಡ ೭ರಿಂದ ೧೪ರಷ್ಟು ಹೆಚ್ಚಿಗೆ ಇರುತ್ತದೆ. ಉದಾಹರಣೆಗೆ ಒಂದು ದೇಶದ ಬಳಕೆಯನ್ನು ಆಧರಿಸಿದ ಜಿನಿ ಸೂಚಿ ೫೦% ಇದ್ದರೆ ವರಮಾನವನ್ನು ಆಧ–ರಿಸಿರುವ ಅಸಮಾನತೆಯ ಸೂಚಿ ೫೭% ಇಂದ ೬೪% ಇರುತ್ತದೆ. ಇದಕ್ಕೆ ಕಾರಣವೂ ಸರಳ. ವರಮಾನದಲ್ಲಿ ಕೇವಲ ಖರ್ಚಷ್ಟೇ ಅಲ್ಲ, ಉಳಿತಾಯ ಇತ್ಯಾದಿ ಹಲವು ಅಂಶಗಳು ಸೇರಿರುತ್ತವೆ. ಖರ್ಚು ವರಮಾನದ ಕೇವಲ ಒಂದು ಭಾಗ. ಆದರೆ ಬಳಕೆಯ ಖರ್ಚನ್ನು ಗಮನಿಸುವಾಗ ಅದರಲ್ಲಿ ಉಳಿತಾಯ, ಇತ್ಯಾದಿ ಅಂಶಗಳು ಸೇ–ರಿರುವುದಿಲ್ಲ. ವರಮಾನ ಹೆಚ್ಚುತ್ತಾ ಹೋದಂತೆ ಉಳಿತಾಯದ ಪಾಲು ಹೆಚ್ಚುತ್ತದೆ ಹಾಗೂ ಖರ್ಚಿನ ಪಾಲು ಕಡಿಮೆಯಾಗುತ್ತಾ ಹೋಗುತ್ತದೆ. ಶ್ರೀಮಂತರ ಉಳಿತಾಯ ಸಹಜವಾಗಿಯೇ ಹೆಚ್ಚಿರುತ್ತದೆ. ಬಡವರು ಉಳಿತಾಯ ಮಾಡುವುದಕ್ಕೆ ಸಾಧ್ಯವೇ ಇರುವುದಿಲ್ಲ. ಹಾಗಾಗಿ ವರಮಾನವನ್ನು ಆಧರಿಸಿದ ಅಸಮಾನತೆಯ ಸೂಚಿ ಹೆಚ್ಚಿಗೆ ಇರುತ್ತದೆ. ಅದರಿಂದಾಗಿ ಈ ಎರಡು ಸೂಚಿಗಳನ್ನು ಹೋಲಿಸುವುದು ಸರಿಯಲ್ಲ

ಅನ್ನುವುದು ಎಲ್ಲರೂ ಒಪ್ಪಿಕೊಂಡಿರುವ ಸರಳ ಸತ್ಯ. ಜೊತೆಗೆ ಇಂತಹ ಸಮೀಕ್ಷೆಯಲ್ಲಿ ಅತಿ ಶ್ರೀಮಂತರ ಪ್ರಾತಿನಿಧ್ಯ ಕಡಿಮೆ ಇರುತ್ತದೆ. ಯಾಕೆಂದರೆ ಅತಿ ಶ್ರೀಮಂತರ ಸಂಖ್ಯೆ ಕಡಿಮೆ ಇರುತ್ತದೆ. ಸ್ಯಾಂಪಲ್ ತೆಗೆದುಕೊಂಡಾಗ ಕೆಲವರಷ್ಟೇ ಸಮೀಕ್ಷೆಯಲ್ಲಿ ಸೇರಿಕೊಳ್ಳುತ್ತಾರೆ. ಈ ನ್ಯೂನತೆಯನ್ನು ಸರಿಪಡಿಸುವುದಕ್ಕೆ ಸಂಶೋಧಕರು ಹಲವು ಕ್ರಮಗಳನ್ನು ಬಳಸುತ್ತಾರೆ. ಇಲ್ಲಿ ಅಂತಹ ಯಾವುದೇ ಕ್ರಮವನ್ನು ಬಳಸಿಲ್ಲ. ಜಿನಿ ಗುಣಾಂಕ ಕಮ್ಮಿಯಿರುವುದಕ್ಕೆ ಅದೂ ಒಂದು ಕಾರಣ.

ಅಸಮಾನತೆಯ ಅಳತೆಗೋಲಾಗಿ ಜಿನಿ ಗುಣಾಂಕದಲ್ಲೇ ಕೆಲವು ಸಮಸ್ಯೆಗಳಿವೆ. ಅಸಮಾನತೆ ಕಡಿಮೆಯಾಗುತ್ತಿರುವಾಗಲೇ ಹಸಿವಿನ ಸೂಚ್ಯಾಂಕ ಹೆಚ್ಚುತ್ತಿರುವುದನ್ನು ವಿವರಿಸುವುದು ಕಷ್ಟ. ಬಡವರ ಸ್ಥಿತಿ ಸುಧಾರಿಸುತ್ತಿದೆ ಅಂದರೆ ಹೆಚ್ಚಿನ ಆಹಾರ ಕೊಳ್ಳುವುದಕ್ಕೆ ಸಾಧ್ಯವಾಗಬೇಕಿತ್ತು. ಹಸಿವು ಕಮ್ಮಿಯಾಗಬೇಕಿತ್ತು. ಆದರೆ ಹಸಿವಿನ ಸೂಚಿಯಲ್ಲಿ ಭಾರತ ೧೨೫ ದೇಶಗಳ ಪೈಕಿ ೧೧೭ನೇ ಸ್ಥಾನದಲ್ಲಿದೆ. ಇದನ್ನೆಲ್ಲಾ ಜಿನಿ ಗುಣಾಂಕ ಬಳಸಿ ವಿವರಿಸುವುದಕ್ಕೆ ಸಾಧ್ಯವಿಲ್ಲ. ಥಾಮಸ್ ಪಿಕೆಟ್ಟಿಯವರ ಜಾಗತಿಕ ಅಸಮಾನತೆಯ ಡೇಟಾಬೇಸ್ ಹೇಳುವಂತೆ ಮೇಲಿನ ೧% ಶ್ರೀಮಂತರಿಗೆ ದೇಶದ ವರಮಾನದ ಶೇಕಡ ೨೫ರಷ್ಟು ಹೋಗುತ್ತಿದೆ. ಕಳೆದ ೧೦೦ ವರ್ಷದಲ್ಲಿ ಎಂದೂ ಈ ಪ್ರಾಮಾಣದ ಆದಾಯವನ್ನು ಅವರು ಗಳಿಸಿರಲಿಲ್ಲ. ಜಾಗತಿಕ ಬ್ಯಾಂಕ್ ಇದನ್ನು ತನ್ನ ವರದಿಯಲ್ಲಿ ಗಮನಿಸಿದೆ. ಜೊತೆಗೆ ಅಂಕಿಅಂಶದಲ್ಲಿ ಸಮಸ್ಯೆಯಿರುವ ಸಾಧ್ಯತೆಯ ಅರಿವು ಅದಕ್ಕಿದೆ. ವರ್ಲ್ಡ್ ಇನಿಕ್ವಾಲಿಟಿ ಡೇಟಾಬೇಸ್ ವರದಿಯನ್ನು ಉಲ್ಲೇಖಿಸುತ್ತಾ "೨೦೦೪ರಲ್ಲಿ ಗಿನಿ ಸೂಚ್ಯಂಕ ೫೨ ಇದ್ದುದು ೨೦೨೩ರಲ್ಲಿ ೬೨ ಆಗಿದೆ. ಹಾಗೆಯೇ, ಮೇಲಿನ ಶೇಕಡ ೧೦ರಷ್ಟು ಶ್ರೀಮಂತರ ಮಧ್ಯಮ ವರಮಾನ ಕೆಳಗಿನ ೧೦% ಜನರ ವರಮಾನಕ್ಕಿಂದ ೧೩ ಪಟ್ಟು ಹೆಚ್ಚಿದೆ." ಎಂಬ ಅಂಶವನ್ನೂ ವರದಿ ಹೇಳುತ್ತದೆ. ನಮ್ಮ ಮಾಧ್ಯಮಗಳು ಕನಿಷ್ಠ ಇದನ್ನೂ ಗಮನಿಸಬೇಕಿತ್ತು. ಆದರೆ ಅದು ಕೇವಲ "ಭಾರತದ ಬಳಕೆವೆಚ್ಚ ಆಧಾರಿತ ಜಿನಿ ಸೂಚಿ ೨೦೧೧–೧೨ರಲ್ಲಿ ೨೮.೮ ಇದ್ದುದು ೨೦೨೨–೨೩ರಲ್ಲಿ ೨೫.೫ಕ್ಕೆ ಇಳಿದಿದೆ." ಅನ್ನುವ ಹೇಳಿಕೆಯನ್ನಷ್ಟೇ ಹೆಕ್ಕಿಕೊಂಡಿದೆ.

ಒಂದಂಶ ಸ್ಪಷ್ಟ, ನಾವು ಎರಡು ದೇಶಗಳ ನಡುವೆ ಹೋಲಿಸುವಾಗ ಒಂದೇ ಅಳತೆಗೋಲನ್ನು ಬಳಸಬೇಕು. ವರಮಾನವನ್ನು ಆಧಾರವಾಗಿಟ್ಟುಕೊಳ್ಳಬೇಕು. ಅಥವಾ ಬಳಕೆಯ ಖರ್ಚನ್ನು ಆಧಾರವಾಗಿಟ್ಟುಕೊಳ್ಳಬೇಕು. ವರಮಾನಕ್ಕೆ ಸಂಬಂಧಿಸಿದಂತೆ ವರ್ಲ್ಡ್ ಇನಿಕ್ವಾಲಿಟಿ ಡೇಟಾಬೇಸ್ ಮಾಹಿತಿಯನ್ನು ನಿರಂತರವಾಗಿ ಪ್ರಕಟಿಸುತ್ತಿದೆ. ಅದರ ಪ್ರಕಾರ ನಮ್ಮಲ್ಲಿ ಅಸಮಾನತೆ ೧೯೯೦ರಿಂದ ನಿರಂತರವಾಗಿ ಹೆಚ್ಚುತ್ತಾ ಬಂದಿದೆ. ವರಮಾನದ ಜಿನಿ ಸೂಚಿಯನ್ನು ಗಮನಿಸಿದರೆ ಭಾರತ ೨೦೧೯ರಲ್ಲಿ ೨೧೬ ದೇಶಗಳ ಪೈಕಿ ೧೧೫ ಸ್ಥಾನದಲ್ಲಿತ್ತು. ೨೦೧೯ರಲ್ಲಿ ಅದು ೧೭೬ನೇ ಸ್ಥಾನದಲ್ಲಿದೆ. ಅಂದರೆ ಉಳಿದ ದೇಶಗಳಿಗೆ ಹೋಲಿಸಿದರೆ ಭಾರತ ಕ್ರಮೇಣ ಹೆಚ್ಚೆಚ್ಚು ಅಸಮಾನ ದೇಶವಾಗುತ್ತಿದೆ. ಸಂಪತ್ತಿನ ಅಸಮಾನತೆಯನ್ನು ನೋಡಿದರೆ ಭಾರತ ಇನ್ನೂ ಕೆಳಗೆ ಇದೆ.


ಜನ ಬಳಸುವ ಆಹಾರ ಧಾನ್ಯಗಳ ಪ್ರಮಾಣವನ್ನು ಕುರಿತ ಮಾಹಿತಿಯೂ ಇದೇ ಸಂಗತಿಯನ್ನು ಹೇಳುತ್ತದೆ. ಆಹಾರಕ್ಕಾಗಿ ಮಾಡುತ್ತಿರುವ ತಲಾ ಖರ್ಚಿನಲ್ಲಿ ಭಾರತ ೨೦೧೯ರಲ್ಲಿ ೧೮೫ ದೇಶಗಳ ಪೈಕಿ ೧೦೨ನೇ ಸ್ಥಾನದಲ್ಲಿತ್ತು. ೨೦೧೯ರಲ್ಲಿ ೮೨ನೇ ಸ್ಥಾನದಲ್ಲಿತ್ತು. ಹಾಗೆಯೇ ನಮ್ಮ ಜನರ ಕ್ಯಾಲೊರಿ ಬಳಕೆ ಕಡಿಮೆಯಾಗುತ್ತಿರುವುದನ್ನು ನೋಡಿದರೂ ಭಾರತೀಯರ ಕೊಳ್ಳುವ ಶಕ್ತಿ ಕ್ರಮೇಣ ಕಡಿಮೆಯಾಗುತ್ತಿರುವುದು ಸ್ಪಷ್ಟವಾಗುತ್ತದೆ. ಜಾಗತಿಕ ಬ್ಯಾಂಕ್ ವರದಿಯ ಬಗ್ಗೆ ಇರುವ ಇನ್ನೊಂದು ದೊಡ್ಡ ಟೀಕೆಯೆಂದರೆ ಅದು ಈ ಬಾರಿ ಹಲವು ಮಾರ್ಪಾಡುಗಳನ್ನೂ ಮಾಡಿಕೊಂಡಿದೆ. ಆದರೆ, ಈ ಮಾರ್ಪಾಡುಗಳೆಲ್ಲಾ ಭಾರತಕ್ಕೆ ಮಾತ್ರ ಸೀಮಿತವಾಗಿದೆ. ಹಿಮಾಂಶು ಅವರು ಗುರುತಿಸಿರುವಂತೆ ಈ ಬದಲಾವಣೆಗಳು ಬಹುತೇಕ ಅಸಮಾನತೆಯ ಗುಣಾಂಕದ ಮೌಲ್ಯ ತಗ್ಗುವುದಕ್ಕೆ ಕಾರಣವಾಗಿದೆ. ಹಿಮಾಂಶು ಅವರು ಹೇಳಿರುವಂತೆ ಎನ್‌ಎಸ್‌ಎಸ್‌ಓ ಗೃಹಬಳಕೆಯ ಖರ್ಚನ್ನು ಲೆಕ್ಕ ಹಾಕುವುದಕ್ಕೆ ಸರ್ಕಾರವು ನೀಡುವ ನೆರವನ್ನು ಸೇರಿಸುವುದಿಲ್ಲ. ಆದರೆ ಜಾಗತಿಕ ಬ್ಯಾಂಕ್ ಈ ಬಾರಿ ಸರ್ಕಾರ ಕೊಡುವ ಉಚಿತ ಸೌಲಭ್ಯಗಳನ್ನು ಅಂದರೆ ಪಡಿತರ ವ್ಯವಸ್ಥೆಯಲ್ಲಿ ವಿತರಿಸುವ ಧಾನ್ಯಗಳು ಇತ್ಯಾದಿಗಳನ್ನು ಸೇರಿಸಿಕೊಂಡಿದೆ. ಹಾಗೆಯೇ ಮಕ್ಕಳಿಗೆ ಉಚಿತವಾಗಿ ನೀಡುವ ಸಮವಸ್ತ್ರಗಳು, ಶೂ ಇವುಗಳೂ ಈ ಬಾರಿ ಸೇರ್ಪಡೆಯಾಗಿವೆ. ಇವೆಲ್ಲವನ್ನು ವೈಯಕ್ತಿಕ ಖರ್ಚಿನ ಪಟ್ಟಿಯಲ್ಲಿ ಸೇರಿಸಿರುವುದರಿಂದ ಬಡವರ ಖರ್ಚಿನ ಲೆಕ್ಕ ಹೆಚ್ಚುತ್ತದೆ. ಜೊತೆಗೆ ಶ್ರೀಮಂತರು ಬಳಸುವ ವಸ್ತುಗಳಾದ ಚಿನ್ನದ ಆಭರಣಗಳು, ವಾಚುಗಳು ಇವೆಲ್ಲವನ್ನು ಬಾಳಿಕೆಯ ವಸ್ತುಗಳು ಅನ್ನುವ ಕಾರಣಕ್ಕೆ ಪಟ್ಟಿಯಿಂದ ಕೈಬಿಡಲಾಗಿದೆ. ಹಾಗೆಯೇ ಆಸ್ಪತ್ರೆ ವೆಚ್ಚ, ಬಾಡಿಗೆ ಇವೆಲ್ಲವನ್ನು ಕೈ ಬಿಡಲಾಗಿದೆ. ಇವೆಲ್ಲಾ ಜನರ ಯೋಗಕ್ಷೇಮವನ್ನು ಹೆಚ್ಚಿಸುವುದಿಲ್ಲ ಅನ್ನುವ ವಿಚಿತ್ರ ತರ್ಕವನ್ನು ಮುಂದಿಟ್ಟಿದೆ. ಇಂತಹ ಕೆಲವು ಖರ್ಚುಗಳನ್ನು ಕೈಬಿಟ್ಟಿರುವುದರಿಂದ ಶ್ರೀಮಂತರ ಖರ್ಚು ಕಡಿಮೆಯಾಗಿ ಕಾಣುತ್ತದೆ. ಒಂದೆಡೆ ಬಡವರ ಖರ್ಚು ಹೆಚ್ಚಾಗಿ ದಾಖಲಾಗಿದೆ. ಇನ್ನೊಂದೆಡೆ ಶ್ರೀಮಂತರ ಖರ್ಚು ಕಡಿಮೆಯಾಗಿ ಬಿಂಬವಾಗುತ್ತಿದೆ. ಅಂತಿಮವಾಗಿ ಅಸಮಾನತೆ ಕಡಿಮೆ ಇರುವಂತೆ ತೋರುತ್ತದೆ.

ಎನ್‌ಎಸ್‌ಎಸ್‌ಓ ಮಾಹಿತಿಯನ್ನು ಆಧರಿಸಿ ಲೆಕ್ಕ ಹಾಕಿದರೆ ಜಿನಿ ಸೂಚಿ ೨೯.೫ ಅಗುತ್ತದೆ. ಆದರೆ ಜಾಗತಿಕ ಬ್ಯಾಂಕ್ ಮಾಡಿಕೊಂಡಿರುವ ಬದಲಾವಣೆಗಳಿಂದಾಗಿ ಅವರ ಲೆಕ್ಕಾಚಾರದ ಪ್ರಕಾರ ೨೫.೫ ಆಗಿದೆ ಅಂದರೆ ಶೇಕಡ ೪ರಷ್ಟು ಕಡಿಮೆಯಾಗಿದೆ. ೨೯.೫ನ್ನು ಅಸಮಾನತೆಯ ಸೂಚಿಯಾಗಿ ತೆಗೆದುಕೊಂಡರೆ ನಾವು ಪಾಕಿಸ್ತಾನ, ಚೀನಾ, ನೇಪಾಳ ಇತ್ಯಾದಿ ದೇಶಗಳ ಸಮದಲ್ಲೇ ಇದ್ದೇವೆ. ಭೂತಾನ್ ನಮಗಿಂತ ಉತ್ತಮ ಸ್ಥಿತಿಯಲ್ಲಿದೆ.

ಭಾರತದ ವಿಷಯದಲ್ಲಿ ಜಾಗತಿಕ ಬ್ಯಾಂಕ್ ಯಾಕೆ ಈ ರಿಯಾಯಿತಿ ತೋರಿದೆ ಅನ್ನುವುದು ತಿಳಿಯುವುದಿಲ್ಲ. ಜೊತೆಗೆ ಇದು ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಯಾವ ವಸ್ತುಗಳನ್ನು ಸೇರಿಸಬೇಕು, ಯಾವುದನ್ನು ಬಿಡಬೇಕು ಅನ್ನುವುದನ್ನು ನಿರ್ಧರಿಸುವುದು ಹೇಗೆ, ಅನ್ನುವ ಪ್ರಶ್ನೆ ಬರುತ್ತದೆ. ಅಂದರೆ ಸಮವಸ್ತ್ರ, ಹಾಗೂ ಶೂಗಳನ್ನು ಸೇರಿಸಲಾಗಿದೆ. ಲ್ಯಾಪ್‌ಟಾಪ್, ಸೈಕಲ್ ಇವನ್ನೆಲ್ಲಾ ಸೇರಿಸಿಲ್ಲ. ಒಂದು ವಸ್ತುವನ್ನು ಸೇರಿಸುವುದಕ್ಕೆ ಇನ್ನೊಂದು ಬಿಡುವುದಕ್ಕೆ ಆಧಾರವೇನು ಅನ್ನುವ ಪ್ರಶ್ನೆ ಬರುತ್ತದೆ. ಹಾಗೆಯೇ ಸರ್ಕಾರದ ಖರ್ಚನ್ನು ವೈಯಕ್ತಿಕ ಖರ್ಚಿನಲ್ಲಿ ಸೇರಿಸುವುದು ಎಷ್ಟು ಸರಿ ಅನ್ನುವ ಪ್ರಶ್ನೆಯೂ ಬರುತ್ತದೆ. ಜೊತೆಗೆ ನಮ್ಮದೇ ಸಂಸ್ಥೆ ಇಷ್ಟು ಕಾಲದಿಂದ ಅನುಸರಿಸಿಕೊಂಡು ಬಂದಿರುವ ಕ್ರಮವನ್ನು ತಿರಸ್ಕರಿಸಿ, ಇನ್ನೊಂದು ಸಂಸ್ಥೆಯ ವಿವಾದಾತ್ಮಕವಾದ ಕ್ರಮವನ್ನು ಆತುಕೊಳ್ಳುವುದು ಒಳ್ಳೆಯ ಬೆಳವಣಿಗೆಯಲ್ಲ.

ಒಟ್ಟಾರೆಯಾಗಿ ಈ ಪ್ರಕ್ರಿಯೆಯಲ್ಲಿ ಜಾಗತಿಕ ಬ್ಯಾಂಕ್ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ. ಅದನ್ನು ಮೆಚ್ಚಿಕೊಳ್ಳುವ ಮೂಲಕ ಸರ್ಕಾರ ನಮ್ಮ ಸಾಂಖ್ಯಿಕ ಸಂಸ್ಥೆಯ ಮೌಲ್ಯವನ್ನು ಕಡೆಗಣಿಸಿದೆ. ಇಂತಹ ಮಾಹಿತಿಯನ್ನು ನಮ್ಮ ಮುಖ್ಯವಾಹಿನಿಯ ಸುದ್ದಿ ಮಾಧ್ಯಮಗಳು ಪರಿಶೀಲಿಸುವ ಗೋಜಿಗೂ ಹೋಗದೆ ನಮ್ಮ ಜನರಲ್ಲಿ ಭ್ರಮೆಯನ್ನು ಸೃಷ್ಟಿಸುತ್ತಿವೆ. ಇಂತಹ ಸುದ್ದಿಗಳಿಂದ ಬಡವರ ಬಾಳು ಹಸನಾಗುವುದಿಲ್ಲ. ಸಂಪತ್ತು ಹಾಗೂ ವರಮಾನದ ಮರುಹಂಚಿಕೆಗೆ ಬೇಕಾದ ಕ್ರಮಗಳನ್ನು ಸರ್ಕಾರಗಳು ತೆಗೆದುಕೊಳ್ಳಬೇಕು.

.



ಪುಸ್ತಕ ಪರಿಚಯ

ಇತ್ತೀಚಿನ ದಿನಗಳಲ್ಲಿ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಲವು ಅಧ್ಯಯನಗಳು ಪ್ರಕಟವಾಗುತ್ತಿವೆ. ಹೊಸ ಹೊಸ ಪುಸ್ತಕಗಳು ಪ್ರಕಟವಾಗುತ್ತಿವೆ. ಹಲವು ಒಳನೋಟಗಳನ್ನು ಕೊಡುತ್ತಿವೆ. ಹಾಗೆ ಕ್ಯಾಲಿಫೋರ್ನಿಯದ ಸ್ಯಾನ್ ಡಿಯಾಗೊ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಕಾರ್ತಿಕ್ ಮುರಳಿಧರನ್ ಅವರ ಪುಸ್ತಕ ಅಕ್ಸೆಲರೇಟಿಂಗ್ ಇಂಡಿಯಾಸ್ ಡೆವಲಪ್‌ಮೆಂಟ್ ಸಾಕಷ್ಟು ಚರ್ಚೆಯಾಗುತ್ತಿದೆ. ೮೦೦ ಪುಟಗಳ ಬೃಹತ್ ಪುಸ್ತಕ. ರೆಫರೆನ್ಸ್ ಹಾಗೂ ಟಿಪ್ಪಣಿಯೇ ೨೦೦ ಪುಟಕ್ಕೂ ಹೆಚ್ಚಿದೆ. ಕೇಂದ್ರ ಹಾಗೂ ಹಲವು ರಾಜ್ಯ ಸರ್ಕಾರಗಳಲ್ಲಿ ನೀತಿಯನ್ನು ರೂಪಿಸುವಲ್ಲಿ ತೊಡಗಿಸಿಕೊಂಡ ಅನುಭವ ಇದೆ. ಮೊದಲ ಅಧ್ಯಾಯವನ್ನು ಸಂಕ್ಷಿಪ್ತವಾಗಿ ಇಲ್ಲಿ ಪರಿಚಯಿಸಲಾಗಿದೆ. ಮುಂದಿನ ಸಂಚಿಕೆಗಳಲ್ಲಿ ಉಳಿದ ಅಧ್ಯಾಯಗಳನ್ನು ಪರಿಚಯಿಸಲಾಗುತ್ತದೆ.

ಅಕ್ಸೆಲರೇಟಿಂಗ್ ಇಂಡಿಯಾಸ್ ಡೆವಲಪ್‌ಮೆಂಟ್

ಸಾರ್ವಜನಿಕ ಸೇವೆ ಪರಿಣಾಮಕಾರಿಯಾಗಬೇಕು

ಭಾರತ ಆರ್ಥಿಕವಾಗಿ ಬಲಾಢ್ಯ ರಾಷ್ಟ್ರವಾಗಲಿದೆ ಎಂದು ಸಂಭ್ರಮಿಸುವುದಕ್ಕೆ ಕಾರಣಗಳು ಇರುವಂತೆಯೇ, ನಮ್ಮ ಆರ್ಥಿಕತೆಯಲ್ಲಿ ಗಂಭೀರವಾದ ಸಮಸ್ಯೆಗಳಿವೆ ಎಂದು ಆತಂಕಗೊಳ್ಳುವುದಕ್ಕೂ ಕಾರಣಗಳಿವೆ. ಈ ಕುರಿತು ನಮ್ಮ ದೇಶದ ಆರ್ಥಿಕತೆಯ ಬಗ್ಗೆ ಅಪಾರ ಕಾಳಜಿಯುಳ್ಳ ಹಲವು ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದಾರೆ. ನಮ್ಮ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಹಲವು ಸಲಹೆಗಳನ್ನೂ ನೀಡುತ್ತಾ ಬಂದಿದ್ದಾರೆ. ಉದಾಹರಣೆಗೆ, ಇತ್ತೀಚೆಗೆ ಕಾರ್ತಿಕ್ ಮುರಳಿಧರನ್ ತಮ್ಮ ಇಪ್ಪತ್ತೈದು ವರ್ಷಗಳ ಸಂಶೋಧನೆಯನ್ನು ಅಕ್ಸಿಲರೇಟಿಂಗ್ ಇಂಡಿಯಾಸ್ ಡೆವಲಪ್‌ಮೆಂಟ್ ಕೃತಿಯ ಮೂಲಕ ನಮ್ಮ ಮುಂದಿಟ್ಟಿದ್ದಾರೆ. ಮುರಳಿಧರನ್ ಹೇಳುವಂತೆ ಸ್ವಾತಂತ್ರ್ಯ ಬಂದಾಗ ಭಾರತದ ಸ್ಥಿತಿ ತೀರಾ ಕೆಟ್ಟದಾಗಿತ್ತು. ಹಲವರು ಇಂಡಿಯಾ ಒಟ್ಟಿಗೆ ಉಳಿಯುತ್ತಾ ಅಂತ ಅನುಮಾನವನ್ನೂ ವ್ಯಕ್ತಪಡಿಸಿದ್ದರು. ಅದರೆ ಇಂಡಿಯಾ ಒಟ್ಟಾಗಿ ಉಳಿದಿದೆ. ನಿರೀಕ್ಷೆಯನ್ನು ಮೀರಿ ಅಭಿವೃದ್ಧಿಯನ್ನೂ ಸಾಧಿಸಿದೆ. ನಮ್ಮ ದೇಶದ ಸಂವಿಧಾನ ೭೫ ವರ್ಷ ಉಳಿದುಕೊಂಡಿದೆ. ಇದು ನಿಜವಾಗಿ ಹೆಮ್ಮೆ ಪಡಬೇಕಾದ ವಿಷಯ. ಜೊತೆಗೆ ಆರ್ಥಿಕವಾಗಿಯೂ ಸುಧಾರಣೆಯಾಗಿದೆ. ಬಡತನ, ಹಸಿವು ಇವೆಲ್ಲಾ ಸ್ವಲ್ಪವಾದರೂ ಕಡಿಮೆಯಾಗಿದೆ. ೧೯೪೭ರಲ್ಲಿ ಶೇಕಡ ೭೦ರಷ್ಟಿದ್ದ ದಾರಿದ್ರ್ಯ ೨೦೧೧ರ ವೇಳೆಗೆ ೨೧.೯%ಗೆ ಬಂದಿದೆ. ಖಾಸಗಿ ಕ್ಷೇತ್ರವೂ ಗಣನೀಯವಾಗಿ ಬೆಳೆದಿದೆ.

ಆಡಳಿತದಲ್ಲೂ ಸಾಕಷ್ಟು ಸುಧಾರಣೆಗಳಾಗಿವೆ. ಜಗತ್ತಿನಲ್ಲೇ ದೊಡ್ಡ ಪ್ರಮಾಣದ ಚುನಾವಣೆಯನ್ನು ಯಶಸ್ವಿಯಾಗಿ ನಡೆಸುತ್ತಿದ್ದೇವೆ. ಕುಂಭಮೇಳದಂತಹ ದೊಡ್ಡ ಮೇಳಗಳನ್ನು ಆಚರಿಸಿಬಿಡುತ್ತೇವೆ. ಆದರೆ ನಮ್ಮ ಯಶಸ್ಸು ಆಗೊಮ್ಮೆ ಈಗೊಮ್ಮೆ ನಡೆಯುವ ಬೃಹತ್ ಕಾರ್ಯಕ್ರಮಗಳಿಗೆ ಸೀಮಿತವಾಗಿದೆ. ದಿನನಿತ್ಯ ಒದಗಿಸಬೇಕಾದ ಶಿಕ್ಷಣ, ಆರೋಗ್ಯ, ರಕ್ಷಣೆ, ನ್ಯಾಯ ಇತ್ಯಾದಿ ಮೂಲಭೂತ ಸಾರ್ವಜನಿಕ ಸೇವೆಗಳನ್ನು ಪರಿಣಾಮಕಾರಿಯಾಗಿ ಜನರಿಗೆ ಸಿಗುವಂತೆ ಮಾಡುವಲ್ಲಿ ಆ ಮಟ್ಟಿನ ಯಶಸ್ಸು ಸಾಧ್ಯವಾಗಿಲ್ಲ. ಶಿಕ್ಷಣವನ್ನು ಗಮನಿಸಿ. ವರ್ಷಕ್ಕೆ ೭.೫ ಲಕ್ಷ ಕೋಟಿ ರೂಪಾಯಿಗಳನ್ನು ಅದಕ್ಕಾಗಿ ಹೂಡುತ್ತಿದ್ದೇವೆ. ೯೦% ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಆದರೆ ಶೇಕಡ ೫೦ಕ್ಕೂ ಹೆಚ್ಚು ಮಕ್ಕಳಿಗೆ ಓದುವ ಸಾಮರ್ಥ್ಯ ಬಂದಿಲ್ಲ. ಅವರಿಗೆ ಆಧುನಿಕ ಆರ್ಥಿಕತೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆರೋಗ್ಯದ ವಿಷಯಕ್ಕೆ ಬಂದರೆ ಪೌಷ್ಟಿಕಾಂಶದ ಕೊರತೆಯಿಂದ ಬಳಲುತ್ತಿರುವವರ ಸಂಖ್ಯೆ ೨೫%ಗಿಂತ ಹೆಚ್ಚಿಗೆ ಇದೆ. ೬೦೦ ಲಕ್ಷ ಮಕ್ಕಳ ಬೆಳವಣಿಗೆ ಕುಂಠಿತವಾಗಿದೆ. ಅರೋಗ್ಯ ವ್ಯವಸ್ಥೆ ಶೇಕಡ ೬೦ಕ್ಕಿಂತ ಹೆಚ್ಚು ಖಾಸಗಿಯವರ ಕೈಯಲ್ಲಿದೆ. ಪರಿಸರ ಹದಗೆಟ್ಟು ಜನರ ಆರೋಗ್ಯವನ್ನು ಇನ್ನಷ್ಟು ಹಾಳು ಮಾಡುತ್ತಿದೆ. ಜಗತ್ತಿನಲ್ಲಿ ಅತ್ಯಂತ ಹೆಚ್ಚು ಮಾಲಿನ್ಯಗೊಂಡಿರುವ ೧೫ ನಗರಗಳಲ್ಲಿ ೧೩ ನಗರಗಳು ಭಾರತದಲ್ಲಿವೆ.

ಸಾರ್ವಜನಿಕ ಸುರಕ್ಷತೆ ಸರ್ಕಾರದ ಮೂಲ ಕರ್ತವ್ಯ. ನಡೆಯುವ ಬಹುತೇಕ ಅಪರಾಧಗಳು ವರದಿಯೂ ಆಗುವುದಿಲ್ಲ. ಹೆಚ್ಚೆಂದರೆ ಶೇಕಡ ೧೦ರಿಂದ ೧೫ರಷ್ಟು ಅಪರಾಧಗಳು ವರದಿಯಾಗುತ್ತಿವೆ. ನ್ಯಾಯಾಲಯಗಳಲ್ಲಿ ಇನ್ನೂ ಇತ್ಯರ್ಥವಾಗದಿರುವ ಪ್ರಕರಣಗಳು ೩೦೦ ಲಕ್ಷಕ್ಕೂ ಹೆಚ್ಚು ಇವೆಯಂತೆ. ಜೊತೆಗೆ ಪ್ರತಿವರ್ಷ ೧೦ ಲಕ್ಷ



ಪ್ರಕರಣಗಳು ಸೇರ್ಪಡೆಯಾಗುತ್ತಿವೆ.

ಮೂಲಭೂತ ಸೌಕರ್ಯ ಒದಗಿಸುವಲ್ಲಿ ಸರ್ಕಾರ ವಿಫಲವಾದಾಗ ಹೆಚ್ಚು ತೊಂದರೆಗೆ ಒಳಗಾಗುವವರು ಬಡವರು. ಅವರು ಬಹುತೇಕ ಸೌಲಭ್ಯಗಳಿಗೆ ಸರ್ಕಾರವನ್ನು ನೆಚ್ಚಿಕೊಂಡಿರುತ್ತಾರೆ. ಆದರೆ ಗುಣಮಟ್ಟದ ಸೌಕರ್ಯವನ್ನು ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸುವ ಅಥವಾ ಪ್ರಭಾವಿಸುವ ಸಾಮರ್ಥ್ಯ ಅವರಿಗೆ ಇರುವುದಿಲ್ಲ. ಹಾಗಾಗಿ ಸರ್ಕಾರ ವಿಫಲವಾದಾಗ ಅಪಾರ ಹಣ ತೆತ್ತು ಖಾಸಗಿಯವರಿಂದ ಆ ಸೌಲಭ್ಯಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಸರ್ಕಾರದ ವೈಫಲ್ಯಕ್ಕೆ ಹಣದ ಕೊರತೆ ಕಾರಣವಲ್ಲ. ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕೆ ಬೇಕಾದ ಸಾಮರ್ಥ್ಯ ಸರ್ಕಾರಕ್ಕೆ ಇಲ್ಲ. ಈ ಆಡಳಿತಾತ್ಮಕ ದುರ್ಬಲತೆಯಿಂದಾಗಿ ಸರ್ಕಾರಕ್ಕೆ ತನ್ನ ವೆಚ್ಚಕ್ಕೆ ಅನುಗುಣವಾಗಿ ಅಪೇಕ್ಷಿತ ಪರಿಣಾಮವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರದ ಸಾಮರ್ಥ್ಯ ವೃದ್ಧಿಯಾಗದೇ ಹೋದರೆ ಈ ಸಮಸ್ಯೆಯಿಂದ ಹೊರಬರಲಾಗುವುದಿಲ್ಲ. ನಾವು ಇಂದೂ ೧೯೫೦ರಲ್ಲಿ ಚಾಲು ಮಾಡಿದ ವಾಹನದಲ್ಲೇ ಕುಳಿತು ಉನ್ನತ ಬದುಕನ್ನು ನಿರೀಕ್ಷಿಸುತ್ತಾ ಸಾಗುತ್ತಿದ್ದೇವೆ. ಈಗ ಅದರ ಕಾರ್ಯಕ್ಷಮತೆ ಕಡಿಮೆಯಾಗಿದೆ. ನೀವು ಇಂಧನದ ಮೇಲೆ ಎಷ್ಟೇ ಹಣ ಚೆಲ್ಲಿದರೂ ನಿರೀಕ್ಷಿತ ಪರಿಣಾಮ ಸಿಗುವುದಿಲ್ಲ. ವಾಹನದ ಕಾರ್ಯಕ್ಷಮತೆಯನ್ನು ಹೆಚ್ಚಿಸಬೇಕು ಅನ್ನುವುದು ಕಾರ್ತಿಕ್ ಅವರ ವಾದ.

ಬಹುತೇಕ ದೇಶಗಳಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಅಸ್ತಿತ್ವಕ್ಕೆ ಬರುವುದು ಆರ್ಥಿಕ ಬೆಳವಣಿಗೆ ಒಂದು ಮಟ್ಟವನ್ನು ತಲುಪಿದ ಮೇಲೆ. ಆದರೆ ಭಾರತದಲ್ಲಿ ಅಂತಹ ಬೆಳವಣಿಗೆಗೆ ಮೊದಲೇ ಪ್ರಜಾತಂತ್ರ ಸಾಧ್ಯವಾಯಿತು. ಸ್ವಾತಂತ್ರ ಸಿಕ್ಕ ದಿನವೇ ಮತದಾನದ ಹಕ್ಕು ಎಲ್ಲರಿಗೂ ಸಿಕ್ಕಿತು. ಅದು ನೈತಿಕವಾಗಿ ದೊಡ್ಡ ಸಾಧನೆ. ಹೆಗ್ಗಳಿಕೆಯ ವಿಷಯ. ಅಷ್ಟೇ ಅಲ್ಲ, ಆರ್ಥಿಕ ಬೆಳವಣಿಗೆಗೆ ಕಾಯದೆ ಜನಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಭಾರತದಲ್ಲಿ ಇನ್ನೂ ತಲಾ ವಾರ್ಷಿಕ ವರಮಾನ ೧೨೦೦ ಡಾಲರ್ ಇದ್ದಾಗಲೇ ಸಾರ್ವಜನಿಕ ಪಡಿತರ ಪದ್ಧತಿ ಪ್ರಾರಂಭವಾಯಿತು. ಅಮೇರಿಕೆಯಲ್ಲಿ ಆಹಾರದ ಸೌಲಭ್ಯ ಕಲ್ಪಿಸುವಾಗ ಅಲ್ಲಿಯ ತಲಾವರಮಾನ ಇದರ ೧೫ ಪಟ್ಟು ಇತ್ತು. ಇದು ನೈತಿಕವಾಗಿ ದೊಡ್ಡ ಸಾಧನೆ ಎನ್ನುವುದು ನಿಜ.

ದಿನ ಕಳೆದಂತೆ ಸರ್ಕಾರದಿಂದ ಜನರ ನಿರೀಕ್ಷೆ ಹೆಚ್ಚುತ್ತಾ ಹೋಯಿತು. ಪರಿಣಾಮವಾಗಿ ಜವಾಬ್ದಾರಿಯೂ ಹೆಚ್ಚುತ್ತಾ ಹೋಯಿತು. ಪ್ರಾರಂಭದಲ್ಲಿ ದೇಶದ ಗಡಿಯನ್ನು ಹಾಗೂ ಅಂತರಿಕ ಕಾನೂನು ವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದು ಮುಖ್ಯವಾಗಿತ್ತು. ರಾಷ್ಟ್ರ ನಿರ್ಮಾಣದ ಕನಸು ಹೊಂದಿದ್ದ ಆಗಿನ ಸರ್ಕಾರಕ್ಕೆ, ಕೈಗಾರಿಕೆಗಳನ್ನು ನಿರ್ಮಿಸುವುದು, ಉನ್ನತ ಶಿಕ್ಷಣ ಹಾಗೂ ತಾಂತ್ರಿಕ ಔತ್ತಮ್ಯವನ್ನು ಸಾಧಿಸುವುದು, ಸರ್ಕಾರಿ ವ್ಯವಸ್ಥೆಯನ್ನು ನಿರ್ಮಿಸುವುದು ಆದ್ಯತೆಯ ವಿಷಯವಾಗಿತ್ತು. ಕ್ರಮೇಣ ಮೂಲಭೂತ ಸೌಕರ್ಯವನ್ನು ಒದಗಿಸುವುದು, ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವುದು, ಆರ್ಥಿಕ ಚಟುವಟಿಕೆಗಳನ್ನು ಹಾಗೂ ಉದ್ದಿಮೆಗಳನ್ನು ನಿಯಂತ್ರಿಸುವುದು, ಸಾರ್ವಜನಿಕ ಸೇವೆಯನ್ನು ಒದಗಿಸುವುದು, ಸಮಾನತೆ ಹಾಗೂ ಸಾಮಾಜಿಕ ನ್ಯಾಯ ಒದಗಿಸುವುದು ಇವೆಲ್ಲಾ ಸರ್ಕಾರದ ಜವಾಬ್ದಾರಿಗಳಾಗುತ್ತಾ ಬಂದವು. ಸರ್ಕಾರದ ಗುರಿಯ ವ್ಯಾಪ್ತಿ ಹಿಗ್ಗುತ್ತಾ ಹೋಯಿತು. ಆದರೆ ಅದಕ್ಕೆ ತಕ್ಕಂತೆ ಅದನ್ನು ಈಡೇರಿಸಲು ಬೇಕಾದ ಸಾಮರ್ಥ್ಯ ಹೆಚ್ಚಲಿಲ್ಲ. ರಾಜಕೀಯ ಸ್ವಾತಂತ್ರ್ಯ ಜನರ ನಿರೀಕ್ಷೆಯನ್ನು ಹೆಚ್ಚಿಸಿತು. ಅದನ್ನು ಪೂರೈಸಬೇಕಾದ ಒತ್ತಡ ಸರ್ಕಾರಕ್ಕೆ ಹೆಚ್ಚುತ್ತಾ ಹೋಯಿತು. ಆದರೆ ಅದಕ್ಕೆ ಬೇಕಾದ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ರಾಜಕೀಯ ಒತ್ತಾಯವಾಗಲಿ, ಉತ್ತೇಜನವಾಗಲಿ ಇರಲಿಲ್ಲ. ನಿರೀಕ್ಷೆಗೆ ತಕ್ಕಂತೆ ಸಾಮರ್ಥ್ಯ ಬೆಳೆಯಲಿಲ್ಲ. ಇದು ಸರ್ಕಾರದ ಸಾಮರ್ಥ್ಯವನ್ನು ಇನ್ನಷ್ಟು ಕುಗ್ಗಿಸುತ್ತದೆ. ಭಾರ ಎತ್ತುವವರು ತಮ್ಮ ದೇಹದ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಾ ಅದಕ್ಕೆ ತಕ್ಕಂತೆ ಭಾರದ ಪ್ರಮಾಣವನ್ನು ಹೆಚ್ಚಿಸಿಕೊಳ್ಳಬೇಕು. ಇಲ್ಲದೇ ಹೋದರೆ ದೇಹಕ್ಕೆ ನೋವಾಗುತ್ತದೆ. ಜನರ ನಿರೀಕ್ಷೆಗೆ ಸ್ಪಂದಿಸದೇ ಹೋದಾಗ ಸರ್ಕಾರದ ಮೇಲಿನ ವಿಶ್ವಾಸ ಕಡಿಮೆಯಾಗುತ್ತದೆ. ಜನರಿಂದ ಸರ್ಕಾರದ ಕಾರ್ಯಕ್ರಮಗಳಿಗೆ ಬೆಂಬಲ ಸಿಗುವುದಿಲ್ಲ. ಇದು ಒಟ್ಟಾರೆ ಸರ್ಕಾರದ ಆಡಳಿತದ ಮೇಲೆ ಪರಿಣಾಮ ಬೀರುತ್ತದೆ.

ಸರ್ಕಾರಕ್ಕೆ ಜನರ ಬೆಂಬಲ ವ್ಯಕ್ತವಾಗುವುದು ಚುನಾವಣೆಗಳಲ್ಲಿ. ಪ್ರಾರಂಭದಲ್ಲಿ ಮತದಾರರನ್ನು ಒಲೈಸುವ ಅವಶ್ಯಕತೆ ಸರ್ಕಾರಕ್ಕೆ ಇರಲಿಲ್ಲ. ಆಗಿನ ಬಹುತೇಕ ನಾಯಕರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಕಾಂಗ್ರೆಸ್ ಬಗ್ಗೆ ಜನರಿಗೆ ವಿಶೇಷ ಗೌರವವಿತ್ತು. ಚುನಾವಣೆಯಲ್ಲಿ ಗೆಲುವು ದೊಡ್ಡ ವಿಷಯವಾಗಿರಲಿಲ್ಲ. ನಂತರದ ದಿನಗಳಲ್ಲಿ ಕಾಂಗ್ರೆಸ್ ಒಡೆಯಿತು. ಹಲವು ಪ್ರಾಂತೀಯ ಪಕ್ಷಗಳು ಹುಟ್ಟಿಕೊಂಡವು. ಚುನಾವಣೆಯ ಸ್ಪರ್ಧೆ ಹೆಚ್ಚಿತು. ಚುನಾವಣಾ ಲೆಕ್ಕಾಚಾರ ಸರ್ಕಾರದ ನೀತಿಗಳನ್ನು ಪ್ರಭಾವಿಸುವುದಕ್ಕೆ ಪ್ರಾರಂಭಿಸಿತು. ಕಣ್ಣಿಗೆ ಕಾಣುವ ಕಾರ್ಯಕ್ರಮಗಳು ಮುನ್ನೆಲೆಗೆ ಬರತೊಡಗಿದವು. ಶಾಲೆ ಕಟ್ಟಡದ ನಿರ್ಮಾಣ, ಮಕ್ಕಳ ಕಲಿಕೆಗಿಂತ ಮುಖ್ಯವಾಯಿತು. ಸರ್ಕಾರದ ನೀತಿಗಳನ್ನು ರಾಜಕೀಯ ಲೆಕ್ಕಾಚಾರ ನಿರ್ಧರಿಸತೊಡಗಿತು.

ನಮ್ಮಲ್ಲಿ ಹೆಚ್ಚು ಮತ ಪಡೆದವರು ಚುನಾವಣೆಯಲ್ಲಿ ಗೆಲ್ಲುತ್ತಾರೆ. ೫೦% ಮತದಾನವಾಗುತ್ತದೆ ಅಂದುಕೊಂಡರೆ, ಅದರಲ್ಲಿ ಗೆದ್ದವನಿಗೆ ೪೦% ಮತ ಬಂದಿದ್ದರೆ ಒಟ್ಟಾರೆ ಮತಗಳಲ್ಲಿ ಗೆದ್ದವನಿಗೆ ಸಿಕ್ಕಿರುವುದು ಕೇವಲ ೨೦% ಮತ. ಅಂದರೆ ಒಟ್ಟು ಮತದಾರರಲ್ಲಿ ಶೇಕಡ ೨೦ರಿಂದ ೩೦ ಮತ ಪಡೆದವರು ಚುನಾವಣೆಯಲ್ಲಿ ಗೆಲ್ಲಬಹುದು. ಅಂದರೆ ಇಡೀ ಮತದಾರರನ್ನು ತೃಪ್ತಿಪಡಿಸುವ ಅವಶ್ಯಕತೆ

ಇಲ್ಲ. ಕೇವಲ ೩೦% ಮತದಾರರು ಅಭ್ಯರ್ಥಿಯನ್ನು ಬಲವಾಗಿ ಸಮರ್ಥಿಸಿದರೆ ಸಾಕು. ಈ ಬೆಳವಣಿಗೆಯಿಂದ ತಮ್ಮ ಸಮರ್ಥಕರನ್ನು ಒಲೈಸುವ, ಉಳಿಸಿಕೊಳ್ಳುವ ಓಟ್‌ಬ್ಯಾಂಕ್ ರಾಜಕೀಯ ಇಂದು ವ್ಯಾಪಕವಾಗಿದೆ. ಇದಕ್ಕೆ ಜಾತಿ, ಧರ್ಮ, ಭಾಷೆ ಏನೇ ಬೇಕಾದರೂ ಆಧಾರವಾಗಿರಬಹುದು. ಹಾಗಾಗಿ ಸರ್ಕಾರ ತನ್ನಲ್ಲಿರುವ ಮಿತವಾದ ಸಂಪನ್ಮೂಲವನ್ನು ತನ್ನ ಬೆಂಬಲಿಗರಿಗೆ ನೇರವಾಗಿ ವರ್ಗಾಯಿಸಿ ಅವರ ಮತಗಳನ್ನು ಗಟ್ಟಿ ಮಾಡಿಕೊಳ್ಳುವ ಕಡೆ ಗಮನಕೊಡುತ್ತದೆ. ಜನರೂ ತಮ್ಮ ಹಿತಾಸಕ್ತಿಯನ್ನು ಕಾಪಾಡುವ ಪ್ರತಿನಿಧಿಗಳನ್ನು ಬಯಸುತ್ತಾರೆ. ಹಾಗಾಗಿ ಒಟ್ಟಾರೆ ಸರ್ಕಾರದ ಸಾಮರ್ಥ್ಯವನ್ನು ಬೆಳೆಸುವುದಕ್ಕೆ ಉತ್ತೇಜನ ಇನ್ನೂ ಕಡಿಮೆಯಾಗುತ್ತದೆ. ಸರ್ಕಾರ ಇನ್ನಷ್ಟು ಸಾಮರ್ಥ್ಯ ಕಳೆದುಕೊಳ್ಳುತ್ತದೆ. ಧ್ರುವೀಕರಣ ಇನ್ನಷ್ಟು ತೀವ್ರವಾಗುತ್ತದೆ.

ಸಮಸ್ಯೆ ಇರುವುದು ಹಣದ ಹೂಡಿಕೆಯಲ್ಲಿ ಅಲ್ಲ. ಅದು ಸರ್ಕಾರದ ಸಾಮರ್ಥ್ಯದ ಕೊರತೆಯಲ್ಲಿ. ಅದರಿಂದ ನಿರೀಕ್ಷಿತ ಪರಿಣಾಮ ಸಾಧ್ಯವಾಗುತ್ತಿಲ್ಲ. ಶಾಲೆಗಳಲ್ಲಿ ಪರಿಣಾಮಕಾರಿ ಕಲಿಕೆ ಸಾಧ್ಯವಾಗುತ್ತಿಲ್ಲ. ಆಸ್ಪತ್ರೆಗಳಲ್ಲಿ ಪರಿಣಾಮಕಾರಿ ಸೇವೆ ದೊರಕುತ್ತಿಲ್ಲ ಇತ್ಯಾದಿ. ಇದರಿಂದ ಆಗುತ್ತಿರುವ ಇನ್ನೊಂದು ಪರಿಣಾಮವೆಂದರೆ ನಮ್ಮ ದೇಶದ ಎಲೈಟುಗಳು ಹಾಗೂ ಮಧ್ಯಮ ವರ್ಗದವರು ಸಾರ್ವಜನಿಕ ಸೇವೆಗಳಿಂದ ವಿಮುಖರಾಗುತ್ತಿದ್ದಾರೆ. ಅವರು ಶಿಕ್ಷಣ, ಆರೋಗ್ಯ, ಸಾರಿಗೆ, ಕೊನೆಗೆ ಸುರಕ್ಷತೆ ಹೀಗೆ ಪ್ರತಿಯೊಂದಕ್ಕೂ ಖಾಸಗಿ ಸೇವೆಯನ್ನು ಬಳಸಿಕೊಳ್ಳುತ್ತಿದ್ದಾರೆ. ಹಾಗಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಗುಣಮಟ್ಟದ ಸೇವೆಗೆ ಒತ್ತಾಯ ಮಾಡುವುದಕ್ಕೆ ಯಾರೂ ಇಲ್ಲ. ಎಲೈಟುಗಳು ಬಳಸಿಕೊಳ್ಳುತ್ತಿದ್ದಾಗ ಸಾರ್ವಜನಿಕ ಸೇವೆಯ ಗುಣಮಟ್ಟ ಹೆಚ್ಚಿಗೆ ಇರುತ್ತಿತ್ತು ಎಂದು ಕಾರ್ತಿಕ್ ಹಲವು ಅಧ್ಯಯನಗಳನ್ನು ಉಲ್ಲೇಖಿಸುತ್ತಾರೆ. ಅಷ್ಟೇ ಅಲ್ಲ ಸಾರ್ವಜನಿಕ ಸೇವೆ ಸುಧಾರಿಸಿದರೆ ಖಾಸಗಿ ಸೇವೆಯ ಮೇಲೂ ಒತ್ತಡ ಹೆಚ್ಚುತ್ತದೆ. ಅದು ಕೂಡ ಸುಧಾರಿಸಬೇಕಾಗುತ್ತದೆ. ಇದೊಂದು ರೀತಿ ಬೆನ್ನು ಹತ್ತಿದ ಕರಡಿಯನ್ನು ತಪ್ಪಿಸಿಕೊಳ್ಳಲು ಓಡುತ್ತಿರುವ ಇಬ್ಬರು ಮನುಷ್ಯರಂತೆ. ಸದಾ ಒಬ್ಬರು ಇನ್ನೊಬ್ಬರನ್ನು ಹಿಂದೆ ಹಾಕಿ ಮುಂದೆ ಓಡುತ್ತಿರಬೇಕು. ಹಿಂದೆ ಬಿದ್ದವರು ಕರಡಿಗೆ ಸಿಕ್ಕಿಬಿದ್ದು ಸಾಯುತ್ತಾರೆ. ಸಾರ್ವಜನಿಕ ಸೇವೆ ಸುಧಾರಿಸಿದರೆ ತಮಗೂ ಒಳ್ಳೆಯದು ಅನ್ನುವುದು ಎಲೈಟ್‌ಗಳಿಗೂ ಅರ್ಥವಾಗಬೇಕು. ವಾಯುಮಾಲಿನ್ಯವನ್ನು ತಪ್ಪಿಸಿಕೊಳ್ಳುವುದಕ್ಕೆ ಮನೆಯೊಳಗಡೆ ಫಿಲ್ಟರ್ ಹಾಕಿಕೊಳ್ಳಬಹುದು. ಆದರೆ ಮನೆಯ ಆಚೆ ಬಂದರೆ ಎಲ್ಲರಂತೆ ಅವರೂ ಮಾಲಿನ್ಯವನ್ನು ಎದುರಿಸಬೇಕು.

ನಮ್ಮಲ್ಲಿ ಆರ್ಥಿಕ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಎರಡು ಅಭಿಪ್ರಾಯಗಳಿವೆ. ನಮ್ಮ ಆದ್ಯತೆ ಬೆಳವಣಿಗೆಯಾಗಬೇಕೋ ಅಥವಾ ಅಭಿವೃದ್ಧಿಯಾಗಬೇಕೋ ಅನ್ನುವ ಬಗ್ಗೆ ಹಿರಿಯ ಅರ್ಥಶಾಸ್ತ್ರಜ್ಞರಾದ ಭಗವತಿ ಹಾಗೂ ಅಮರ್ತ್ಯಸೇನ್ ನಡುವಿನ ಜಗಳ ಹಳೆಯದು. ಆರ್ಥಿಕ ಬೆಳವಣಿಗೆ ಮುಖ್ಯವೆನ್ನುವ ಭಗವತಿ ಪ್ರಕಾರ ಆರ್ಥಿಕ ಬೆಳವಣಿಗೆ ಸಾಧ್ಯವಾದರೆ ಸಾಕು. ಉಳಿದೆಲ್ಲವೂ ಸರಿಹೋಗುತ್ತದೆ. ಆದರೆ ಮಾನವನ ಅಭಿವೃದ್ಧಿ ಮುಖ್ಯ ಅನ್ನುವ ಸೇನ್ ಬೆಳವಣಿಗೆಯ ಉದ್ದೇಶ ತಲಾ ಜಿಡಿಪಿಯ ಹೆಚ್ಚಳವಲ್ಲ. ಮನುಷ್ಯನ ಬದುಕನ್ನು, ಮನುಷ್ಯನ ಸಾಮರ್ಥ್ಯವನ್ನು, ಮನುಷ್ಯನ ಅನುಭವವನ್ನು ಹೆಚ್ಚಿಸುವುದು ಬೆಳವಣಿಗೆಯ ಉದ್ದೇಶವಾಗಬೇಕು ಅನ್ನುತ್ತಾರೆ. ಅದಕ್ಕೆ ಅವರು ಶ್ರೀಲಂಕಾ, ವಿಯಟ್ನಾಂ, ಬಾಂಗ್ಲಾದೇಶ ಅಂತಹ ದೇಶಗಳನ್ನು ಉದಾಹರಣೆಯಾಗಿ ಕೊಡುತ್ತಾ ಕಡಿಮೆ ವರಮಾನ ಇದ್ದಾಗಲೂ ಹೆಚ್ಚಿನ ಮಾನವ ಅಭಿವೃದ್ಧಿ ಸಾಧ್ಯ. ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ದೇಶ ಶ್ರೀಮಂತವಾಗುವವರೆಗೆ ಕಾಯಬೇಕಾಗಿಲ್ಲ ಎಂದು ವಾದಿಸುತ್ತಾರೆ. ಸರಳವಾಗಿ ಹೇಳುವುದಾದರೆ ಒಬ್ಬರು ಭೌತಿಕ ಬಂಡವಾಳಕ್ಕೆ ಗಮನ ಕೊಡುತ್ತಾರೆ. ಮತ್ತೊಬ್ಬರು ಮಾನವ ಬಂಡವಾಳಕ್ಕೆ ಗಮನಕೊಡುತ್ತಾರೆ.

ಕಾರ್ತಿಕ್ ಮುರುಳಿಧರನ್ ಎರಡೂ ಸರಿ ಅನ್ನುತ್ತಾ, ಸಮಸ್ಯೆ ಇರುವುದು ಯಾವುದಕ್ಕೆ ಹಣ ತೊಡಗಿಸುತ್ತೀರಿ ಅನ್ನುವುದು ಮುಖ್ಯವಲ್ಲ. ಯಾವುದಕ್ಕೇ ಖರ್ಚು ಮಾಡಲಿ ಅದು ಪರಿಣಾಮಕಾರಿಯಾಗಿರಬೇಕು. ಅದು ನಿರೀಕ್ಷಿತ ಫಲ ನೀಡಬೇಕು. ಭಾರತದಲ್ಲಿ ನೀವು ಮೂಲಸೌಕರ್ಯ, ಸಾಮಾಜಿಕ ವಲಯ ಅಥವಾ ಇನ್ಯಾವುದರ ಮೇಲೆ ಬಂಡವಾಳ ಹೂಡಿದರೂ ಅವುಗಳ ಗುಣಮಟ್ಟ ಕೆಟ್ಟದಾಗಿದೆ. ಹಾಗಾಗಿ ದೇಶದ ಸಾಮರ್ಥ್ಯ ಬೆಳೆಯುತ್ತಿಲ್ಲ ಅನ್ನುವುದು ಮುರುಳಿಧರನ್ ಅವರ ವಾದ. ಸರ್ಕಾರದ ಸಾಮರ್ಥ್ಯ ವೃದ್ಧಿಯಾದರೆ ಅದು ಮಾಡುವ ಖರ್ಚಿನಿಂದ ಸಿಗುವ ಪ್ರತಿಫಲ ಹತ್ತು ಪಟ್ಟು ಹೆಚ್ಚುತ್ತದೆ ಅನ್ನುವುದು ಅವರ ಅಂದಾಜು. ಸಾರ್ವಜನಿಕ ಖರ್ಚನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದರ ಮೂಲಕ ಜನರ ಜೀವನ ಮಟ್ಟ ಸುಧಾರಿಸುವುದರ ಜೊತೆಗೆ ಬೆಳವಣಿಗೆಯ ದರವೂ ತೀವ್ರಗೊಳಿಸಬಹುದು. ಈಗ ಮಕ್ಕಳಲ್ಲಿ ಕುಂಠಿತ ಬೆಳವಣಿಗೆ ೨೫% ಇದೆ. ಸರ್ಕಾರದ ಸಾಮರ್ಥ್ಯ ಹೆಚ್ಚದಿದ್ದರೆ ೬% ಜಿಡಿಪಿ ಬೆಳವಣಿಗೆಯನ್ನು ಸಾಧಿಸಿದರೂ ಮಕ್ಕಳ ಆರೋಗ್ಯ ಸುಧಾರಿಸುವುದಿಲ್ಲ. ಇನ್ನು ಎರಡು ದಶಕದ ನಂತರವೂ ಇದು ಹಾಗೆಯೇ ಇರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಸಾರ್ವಜನಿಕ ವೆಚ್ಚವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಿದರೆ ಕುಂಠಿತ ಬೆಳವಣಿಗೆಯ ದರವನ್ನು ತಗ್ಗಿಸಬಹುದು. ಮಕ್ಕಳ ಆರೋಗ್ಯ ಸುಧಾರಿಸಿದರೆ ದೇಶದ ಬೆಳವಣಿಗೆಯೂ ಸುಧಾರಿಸುತ್ತದೆ.

ಹಾಗೆಯೇ ಗ್ರಾಮೀಣ ಸರ್ಕಾರಿ ಶಾಲೆಯಲ್ಲಿ ಅಧ್ಯಾಪಕರ ಗೈರುಹಾಜರು ೨೩.೬% ಇರುತ್ತದೆ ಅನ್ನಲಾಗಿದೆ. ಅದರಿಂದ ವರ್ಷಕ್ಕೆ ಸುಮಾರು ೧೦,೦೦೦ ಕೋಟಿಯಷ್ಟು ನಷ್ಟವಾಗುತ್ತದೆ ಅಂತ ಅಂದಾಜು ಮಾಡಲಾಗಿದೆ. ಇದನ್ನು ತಪ್ಪಿಸುವ ಮೂಲಕ ಶಿಕ್ಷಣಮಟ್ಟವನ್ನು ಸುಧಾರಿಸುವುದು ಹೆಚ್ಚು ಪರಿಣಾಮಕಾರಿಯಾದ ಕ್ರಮ ಎನ್ನುತ್ತಾರೆ. ಸಂಬಳದ ಹೆಚ್ಚಳದಿಂದ ಶಿಕ್ಷಣದ ಗುಣಮಟ್ಟ ಹೆಚ್ಚುವುದಿಲ್ಲ. ಗುಣಮಟ್ಟವನ್ನೇ ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗುತ್ತದೆ. ಕೆಲವು ಕಡೆ ಕೆಲಸಗಾರರ ಕೊರತೆಯ ಸಮಸ್ಯೆಯೂ ಇದೆ. ನ್ಯಾಯಾಲಯಗಳಲ್ಲಿ ಖಾಲಿ ಇರುವ ಸ್ಥಾನಗಳನ್ನು ತುಂಬಿದರೆ ಗುಣಮಟ್ಟ ಹಲವು ಪಟ್ಟು ಸುಧಾರಿಸುತ್ತದೆ. ಸಾರ್ವಜನಿಕ ಸೇವೆಯ ಗುಣಮಟ್ಟವನ್ನು ಹೆಚ್ಚಿಸುವುದು ಅಗತ್ಯವಾಗಿ ಆಗಬೇಕಾಗಿದೆ. ಕೋವಿಡ್ ಅಂತಹ ಪ್ರಕರಣಗಳು ಸಾರ್ವಜನಿಕ ಆರೋಗ್ಯದಂತಹ ಮೂಲವ್ಯವಸ್ಥೆಯನ್ನು ಸುಧಾರಿಸುವ ಅವಶ್ಯಕತೆಯನ್ನು ತೆರೆದಿಟ್ಟಿದೆ.

ವಿವಿಧ ಸಾರ್ವಜನಿಕ ಕ್ಷೇತ್ರಗಳಲ್ಲಿ ಹೂಡುವುದರ ಜೊತೆಗೆ ಅದು ಸಾರ್ವಜನಿಕ ಸೇವೆಯನ್ನು ಎಷ್ಟರ ಮಟ್ಟಿಗೆ ಉತ್ತಮ ಪಡಿಸುತ್ತದೆ ಮತ್ತು ಆ ಮೂಲಕ ಜನರ ಬದುಕನ್ನು ಹೇಗೆ ಸುಧಾರಿಸುತ್ತದೆ ಅನ್ನುವುದನ್ನು ಗಮನಿಸಬೇಕು. ನಿಜ, ಒಬ್ಬ ವ್ಯಕ್ತಿಗೆ ಒಂದು ಮತದ ಹಕ್ಕು ಇದೆ. ಆ ಮಟ್ಟಿಗೆ ರಾಜಕೀಯ ಸಮಾನತೆ ಇದೆ ಎಂದು ಭಾವಿಸಬಹುದು. ಜಾತಿ, ಹಣ, ಶಿಕ್ಷಣ ಇವೆಲ್ಲಾ ನಮಗೆ ಸಿಗಲಿರುವ ಸೌಲಭ್ಯದ ಮಟ್ಟವನ್ನು ನಿರ್ಧರಿಸುತ್ತಿವೆ. ಕೆಲಸ ಮಾಡುವುದಕ್ಕೆ, ಸ್ಪರ್ಧಿಸುವುದಕ್ಕೆ ಇರುವ ಸಾಮರ್ಥ್ಯವನ್ನು ನಿರ್ಧರಿಸುವ ಶಿಕ್ಷಣ, ಆರೋಗ್ಯ ಇವುಗಳಲ್ಲಿ ಇಂದು ಢಾಳಾಗಿ ಕಾಣುತ್ತಿರುವ ಅಸಮಾನತೆ ತಪ್ಪಬೇಕು. ಅದನ್ನು ಸಾಧ್ಯಮಾಡುವುದಕ್ಕೆ ಸರ್ಕಾರಕ್ಕೆ ಹೆಚ್ಚಿನ ನೈತಿಕ ಸಾಮರ್ಥ್ಯ ಬೇಕು. ಆಗಷ್ಟೇ ಭಾರತದಲ್ಲಿ ಪ್ರಜಾಸತ್ತೆ ಪರಿಣಾಮಕಾರಿ ಆಗುವುದಕ್ಕೆ ಸಾಧ್ಯ.

ರಘುರಾಂ ರಾಜನ್ ಜೊತೆಯಲ್ಲಿ ಮಾತುಕತೆ

[ರಘುರಾಂ ರಾಜನ್ ಆರ್‌ಬಿಐ ಗೌರ್ನರ್ ಆಗಿದ್ದವರು. ಸದ್ಯ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾರೆ. ಇತ್ತೀಚೆಗೆ ಅವರು ಫ್ರಂಟ್‌ಲೈನ್ ಪತ್ರಿಕೆಗಾಗಿ ಸುಕುಮಾರ್ ಮುರುಳಿಧರನ್ ಜೊತೆಗೆ ನಡೆಸಿದ ಸಂದರ್ಶನವನ್ನು ಸಂಗ್ರಹಿಸಿ, ಇಲ್ಲಿ ನೀಡಲಾಗಿದೆ.]

ಅಮೇರಿಕೆಯ ಹೊಸ ಅರ್ಥಿಕ ನೀತಿಯ ಪ್ರಭಾವ ಭಾರತದ ಆರ್ಥಿಕತೆಯ ಭವಿಷ್ಯದ ಮೇಲೆ ಹೇಗಿರಬಹುದು?

ಇದು ಸಂಕೀರ್ಣವಾದ ವಿಷಯ. ಮೊದಲಿಗೆ ಅಮೇರಿಕೆ ಏಕೆ ಈ ಹಾದಿಯನ್ನು ಹಿಡಿದಿದೆ ಅನ್ನುವುದನ್ನು ಗಮನಿಸೋಣ. ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಎಂದೂ ಮುಕ್ತ ವ್ಯಾಪಾರದ ಅಭಿಮಾನಿಯಲ್ಲ. ೧೯೮೦ರಿಂದಲೇ ಅವರು ಜಪಾನ್, ಚೀನಾ ಇವೆಲ್ಲಾ ಅಮೇರಿಕೆಯಿಂದ ಉದ್ಯೋಗವನ್ನು ಕಸಿದುಕೊಳ್ಳುತ್ತಿದೆ ಎಂದು ಆರೋಪಿಸುತ್ತಲೇ ಬಂದಿದ್ದಾರೆ. ಯಾವುದೇ ದೇಶದೊಂದಿಗಿನ ವ್ಯಾಪಾರದಲ್ಲಿ ಅಮೇರಿಕೆ ಚಾಲ್ತಿ ಖಾತೆಯ ಕೊರತೆಯನ್ನು ಎದುರಿಸುತ್ತಿದ್ದರೆ, ಆ ದೇಶ ಅಮೇರಿಕೆಯನ್ನು ಶೋಷಿಸುತ್ತಿದೆ ಅಂತಲೇ ಟ್ರಂಪ್ ಹಾಗೂ ಅವರ ಸಲಹೆಗಾರರ ಭಾವನೆ. ಹಾಗಾಗಿ ಅಂತಹ ದೇಶಗಳ ವಿರುದ್ಧ ಸುಂಕವನ್ನು ಹಾಕಿ ಅಮೇರಿಕೆಯ ಉದ್ದಿಮೆಗಳನ್ನು ರಕ್ಷಿಸಬೇಕೆನ್ನುವುದು ಅವರ ನಿಲುವು. ಹೀಗೆ ತಮ್ಮ ದೇಶಗಳನ್ನು ರಕ್ಷಿಸಬೇಕೆನ್ನುವವರು ಟ್ರಂಪ್ ಒಬ್ಬರೇ ಅಲ್ಲ. ನಮ್ಮ ದೇಶವೂ ಸೇರಿದಂತೆ ಸುರಕ್ಷಣಾ ನೀತಿಯನ್ನು ಬೆಂಬಲಿಸುವವರು ಜಗತ್ತಿನಾದ್ಯಂತ ಹಲವರಿದ್ದಾರೆ.

ಎರಡನೆಯದಾಗಿ ಅಮೇರಿಕೆ ಅತ್ಯಂತ ಪ್ರಬಲ ಹಾಗೂ ಶ್ರೀಮಂತ ರಾಷ್ಟ್ರ. ವ್ಯಾಪಾರದ ಮೇಲೆ ಸುಂಕ ಹಾಕಿ ಹೆಚ್ಚಿನ ಕಂದಾಯವನ್ನು ಸಂಗ್ರಹಿಸಿಕೊಳ್ಳಬೇಕೆಂಬ ಇಚ್ಛೆ ಅದಕ್ಕೆ ಬಲವಾಗಿದೆ. ಅದು ವಿತ್ತೀಯ ಕೊರತೆಯನ್ನು ಎದುರಿಸುತ್ತಿದೆ. ಇತ್ತೀಚೆಗೆ ಅಂಗೀಕರಿಸಲಾದ "ಬೃಹತ್ ಸುಂದರ ಮಸೂದೆ"ಯಿಂದ ಅಮೇರಿಕೆಯ ವಿತೀಯ ಕೊರತೆ ಇನ್ನಷ್ಟು ಹೆಚ್ಚಬಹುದು. ಹಿಂದೆ ೩% ಸುಂಕ ಹಾಕುತ್ತಿದ್ದಾಗ ಅಷ್ಟಾಗಿ ಹಣ ಸಂಗ್ರಹವಾಗುತ್ತಿರಲಿಲ್ಲ. ಸುಂಕ ಹೆಚ್ಚಾದರೆ ಸಂಗ್ರಹವಾಗುವ ಹಣ ಹೆಚ್ಚಬಹುದು.

ಮೂರನೆಯದಾಗಿ ಅಮೇರಿಕೆಗೆ ಚೀನಾದೊಂದಿಗೆ ವ್ಯಾಪಾರ ಮಾಡುವ ಇಚ್ಛೆ ಇಲ್ಲ. ಅದು ಚೀನಾದೊಂದಿಗಿನ ವ್ಯಾಪಾರವನ್ನು ತನ್ನ ಇತರ ಮಿತ್ರ ರಾಷ್ಟ್ರಗಳಿಗೆ ವರ್ಗಾಯಿಸಲು ಪ್ರಯತ್ನಿಸುತ್ತಿದೆ. ಅಥವಾ ಅಮೇರಿಕೆಯಲ್ಲಿ ತಯಾರಿಸಬಹುದು. ಇದರಿಂದ ವಾಸ್ತವದಲ್ಲಿ ಆ ವ್ಯಾಪಾರ ಚೀನಾದಷ್ಟೇ ಸಮರ್ಥವಿರುವ ಅಂದರೆ ಕಡಿಮೆ ಕೂಲಿ, ಒಳ್ಳೆಯ ಮೂಲಭೂತ ಸೌಕರ್ಯ ಹಾಗೂ ಸೂಕ್ತ ವ್ಯವಸ್ಥೆ ಇರುವ ಇನ್ನೊಂದು ದೇಶಕ್ಕೆ ಸ್ಥಳಾಂತರಗೊಳ್ಳಬಹುದು. ವಿಯಟ್ನಾಂ ಜೊತೆಗೆ ಮಾಡಿಕೊಂಡಿರುವ ಒಪ್ಪಂದವನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ವಿಯಟ್ನಾಮಿನ ಸರಕುಗಳಿಗೆ ೨೦% ಸುಂಕ ಹಾಕಲಾಗುತ್ತದೆ. ಆದರೆ ಚೀನಾದ ಸರಕುಗಳು ವಿಯೆಟ್ನಾಂ ಮೂಲಕ ಬಂದರೆ ಅವಕ್ಕೆ ೪೦% ಸುಂಕ ವಿಧಿಸಲಾಗುವುದು. ಅಂದರೆ ಅವರ ಆದ್ಯತೆ ಚೀನಾವನ್ನು ಹೊರಗಿಡುವುದು.

ಒಟ್ಟಾರೆಯಾಗಿ ಹೇಳುವುದಾದರೆ ಅಮೇರಿಕೆ ಜಗತ್ತಿನ ಇತರ ದೇಶಗಳ ಮೇಲೆ ವಿಧಿಸುತ್ತಿರುವ ಹೆಚ್ಚಿನ ಸುಂಕದ ನೀತಿ ಮುಂದುವರಿಯುತ್ತದೆ. ಅದು ಕೇವಲ ಚೌಕಾಸಿಯ ಅಸ್ತ್ರವಲ್ಲ. ಆದರೆ ಬೇರೆ ದೇಶಗಳು ಹಾಕುತ್ತಿರುವ ಸುಂಕವನ್ನು ಕಡಿಮೆ ಮಾಡುವಂತೆ ಒತ್ತಾಯಿಸುವುದಕ್ಕೂ ಸುಂಕವನ್ನು ಬಳಸಿಕೊಳ್ಳಲಾಗುತ್ತಿದೆ.


ಈಗ ಭಾವಿಸಿರುವಂತೆ, ಸುಂಕದಿಂದ ಬೆಲೆಗಳಲ್ಲಿ ಈವರೆಗೆ ಅಂತಹ ಪರಿಣಾಮ ಆಗಿಲ್ಲ. ವಾಸ್ತವದಲ್ಲಿ ಜನರಿಗೆ ಅಂತಹ ತೊಂದರೆಯಾಗಿಲ್ಲ ಅಲ್ವಾ?

ದೊಡ್ಡ ಪರಿಣಾಮ ಆಗದಿದ್ದರೂ ನೀವು ಅಂಕಿ ಅಂಶವನ್ನು ಸೂಕ್ಷ್ಮವಾಗಿ ನೋಡಿದರೆ ಸುಂಕ ಹಾಕಿರುವ ಕ್ಷೇತ್ರಗಳಲ್ಲಿ ಬೆಲೆಗಳು ಹೆಚ್ಚು ತ್ವರಿತವಾಗಿ ಏರಿಕೆ ಕಂಡಿದೆ. ಅಮೇರಿಕೆಗೆ ರಫ್ತು ಮಾಡುತ್ತಿರುವವರಲ್ಲಿ ಕೆಲವರು ಸುಂಕದ ಭಾರವನ್ನು ತಾವೇ ಹೊರಬಹುದು. ಒಂದಿಷ್ಟು ದಿನ ಬೆಲೆಗಳನ್ನು ಏರಿಸದೇ ಇರಬಹುದು. ಬಳಕೆದಾರರು ಸಿಟ್ಟಾಗುವುದು ನನಗೆ ಬೇಡ ಅನ್ನಬಹುದು. ಆದರೆ ಇದು ಬಹುಕಾಲ ಹೀಗೆ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಬಳಕೆದಾರರಿಗೆ ವರ್ಗಾಯಿಸಲೇ ಬೇಕು. ಬೆಲೆಗಳನ್ನು ಏರಿಸಲೇಬೇಕು. ಕಳೆದ ಬಳಕೆದಾರರ ಬೆಲೆಸೂಚಿ ನೋಡಿದರೆ ಸುಂಕ ವಿಧಿಸಿರುವ ಕ್ಷೇತ್ರಗಳಲ್ಲಿ ಬೆಲೆಗಳು ಏರಿರುವುದನ್ನು ನೋಡಬಹುದು.

ಆದರೆ ಭಾರತದ ದೃಷ್ಟಿಯಿಂದ ನೋಡುವುದಾದರೆ ಅಮೇರಿಕೆಯೊಂದಿಗೆ ಮುಕ್ತ ವ್ಯಾಪಾರದ ಒಪ್ಪಂದ ಮಾಡಿಕೊಳ್ಳುವುದಕ್ಕೆ ಸುಂಕದ ಮೂಲಕ ಒತ್ತಾಯಿಸಲಾಗುತ್ತಿದೆ ಅನಿಸುತ್ತದೆ. ಇದರ ಲಾಭ ನಷ್ಟಗಳೇನು?

೧೯೯೦ರ ಪ್ರಾರಂಭದಿಂದಲೂ ಉದಾರೀಕರಣದ ಕಾಲದಿಂದ ಭಾರತ ಮುಕ್ತ ವ್ಯಾಪಾರದ ನೀತಿಯನ್ನು ಅನುಸರಿಸಿಕೊಂಡು ಬಂದಿದೆ. ಆದರೆ ಈಗ ನಾವು ಹಿಂದಕ್ಕೆ ಸರಿಯುತ್ತಿದ್ದೇವೆ. ಮತ್ತೆ ಲೈಸೆನ್ಸ್ ಪರ್ಮಿಟ್ ರಾಜ್ಯ ಬಂದುಬಿಟ್ಟಿತು ಅಂತ ಹೇಳುತ್ತಿಲ್ಲ. ಸರ್ಕಾರ ಯಾವ ಕ್ಷೇತ್ರಕ್ಕೆ ಪ್ರವೇಶವನ್ನು ಮುಕ್ತವಾಗಿ ತೆರೆಯಬೇಕು ಯಾವುದಕ್ಕೆ ತೆರೆಯಬಾರದು ಅನ್ನುವುದರ ಬಗ್ಗೆ ಮಧ್ಯಪ್ರವೇಶ ಮಾಡುತ್ತಿದೆ. ಅದು ಸಬ್ಸಿಡಿಯ ಮೂಲಕ ಇರಬಹುದು, ಅಥವಾ ಸುಂಕದ ಮೂಲಕ ಇರಬಹುದು.





ಅಥವಾ ಉತ್ಪಾದನೆಯನ್ನು ಆಧರಿಸಿ ನೀಡುತ್ತಿರುವ ಉತ್ತೇಜನದ ಮೂಲಕ ಇರಬಹುದು. ನಾವು ಸ್ಥಳೀಯವಾಗಿ ಉತ್ಪಾದಿಸಲು ಉತ್ತೇಜಿಸಬೇಕು ಅಂದುಕೊಂಡಿರುವ ಸರಕು ಹೊರಗಡೆಯಿಂದ ಬರದಂತೆ ಅದರ ಮೇಲೆ ಸುಂಕ ಹಾಕುತ್ತೇವೆ. ಇವೆಲ್ಲಾ ವಿಪರೀತ ಅನಿಶ್ಚತತೆಯನ್ನು ಸೃಷ್ಟಿಸುತ್ತದೆ.

ನಮ್ಮ ಕೈಗಾರಿಕೋದ್ಯಮಿಗಳಿಗೆ ಒಂದು ಕೆಟ್ಟ ಅಭ್ಯಾಸ ಇದೆ. ಸ್ಪರ್ಧೆ ಎದುರಾದರೆ ಅದನ್ನು ಬಗೆ ಬಗೆಯ ನಿಯಂತ್ರಣಗಳನ್ನು ಬಳಸಿ ಕೊಳ್ಳಬೇಕೆಂದು ಬಯಸುತ್ತಾರೆ. ಅವರಿಗೆ ಆತ್ಮೀಯವಾದ ಸರ್ಕಾರಗಳು ಅಂತಹ ನಿಯಂತ್ರಣಗಳನ್ನು ಹೇರುವುದಕ್ಕೂ ತಯಾ- ರಿರುತ್ತವೆ. ಇವೆಲ್ಲಾ ಸ್ಪರ್ಧೆಗೆ ಅಡ್ಡಿಯಾಗುತ್ತದೆ. ಸ್ಪರ್ಧೆ ತಪ್ಪಿದರೆ ಅಂತಿಮವಾಗಿ ಭಾರತೀಯ ಬಳಕೆದಾರರಿಗೆ ಹೊರೆಯಾಗುತ್ತದೆ. ನಮ್ಮ ಉತ್ಪಾದಕರು ಹಾಗೂ ಬಳಕೆದಾರರ ಒಳಿತಿನ ದೃಷ್ಟಿಯಿಂದ ಪಾರದರ್ಶಕವಾದ ಹಾಗೂ ಹೆಚ್ಚು ನ್ಯಾಯಯುತವಾದ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ನಾವು ಭಾರತದಲ್ಲಿ ಉತ್ಪಾದಿಸಲು ವಿದೇಶಿ ಉತ್ಪಾದಕರನ್ನು ಅಹ್ವಾನಿಸಬೇಕು. ಆದರೆ ಅವರಿಗೆ ನಮ್ಮ ಉತ್ಪಾದಕರ ಜೊತೆಗೆ ಸಮಾನ ತಳದಲ್ಲಿ ಸ್ಪರ್ಧಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಅದರಿಂದ ನಮಗೆ ಒಳ್ಳೆಯದಾಗುತ್ತದೆ. ಆ ಮಟ್ಟಿಗೆ ಅಮೇರಿಕ ಜೊತೆಗಿನ ಈ ಮಾತುಕತೆಯಿಂದ ಕೆಲವು ಸಮಸ್ಯೆಗಳು ಬಗೆಹರಿಯಬಹುದು. ನಮ್ಮ ಕೈಗಾರಿಕಾನೀತಿ ಹೆಚ್ಚು ವಿಶ್ವಾಸರ್ಹವಾಗುತ್ತದೆ. ಮತ್ತು ಸ್ಪರ್ಧೆಯನ್ನು ಬೆಂಬಲಿಸಿದಂತಾಗುತ್ತದೆ. ಆದರೆ ಕೆಲವು ಸೂಕ್ಷ್ಮ ಕ್ಷೇತ್ರಗಳಿವೆ. ಉದಾಹರಣೆಗೆ ಹಾಲಿನ ಕ್ಷೇತ್ರ. ನಾವು ಬೇರೆ ದೇಶಗಳು ನೀಡುತ್ತಿರುವ ಸಬ್ಸಿಡಿಯನ್ನು ಗಮನಿಸಬೇಕು. ಇಲ್ಲದೇ ಹೋದರೆ ಸಬ್ಸಿಡಿ ಪಡೆದುಕೊಂಡ ಸರಕುಗಳು ಅಗ್ಗವಾಗುತ್ತವೆ. ಅವುಗಳ ಆಮದು ಹೆಚ್ಚಿ ನಮ್ಮ ಉತ್ಪಾದಕರಿಗೆ ತೊಂದರೆಯಾಗುತ್ತದೆ.

ಪ್ರಶ್ನೆ: ಅಮೇರಿಕ ತನ್ನ ಕೃಷಿ ಹಾಗೂ ಡೈರಿ ಉತ್ಪನ್ನಗಳಿಗೆ ನಮ್ಮ ಮಾರುಕಟ್ಟೆಯನ್ನು ತೆರೆಯಬೇಕೆಂದು ಷರತ್ತು ಹಾಕುತ್ತಿದೆ

ಯಾವುದೇ ಮಾತುಕತೆಯಲ್ಲಿ ನಾವು ಇಬ್ಬರಿಗೂ ಅನುಕೂಲವಾಗುವ ಪರಿಸ್ಥಿತಿಯನ್ನು ಗಮನಿಸಬೇಕು. ಕೃಷಿಯಲ್ಲೂ ನಮ್ಮ ಉತ್ಪಾದಕ- ರಿಗೆ ಅನುಕೂಲವಾಗುವ ಕ್ಷೇತ್ರಗಳೂ ಇರಬಹುದು. ನಾವು ಜಗತ್ತಿನಲ್ಲೇ ಅತಿ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರ. ನಮಗೆ ನಮ್ಮ ಉತ್ಪನ್ನದ ಒಂದಿಷ್ಟನ್ನು ಅಮೇರಿಕೆಯಲ್ಲಿ ಮಾರುಕಟ್ಟೆ ಮಾರಲು ಸಾಧ್ಯವಾಗಬಹುದಾ ಎನ್ನುವುದನ್ನು ಗಮನಿಸಬೇಕು. ಅವರ ನೆರವಿನಿಂದ ನಮ್ಮ ಹಾಲಿನ ಉತ್ಪನ್ನಗಳ ಮೌಲ್ಯವನ್ನು ಹೆಚ್ಚಿಸುವ ಸಾಧ್ಯತೆಯಿದೆಯೇ? ಹಾಗೆ ಅವರೊಂದಿಗೆ ಸೇರಿಕೊಂಡು ನಮ್ಮ ಕೃಷಿಯನ್ನು ಸುಧಾರಿಸುವ ಸಾಧ್ಯತೆಯಿದೆಯೆ? ಇತ್ಯಾದಿ ವಲಯಗಳನ್ನು ಗಮನಿಸಬೇಕು. ನಮಗೆ ಅನುಕೂಲವಾಗುವ ಹಲವು ಕ್ಷೇತ್ರಗಳಿವೆ.

ಭಾರತದ ಅಭಿವೃದ್ಧಿಯ ಪ್ರಶ್ನೆಯನ್ನು ಗಮನಿಸೋಣ. ಮೊದಲಿಗೆ ಸರಳವಾದ ವಿಷಯದಿಂದ ಪ್ರಾರಂಭಿಸೋಣ. ನಮಗೆ ಜನಸಂಖ್ಯೆಯ ಅನುಕೂಲ ಇದೆ. ನಮ್ಮಲ್ಲಿ ಕೆಲಸಕ್ಕೆ ಬರುತ್ತಿರುವ ಯುವಕರ ಸಂಖ್ಯೆ ಹೆಚ್ಚುತ್ತಿದೆ. ಜನಸಂಖ್ಯೆಯ ಬೆಳವಣಿಗೆಯ ದರ ಕಡಿಮೆಯಾಗುತ್ತಿದೆ. ಹಾಗಾಗಿ ಅವಲಂಬಿತರ ಅನುಪಾತ ಕಡಿಮೆಯಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸಾಮಾನ್ಯವಾಗಿ ದೇಶಗಳು ಹೆಚ್ಚು ವೇಗವಾಗಿ ಅಭಿವೃದ್ಧಿ ಹೊಂದುತ್ತವೆ. ಇದನ್ನು ಹಲವು ದೇಶಗಳಲ್ಲಿ ನಾವು ಗಮನಿಸಿದ್ದೇವೆ. ಆದರೆ ಇಂಡಿಯಾದಲ್ಲಿ ಅದು ಆಗುತ್ತಿಲ್ಲ. ನಾವು ಕಳೆದ ೨೫, ೩೦ ವರ್ಷಗಳಲ್ಲಿ ಶೇಕಡ ೬ರಿಂದ ೬.೫ರವರೆಗೆ ಬೆಳೆದಿದ್ದೇವೆ. ಅದು ಒಳ್ಳೆಯ ಬೆಳವಣಿಗೆಯೇ. ಆದರೆ ನಾವು ಇನ್ನೂ ಉನ್ನತ ಹಂತಕ್ಕೆ ಹೋಗುತ್ತಿಲ್ಲ. ಕೆಳಮಟ್ಟದಲ್ಲೇ ಇದ್ದೇವೆ.

ಜನರಿಗೆ ವಯಸ್ಸಾಗುವ ಮೊದಲು ನಮಗೆ ಹೆಚ್ಚು ವೇಗವಾಗಿ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗಬೇಕು. ದಕ್ಷಿಣ ಭಾರತದಲ್ಲಿ ಫಲವತ್ತತೆಯ ದರ ಸಂತಾನೋತ್ಪತ್ತಿಯ ದರಕ್ಕಿಂತ ಕಡಿಮೆಯಾಗುತ್ತಿದೆ. ಅಭಿವೃದ್ಧಿ ಇನ್ನೂ ಹೆಚ್ಚು ವೇಗವಾಗಿ ಆಗಬೇಕು. ನಾವು ೬ರಿಂದ ೬.೫ಕ್ಕೆ ತೃಪ್ತರಾಗಬಾರದು. ನಮ್ಮದು ಜಿ೨೦ ದೇಶಗಳಲ್ಲಿ ವೇಗವಾಗಿ ಬೆಳೆಯುತ್ತಿರುವ ದೇಶ. ಆದರೆ ಜಿ೨೦ ರಾಷ್ಟ್ರಗಳ ತಲಾ ಬಂಡವಾಳ ನೋಡಿದರೆ ನಮ್ಮದು ಅತ್ಯಂತ ಬಡರಾಷ್ಟ್ರ.

ಈಗಿರುವ ಪ್ರಶ್ನೆ ಅಭಿವೃದ್ಧಿಯನ್ನು ಸಾಧಿಸುವುದು ಹೇಗೆ? ಉತ್ಪಾದನಾ ಸರಕುಗಳ ರಫ್ತು ಇಂದು ಪರಿಹಾರವಲ್ಲ. ಈಗ ಉತ್ಪಾದನಾ ಪ್ರಕ್ರಿಯೆ ಬಹುತೇಕ ಯಾಂತ್ರಿಕವಾಗಿದೆ. ಬಿಡಿಭಾಗಗಳನ್ನು ಜೋಡಿಸುವುದಕ್ಕೂ ಯಂತ್ರಗಳನ್ನು ಬಳಸಲಾಗುತ್ತದೆ. ಕಂಪೆನಿಗಳಿಗೆ ಯಂತ್ರಗಳನ್ನು ನಿರ್ವಹಿಸಬಲ್ಲ, ಅವನ್ನು ರಿಪೇರಿ ಮಾಡಬಲ್ಲ ಜನ ಬೇಕಾಗಿದ್ದಾರೆ. ಯಂತ್ರಗಳು ಮಾಡುವ ಕೆಲಸವನ್ನು ಮಾಡುವ ಮನುಷ್ಯರು ಬೇಕಾಗಿಲ್ಲ. ಎರಡನೆಯದಾಗಿ ಉತ್ಪಾದನೆಯಲ್ಲಿ ನೀವು ಅಮೇರಿಕೆಯೊಂದಿಗೋ ಅಥವಾ ಯುರೋಪಿನಿಂದಿಗೋ ಅಥವಾ ಇನ್ನಾವುದೋ ಶ್ರೀಮಂತ ದೇಶಗಳೊಂದಿಗೆ ಸ್ಪರ್ಧಿಸುತ್ತಿಲ್ಲ. ನಮ್ಮಂತೆ ಕಡಿಮೆ ಕೂಲಿಗೆ ಕೆಲಸ ಮಾಡಲು ತಯಾರಿರುವ ಕೆಲಸಗಾರರಿರುವ ದೇಶಗಳೊಂದಿಗೆ ಸ್ಪರ್ಧಿಸುತ್ತಿರುತ್ತೇವೆ. ನಾವು ಸ್ಪರ್ಧೆ ಮಾಡುತ್ತಿರುವ ವಿಯೆಟ್ನಾಂ ಹಾಗೂ ಚೀನಾದಲ್ಲಿ ಕೂಲಿ ಕಡಿಮೆ ಇದೆ. ಆದರೆ, ನಮಗಿಂತ ಒಳ್ಳೆಯ ಮೂಲಭೂತ ಸೌಕರ್ಯಗಳಿವೆ.

ಮೂರನೆಯದಾಗಿ ಉತ್ಪಾದನೆಗೆ ಸಂಬಂಧಿಸಿದಂತೆ ಎಲ್ಲಾ ದೇಶಗಳು ಸುರಕ್ಷಣಾ ನೀತಿಯನ್ನು ಅನುಸರಿಸುತ್ತಿವೆ. ಎಲ್ಲಾ ದೇಶಗಳಿಗೂ ತಮ್ಮದೇ ಆದ ಉತ್ಪಾದನಾ ಕೈಗಾರಿಕೆಗಳನ್ನು ಬೆಳೆಸಬೇಕಾಗಿದೆ. ಈಗ ಮತ್ತೊಂದು ಚೀನಾಕ್ಕೆ ಅವಕಾಶವಿಲ್ಲ. ಉತ್ಪಾದನಾ ಕ್ಷೇತ್ರದಲ್ಲಿ ಅಷ್ಟೊಂದು ಉದ್ಯೋಗವನ್ನು ನಿರೀಕ್ಷಿಸುವುದಕ್ಕೂ ಸಾಧ್ಯವಿಲ್ಲ.

ನಾವು ಹಲವು ಮಟ್ಟದಲ್ಲಿ ಯೋಚಿಸಬೇಕು. ರಫ್ತು ನಮಗೆ ಅನಿವಾರ್ಯ. ಉನ್ನತ ಕುಶಲತೆಯ ಸೇವೆಗಳಲ್ಲಿ ನಾವು ಉತ್ತಮ ಸ್ಥಿತಿಯಲ್ಲಿದ್ದೇವೆ. ಜಾಗತಿಕ ರಫ್ತಿನಲ್ಲಿ ನಮ್ಮ ಪಾಲು ಶೇಕಡ ೪.೫೮ರಷ್ಟಿದೆ. ಉತ್ಪಾದನೆಯಲ್ಲಿ ಸುಮಾರು ೧.೫% ಇದೆ. ನಮಗೆ ಎಲ್ಲರಿಗೂ ಉದ್ಯೋಗ ಕೊಡುವುದಕ್ಕೆ ಆಗುವುದಿಲ್ಲ. ಉತ್ಪಾದನಾ ಕ್ಷೇತ್ರದಲ್ಲೂ ಸಾಧ್ಯವಾದಷ್ಟು ಉದ್ಯೋಗವನ್ನು ಸೃಷ್ಟಿಸುವುದಕ್ಕೆ ಯೋಚಿಸಬೇಕು. ಜಾಗತಿಕ ಹಾಗೂ ನಮ್ಮ ದೇಶೀಯ ಆರ್ಥಿಕತೆಯ ಅವಶ್ಯಕತೆಯನ್ನು ಪೂರೈಸುವುದಕ್ಕೆ ಬೇಕಾದ ಉತ್ಪಾದನೆ ಆಗಬೇಕು. ನಮ್ಮ ಆರ್ಥಿಕತೆ ಇಂದು ಜಪಾನಿಗಿಂತ ದೊಡ್ಡದಿದೆ. ಸೇವಾಕ್ಷೇತ್ರಕ್ಕೂ ದೇಶದೊಳಗಿನ ಮಾರುಕಟ್ಟೆ ಹೆಚ್ಚು ವಿಶಾಲವಾಗಿದೆ. ಟ್ರಕ್ ಡ್ರೈವಿಂಗ್, ರಿಪೇರಿ, ಮರಗೆಲಸ, ಮುಂತಾದ ಹಲವು ಕಡೆಗಳಲ್ಲಿ ಇನ್ನೂ ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸಬಹುದು. ಅದಕ್ಕೆ ಬೇಕಾದ ನಿಪುಣತೆಯನ್ನು ಬೆಳೆಸಬೇಕು. ಎಲ್ಲೆಲ್ಲಿ ಸಾಧ್ಯವೊ ಅಲ್ಲೆಲ್ಲಾ ಉದ್ಯೋಗವನ್ನು ಸೃಷ್ಟಿಸಬೇಕು. ನಾವಿನ್ನೂ ರಫ್ತು ಆಧರಿಸಿದ ಉತ್ಪಾದನೆಗಳಷ್ಟೇ ಉದ್ಯೋಗವನ್ನು ಸೃಷ್ಟಿಸುತ್ತವೆ ಅಂತ ಯೋಚಿಸುವುದನ್ನು ನಿಲ್ಲಿಸಬೇಕು. ಈಗ ಅದು ಸಾಧ್ಯವಿಲ್ಲ. ತಡವಾಗಿದೆ.

ನಾವು ಮಾಹಿತಿ ತಂತ್ರಜ್ಞಾನದ ಯಂತ್ರಾಂಶಗಳ ಆಮದನ್ನು ಒಂದು ಸಮಸ್ಯೆಯಾಗಿ ನೋಡಬಾರದು. ನಮ್ಮದೇ ಆದ ಯಂತ್ರಾಂಶಗಳನ್ನು ನಾವು ತಯಾರಿಸಬೇಕು ಅನ್ನುವುದು ನಿಜ. ಆದರೆ ಭಾರತದಲ್ಲಿ ತಯಾರಾದದ್ದನ್ನು ಮಾತ್ರ ಕೊಳ್ಳುತ್ತೇವೆ ಅಂತ ಭಾವಿಸಬಾರದು. ಅದರಿಂದ ನಮ್ಮ ಮಾಹಿತಿ ತಂತ್ರಜ್ಞಾನದ ಕೈಗಾರಿಕೆಗೆ ಕಷ್ಟವಾಗುತ್ತದೆ. ನಮ್ಮಲ್ಲೆ ನಮಗೆ ಬೇಕಾದ್ದು ಉತ್ಪಾದನೆಯಾಗುತ್ತಿದ್ದರೆ ನಾವು ಅದನ್ನು ಮೊದಲು ಕೊಳ್ಳಬೇಕು. ಆದರೆ ಯಂತ್ರಾಂಶಗಳ ಉತ್ಪಾದಕರಿಗೆ ರಕ್ಷಣೆ ನೀಡುವ ಪ್ರಕ್ರಿಯೆಯಲ್ಲಿ ತಂತ್ರಾಂಶವನ್ನು ರಫ್ತು ಮಾಡುವವರಿಗೆ ತೆರಿಗೆ ಹಾಕಬಾರದು.

ನಮಗೆ ತಂತ್ರಾಂಶವನ್ನು ಬೆಳೆಸಲು ಯಂತ್ರಾಂಶವೂ ಬೇಕಾಗಬಹುದು. ಆದರೆ ಆ ಬಗ್ಗೆ ಸ್ಪಷ್ಟತೆ ಬೇಕು. ಎನ್‌ವಿಡಿಯ ಚಿಪ್ಸ್ ತಯಾರಿಸುವುದಿಲ್ಲ. ಅದು ಚಿಪ್ಸ್ ವಿನ್ಯಾಸ ಮಾಡುತ್ತದೆ. ಆಪಲ್ ಐಫೋನ್ ತಯಾರಿಸುವುದಿಲ್ಲ. ಅದನ್ನು ವಿನ್ಯಾಸಗೊಳಿಸುತ್ತದೆ. ವಿನ್ಯಾಸದ ತಯಾರಿ ಹಾಗೂ ಬೌದ್ಧಿಕ ಆಸ್ತಿ ಇಂದು ಮಾರುಕಟ್ಟೆಯಲ್ಲಿ ತೀರಾ ಲಾಭದಾಯಕವಾದ ಕ್ಷೇತ್ರ. ಅಂತಹ ಲಾಭದಾಯಕವಾದ ವಲಯಗಳನ್ನು ಈ ಕಂಪೆನಿಗಳು ನಿಯಂತ್ರಿಸುತ್ತಿವೆ. ಜಗತ್ತಿನಲ್ಲೇ ಅತ್ಯುತ್ತಮ ಚಿಪ್ ಮಾಡುವ ಯಂತ್ರ ತಯಾರಾಗುವುದು ನೆದರ್‌ಲ್ಯಾಂಡ್ಸ್‌ನಲ್ಲಿ. ಅದು ಚಿಪ್ ವಿನ್ಯಾಸವನ್ನೂ ಮಾಡುವುದಿಲ್ಲ ಅಥವಾ ಉತ್ಪಾದನೆಯನ್ನೂ ಮಾಡುವುದಿಲ್ಲ. ಹಾಗಾಗಿ ಸಂಬಂಧಪಟ್ಟ ಸೇವಾ ಕ್ಷೇತ್ರದಲ್ಲಿ ತೊಡಗಿಕೊಳ್ಳುವುದಕ್ಕೆ ನೀವು ಯಂತ್ರಾಂಶದ ಉತ್ಪಾದನೆಯನ್ನೂ ಮಾಡಬೇಕು ಅನ್ನುವುದು ಸರಿಯಲ್ಲ. ಹಲವು ಕ್ಷೇತ್ರಗಳಲ್ಲಿ ಅದು ನಿಜವಲ್ಲ. ಈ ಜಾಗತಿಕ ವಿಶ್ವದಲ್ಲಿ ಸಂವಹನ ತುಂಬಾ ಸುಲಭವಾಗಿದೆ. ಉತ್ಪಾದಕರಿಗೆ ಏನು ಬೇಕು ಎನ್ನುವುದನ್ನು ಸುಲಭವಾಗಿ, ತಕ್ಷಣದಲ್ಲಿ ತಿಳಿದುಕೊಳ್ಳಬಹುದು.

ಇದು ಸಾಧ್ಯವಾಗಬೇಕಾದರೆ ಹಲವು ಹಂತದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಸಾಮರ್ಥ್ಯವನ್ನು ಹೆಚ್ಚಿಸುವುದು ತುಂಬಾ ಮುಖ್ಯವಾಗುತ್ತದೆ. ಅದಕ್ಕಾಗಿ ಅವಶ್ಯಕ ವಲಯಗಳಲ್ಲಿ ಹೂಡಿಕೆ ಮಾಡಬೇಕು. ಎಲ್ಲಾ ವಲಯಗಳನ್ನು ಒಟ್ಟಿಗೆ ಬೆಳೆಸುವುದಕ್ಕೆ ಸಾಧ್ಯವಾಗದೆ ಇರಬಹುದು. ಕೆಲವನ್ನು ಆರಿಸಿಕೊಳ್ಳಬೇಕಾಗಬಹುದು. ಉದಾಹರಣೆಗೆ ಸಂಶೋಧನೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ನಮ್ಮ ಶಾಲೆಯ, ವಿಶ್ವವಿದ್ಯಾನಿಲಯಗಳ ಗುಣಮಟ್ಟವನ್ನು ಹೆಚ್ಚಿಸಬೇಕು. ಅತ್ಯಾಧುನಿಕ ಸೌಲಭ್ಯವಿರುವ ರಾಷ್ಟ್ರೀಯ ಪ್ರಯೋಗಾಲಯಗಳು ಬೇಕು. ಪ್ರತಿಯೊಂದು ವಿಶ್ವವಿದ್ಯಾನಿಲಯಗಳಲ್ಲೂ ಅತ್ಯಾಧುನಿಕ ಪ್ರಯೋಗಾಲಯಗಳು ಇರುವುದಕ್ಕೆ ಸಾಧ್ಯವಿಲ್ಲ. ನೈಪುಣ್ಯ ಹೆಚ್ಚುವುದು ಮುಖ್ಯ. ಅದು ಕೇವಲ ಮೇಲ್‌ಸ್ತರದಲ್ಲಿ ಮಾತ್ರವಲ್ಲ. ಕಾರ್ಪೆಂಟರಿ, ಪ್ಲಂಬಿಂಗ್ ಇತ್ಯಾದಿ ಮೂಲಭೂತ ವೃತ್ತಿಗಳು ಸೇರಿದಂತೆ ಎಲ್ಲಾ ಕಡೆಯೂ ನೈಪುಣ್ಯತೆಯನ್ನು ಸುಧಾರಿಸಬೇಕು. ತಮಿಳುನಾಡಿನಲ್ಲಿ ನಾನ್ ಮುದಲ್ವನ್ ಯೋಜನೆಯಿದೆ. ಯಾವುದು ಪರಿಣಾಮಕಾರಿಯಾಗಿದೆ ಅನ್ನುವುದನ್ನು ತಿಳಿದುಕೊಳ್ಳಬೇಕು.

ಸರ್ಕಾರ ಭೌತಿಕ ಬಂಡವಾಳದ ಮೂಲಭೂತ ಸೌಕರ್ಯಗಳಾದ ರಸ್ತೆ, ವಿಮಾನ ನಿಲ್ದಾಣ ಇವುಗಳನ್ನು ನಿರ್ಮಿಸಲು ಗಮನಕೊಡುತ್ತಿದ್ದಾರೆ. ಅದು ಒಳ್ಳೆಯದೆ. ಆದರೆ ಅದನ್ನು ಅತಿ ಮಾಡಬಾರದು. ಪ್ರತಿ ಸಣ್ಣ ನಗರಕ್ಕೂ ಮೆಟ್ರೊ ಮಾಡಬೇಕಿಲ್ಲ. ಅದು ಬಿಳಿ ಆನೆ ಸಾಕಿದ ವ್ಯವಹಾರವಾಗುತ್ತದೆ. ಆದರೆ ಅಗ್ಗದ ಹಸಿರು ಎನರ್ಜಿಯನ್ನು ಸೇರಿದಂತೆ ಇತರ ಮೂಲಸೌಕರ್ಯವನ್ನು ನಿರ್ಮಿಸುವುದು ಇನ್ನೊಂದು ಆಯಾಮ. ನಾವು ಮಲಿನಗೊಳಿಸುವ ಶಕ್ತಿಯನ್ನು ತುಂಬಾ ಕಾಲ ಬಳಸುವುದು ಒಳ್ಳೆಯದಲ್ಲ. ಜೊತೆಗೆ ನಾನು ಸೂಕ್ತ ವಾತಾವರಣವನ್ನು ನಿರ್ಮಿಸುವುದು ಮುಖ್ಯ. ಮುಂದೆ ಏನಾಗುತ್ತದೆ ಎಂಬುದು ಉದ್ದಿಮೆಯವರಿಗೆ ತಿಳಿದಿರಬೇಕು. ನಿಯಮಗಳನ್ನು ನಿರಂತರವಾಗಿ ಬದಲಿಸುತ್ತಿರಬಾರದು. ನಾವು ೨೦೪೭ರ ವೇಳೆಗೆ ಏನನ್ನು ಅಭಿವೃದ್ಧಿಗೊಳಿಸಬೇಕು ಅನ್ನುವುದರ ಬಗ್ಗೆ ವಿಶಾಲ ದೃಷ್ಟಿ ಇರಬೇಕು. ಉದ್ದಿಮೆಗಳಿಗೆ ಅನುಕೂಲವಾಗುವ ಪೋಷಕ ವ್ಯವಸ್ಥೆಯನ್ನು ಹಾಗೂ ಮೂಲಭೂತ ಸೌಕರ್ಯವನ್ನು ಸರ್ಕಾರ ನಿರ್ಮಿಸಬೇಕು.

ಈಗ ಖಾಸಗಿ ಕ್ಷೇತ್ರ ಸಾಕಷ್ಟು ಬಲವಾಗಿ ಬೆಳೆದಿದೆ. ನೆಹರೂ ಕಾಲದಲ್ಲಿದ್ದಂತೆ ಸರ್ಕಾರವೇ ಮುಂದಾಳತ್ವ ವಹಿಸಬೇಕಾಗಿಲ್ಲ. ಆದರೆ ಖಾಸಗಿ ಕ್ಷೇತ್ರಕ್ಕೆ ಸ್ಪರ್ಧೆ ಇರಬೇಕು. ನಮ್ಮ ಹೆಚ್ಚಿನ ದೊಡ್ಡ ಉದ್ಯಮಪತಿಗಳು ತಮ್ಮ ಕ್ಷೇತ್ರದಲ್ಲಿ ಸ್ಪರ್ಧೆಯನ್ನು ಮುರುಟಿಹಾಕುತ್ತಾರೆ. ನಾವು ಸ್ಪರ್ಧಾತ್ಮಕ ವಾತಾವರಣವನ್ನು ಮೂಡಿಸಬೇಕು. ಅದಕ್ಕಾಗಿ ನಾವು ವಿದೇಶಿ ನೇರ ಹೂಡಿಕೆಯನ್ನು ಆಹ್ವಾನಿಸಬೇಕು.

ಪ್ರಶ್ನೆ: ನೀವು ೨೦೦೮ರ ಜಾಗತಿಕ ಹಣಕಾಸಿನ ಬಿಕ್ಕಟ್ಟಿಗೆ ಮೂರು ಕಾರಣಗಳನ್ನು ಗುರುತಿಸಿದ್ದೀರಿ. ಹೆಚ್ಚುತ್ತಿರುವ ವ್ಯಾಪಾರದ ಅಸಮತೋಲನ, ಅಮೇರಿಕೆಯಲ್ಲಿ ತೀವ್ರವಾಗುತ್ತಿರುವ ಆರ್ಥಿಕ ಅಸಮಾನತೆ, ಹಾಗೂ ಹಣಕಾಸಿನ ನಿಯಂತ್ರಣಗಳನ್ನು ತೆಗೆಯುವಲ್ಲಿ ವಿಭಿನ್ನ ರಾಷ್ಟ್ರಗಳು ಅನುಸರಿಸಿದ ಪರಸ್ಪರ ಪೂರಕವಲ್ಲದ ನೀತಿಗಳು ಕಾರಣ ಎಂದು ಸೂಚಿಸಿದ್ದಿರಿ. ಈಗ ಪರಿಸ್ಥಿತಿಯಲ್ಲಿ ಸುಧಾರಣೆಯಾಗಿದೆಯೇ?

ಇಲ್ಲ. ಹಣಕಾಸಿನ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಈಗ ಬ್ಯಾಂಕುಗಳ ಮೇಲೆ ನಮಗೆ ಉತ್ತಮ ನಿಯಂತ್ರಣ ಸಾಧ್ಯವಾಗಿದೆ. ಆದರೆ ಉಳಿದ ಎರಡು ಅಂಶಗಳು ಇನ್ನೂ ಹದಗೆಟ್ಟಿದೆ. ವ್ಯಾಪಾರದಲ್ಲಿ ಸುಧಾರಣೆಯಾಗಿಲ್ಲ. ಅದು ಹೆಚ್ಚು ಹೆಚ್ಚು ಶೋಷಿತವಾಗುತ್ತಿದೆ. ಅಸಮಾನತೆಯ ಗ್ರಹಿಕೆ, ವಾಸ್ತವವಲ್ಲದೇ ಇದ್ದರೂ ತೀವ್ರವಾಗುತ್ತಿದೆ. ಮುಕ್ತ ವ್ಯಾಪಾರದಂತಹ ನೀತಿ ಅನುಕೂಲವಾಗುವುದೇ ಅನುಕೂಲಸ್ಥರಿಗೆ. ಅದರಿಂದ ಕೆಲ ದೊಡ್ಡ ಕೈಗಾರಿಕೋದ್ಯಮಗಳಿಗೆ ಅನುಕೂಲವಾಗಿದೆ. ನಾವು ಉಳಿದವರು ನರಳುತ್ತಿದ್ದೇವೆ ಅನ್ನುವ ಭಾವನೆ ಹೆಚ್ಚುತ್ತಿದೆ.

ಇದಕ್ಕೆ ಪರಿಹಾರ ಅಂದರೆ ಎಲ್ಲರಿಗೂ ಅವಕಾಶ ಸಿಗುವಂತೆ ನೋಡಿಕೊಳ್ಳಬೇಕು. ಅದು ಹೆಚ್ಚು ಕ್ಲಿಷ್ಟಕರ. ಹೆಚ್ಚಿನ ಜನರಿಗೆ ಹೆಚ್ಚಿನ ಅವಕಾಶಗಳು ಕಲ್ಪಿಸುವುದಕ್ಕಿಂತ ತಪ್ಪು ಮಾಡಿದವರನ್ನು ಶಿಕ್ಷಿಸುವುದಕ್ಕೆ

ಹೆಚ್ಚಿನ ಆದ್ಯತೆ ನೀಡುತ್ತಿದ್ದೇವೆ. ಎಲ್ಲರನ್ನು ಮೇಲಕ್ಕೆ ಎತ್ತುವ ಬದಲು ಎಲ್ಲರ ಸ್ಥಿತಿಯನ್ನು ಕೆಳಗೆ ತರುತ್ತಿದ್ದೇವೆ. ದುರದೃಷ್ಟವೆಂದರೆ ಜಾಗತಿಕ ಆರ್ಥಿಕತೆಯೇ ಆ ದಿಕ್ಕಿನಲ್ಲಿ ಚಲಿಸುತ್ತಿದೆ.

ನಿಯಂತ್ರಣಗಳ ವಿಷಯದಲ್ಲೂ ಹೀಗೆ ಆಗಿದೆ. ಬ್ಯಾಂಕುಗಳು ನೇರವಾಗಿ ರಿಸ್ಕ್ ತೆಗೆದುಕೊಳ್ಳುವುದನ್ನು ನಿಲ್ಲಿಸಿಬಿಟ್ಟಿವೆ. ಅವು ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಹಣಕಾಸು ನೀಡುತ್ತಿವೆ. ನಮ್ಮಲ್ಲಿ ಬ್ಯಾಂಕೇತರ ಹಣಕಾಸು ಕಂಪೆನಿಗಳು ಸಂಪೂರ್ಣವಾಗಿ ಸ್ವತಂತ್ರವಲ್ಲ. ಅವು ತಮಗೆ ಬೇಕಾದ ಹಣವನ್ನು ಬ್ಯಾಂಕುಗಳಿಂದ ಪಡೆಯುತ್ತವೆ. ಬ್ಯಾಂಕೇತರ ಸಂಸ್ಥೆಗಳು ರಿಸ್ಕ್ ತೆಗೆದುಕೊಳ್ಳುತ್ತಿವೆ. ಬ್ಯಾಂಕುಗಳು ತೆಗೆದುಕೊಳ್ಳುತ್ತಿಲ್ಲ. ಅವು ಹಿಂಬಾಗಿಲ ಮೂಲಕ ಬ್ಯಾಂಕನ್ನು ಪ್ರವೇಶಿಸುತ್ತಿವೆ.

ಕೇಂದ್ರ ಬ್ಯಾಂಕು ಸರ್ಕಾರಕ್ಕೆ ಹೆಚ್ಚೆಚ್ಚು ಹಣ ನೀಡುತ್ತಿದೆ. ನಮ್ಮಲ್ಲಿ ಅರ್ಥಿಕ ಅಸ್ಥಿರತೆ ಇದೆಯೇ?

ಆರ್‌ಬಿಐಗೆ ಹಣ ಬರೋದು ವಿದೇಶಿ ವಿನಿಮಯದ ಮೀಸಲಿನಿಂದ. ರೂಪಾಯಿ ಮೌಲ್ಯ ಕುಸಿದಾಗ ಆರ್‌ಬಿಐ ಶ್ರೀಮಂತವಾಗಿ ಕಾಣುತ್ತದೆ. ಆರ್‌ಬಿಐ ಸಂಪತ್ತು ಜನರಿಗೆ ಸೇರಿದ್ದು ಅಂತ ಸರ್ಕಾರ ಯೋಚಿಸುತ್ತದೆ. ಡಿವಿಡೆಂಡ್ ರೂಪದಲ್ಲಿ ಸರ್ಕಾರಕ್ಕೆ ಹೆಚ್ಚಿಗೆ ಹಣ ನೀಡಬೇಕೆಂದು ಬ್ಯಾಂಕುಗಳ ಒತ್ತಡ ತರುತ್ತದೆ.
ಹೀಗೆ ಡಿವಿಡೆಂಡ್ ರೂಪದಲ್ಲಿ ಕೊಡುವುದರ ಸಮಸ್ಯೆ ಏನೆಂದರೆ ಅದರಿಂದ ಆ ವರ್ಷದ ವಿತ್ತೀಯ ಬ್ಯಾಲೆನ್ಸ್ ಬದಲಾಗುತ್ತದೆ. ಹಣದುಬ್ಬರ ಕಮ್ಮಿಯಿದ್ದಾಗ ರೂಪಾಯಿ ಮೌಲ್ಯ ಇಳಿಯುವುದಿಲ್ಲ. ಆರ್‌ಬಿಐಗೆ ಸರ್ಕಾರಕ್ಕೆ ಕೊಡುವುದಕ್ಕೆ ಸರಳವಾದ ಸಂಪತ್ತಿನ ಮೂಲ ಯಾವುದೂ ಇರುವುದಿಲ್ಲ.

ಹಣಕಾಸಿನ ರಿಸ್ಕ್ ವಿಷಯದಲ್ಲಿ ನಾವು ಯಾವಾಗಲೂ ಎಚ್ಚ–ರಿಕೆಯಿಂದ ಇರಬೇಕು. ಇತ್ತೀಚೆಗೆ ಜೇನ್ ಸ್ಟ್ರೀಟ್ ಹಾಗೂ ಸೆಬಿ ವಿಷಯದಲ್ಲಿ ಆದ ಘಟನೆ ಈ ದೃಷ್ಟಿಯಿಂದ ತುಂಬಾ ಮುಖ್ಯ. ಈ ರೀತಿಯ ಕೆಲವು ಹೆಡ್ಜ್ ಫಂಡ್‌ಗಳು ಲಕ್ಷಾಂತರ ಬಿಲಿಯನ್ ಡಾಲರ್ ಹಣ ಮಾಡಿಕೊಂಡಿವೆ. ಆಪ್ಷನ್ ಮಾರುಕಟ್ಟೆಯಲ್ಲಿ ಸಟ್ಟಾ ವ್ಯಾಪಾರದಲ್ಲಿ ತೊಡಗಿರುವ ಹಲವು ಯುವಕರು ಹಣ ಕಳೆದುಕೊಂಡಿದ್ದಾರೆ. ನಾವು ಕಡಿಮೆ ವರಮಾನದ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಿನ ವರಮಾನ ಬರುವ ಯುವಕರಿಗೆ ಇಂತಹ ಮಾರುಕಟ್ಟೆಗೆ ಪ್ರವೇಶ ತೆರೆಯುವಾಗ ಎಚ್ಚರದಿಂದಿರಬೇಕು. ಹಣಕಾಸಿನ ಮಾರುಕಟ್ಟೆ ಬಹುತೇಕ ಲಾಟರಿ ಅಥವಾ ಜೂಜಿನ ರೀತಿಯಾಗಿದೆ. ಅದು ನಿಜವಾದ ಹೂಡಿಕೆಯಾಗಿಲ್ಲ.

ಜೇನ್ ಸ್ಟ್ರೀಟಿಗೆ ಸಂಬಂಧಿಸಿದ ಪ್ರಕರಣವನ್ನು ಸೆಬಿ ದಾಖಲೆಯಲ್ಲಿ ಹೆಚ್ಚು ವಿವರವಾಗಿ ವಿಶ್ಲೇಷಿಸಿದೆ. ಸೆಬಿ ಒಳ್ಳೆ ಕೆಲಸ ಮಾಡಿದೆ. ಮಾರುಕಟ್ಟೆಯ ದುರುಪಯೋಗ ಪಡಿಸಿಕೊಳ್ಳುವುದು ಗಂಭೀರವಾದದ್ದು. ನ್ಯಾಯಾಲಯ ಬೆಂಬಲ ಸಿಕ್ಕರೆ ಕ್ರಮ ತೆಗೆದುಕೊಳ್ಳಬೇಕು.

ವಿಕೇಂದ್ರೀಕರಣವನ್ನು ಕುರಿತಂತೆ:

ವಿಕೇಂದ್ರೀಕರಣ ತುಂಬಾ ಮುಖ್ಯ. ಹೆಚ್ಚೆಚ್ಚು ವಿಕೇಂದ್ರೀಕರಣಗೊಳಿಸುವ ಅವಶ್ಯಕತೆಯಿದೆ. ಅಂಬೇಡ್ಕರ್ ಹಾಗೂ ಗಾಂಧಿಯ ನಡುವೆ ವಿಕೇಂದ್ರೀಕರಣದ ವಿಷಯದಲ್ಲಿ ತುಂಬಾ ಚರ್ಚೆ ನಡೆದಿತ್ತು. ಹಳ್ಳಿಗಳು ಅಸಮಾನತೆಯ ಕೂಪ. ಅಲ್ಲಿ ಮೇಲ್‌ಸ್ತರದವರು ಕೆಳ ಜಾತಿಯವರನ್ನು ಹೊರಗಿಡುತ್ತಾರೆ. ಅದು ಕ್ರೂರ ಎಂದು ಅಂಬೇಡ್ಕರ್ ಭಾವಿಸಿದ್ದರು. ಗಾಂಧಿ ದೃಷ್ಟಿಯಲ್ಲಿ ಸ್ವರಾಜ್ಯದ ಕಲ್ಪನೆಯನ್ನು ಹಳ್ಳಿಗಳ ಮಟ್ಟಕ್ಕೆ ಒಯ್ಯಬೇಕು. ಇಬ್ಬರು ನಾಯಕರು ಹೇಳುವುದರಲ್ಲೂ ಅರ್ಥವಿದೆ. ಆಗಿರುವ ಸಾಮಾಜಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಈಗ ವಿಕೇಂದ್ರೀಕರಣ ಸಾಧ್ಯ. ಅದರರ್ಥ ಹಳ್ಳಿಗಳ ಮಟ್ಟಕ್ಕೆ ವಿಕೇಂದ್ರೀಕರಿಸಿ ಅದರ ಪಾಡಿಗೆ ಬಿಟ್ಟುಬಿಡುವುದಲ್ಲ. ಹಳ್ಳಿಗಳಲ್ಲಿ ಪ್ರಜಾಸತ್ತಾತ್ಮಕ ಪ್ರಕ್ರಿಯೆ ನಡೆದುಕೊಂಡು ಹೋಗುವಂತೆ ನೋಡಿಕೊಳ್ಳಬೇಕು. ಜೊತೆಗೆ ಸಬಲೀಕರಣವೂ ಅಷ್ಟೇ ಮುಖ್ಯ.

ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಬಂದಂತಹ ಹಣ ಅಪಬಳಕೆಯಾದರೆ ಅಥವಾ ಗ್ರಾಮದ ಮುಖಂಡರ ಜೇಬು ಸೇರಿದರೆ ಗ್ರಾಮೀಣ ಸಮುದಾಯಕ್ಕೆ ತಿಳಿಯುತ್ತದೆ. ಪ್ರಜಾಸತ್ತಾತ್ಮಕ ವ್ಯವಸ್ಥೆ ಗ್ರಾಮೀಣ ಮಟ್ಟದಲ್ಲಿದ್ದರೆ ಜನರಿಗೂ ಆಡಳಿತದಲ್ಲಿ ಅವಕಾಶವಿದೆ ಅನಿಸುತ್ತದೆ. ಪಂಚಾಯಿತಿಯ ಮುಖ್ಯಸ್ಥನೊಬ್ಬ ಪ್ರಧಾನ ಮಂತ್ರಿ ಅವಾಸ್ ಯೋಜನೆಯ ಹಣವನ್ನು ಸರಿಯಾಗಿ ಹಂಚದಿದ್ದರೆ ಅಥವಾ ಶಾಲೆಯ ಟೀಚರ್ ಶಾಲೆಗೆ ಸರಿಯಾಗಿ ಬರುವಂತೆ ನೋಡಿಕೊಳ್ಳದೆ ಹೋದರೆ ಮುಖ್ಯಸ್ಥನನ್ನು ಹೊರಹಾಕುವುದಕ್ಕೆ ಸಾಧ್ಯವಾಗಬೇಕು. ಈಗ ಜನರಿಗೆ ಅಂತಹ ಅಧಿಕಾರವಿಲ್ಲ. ಯಾಕೆಂದರೆ ನಿರ್ಧಾರಗಳನ್ನು ದೂರದ ಜಿಲ್ಲಾ ಕೇಂದ್ರ ಕಛೇರಿಗಳಲ್ಲಿ ಅಥವಾ ರಾಜ್ಯ ಕೇಂದ್ರ ಕಛೇರಿಗಳಲ್ಲಿ ಅಥವಾ ಕೆಲವೊಮ್ಮೆ ದೆಹಲಿಯಲ್ಲಿ ತೆಗೆದುಕೊಳ್ಳಲಾಗುತ್ತದೆ.

ಅಂಬೇಡ್ಕರ್ ವಿಕೇಂದ್ರೀಕರಣದ ವಿರುದ್ಧ ಇದ್ದರು. ಆದರೆ ಈಗ ಹೆಚ್ಚಿನ ವಿಕೇಂದ್ರೀಕರಣ ಮಾಡಲು ಸಮಯ ಕೂಡಿಬಂದಿದೆ. ನಾವು ಪಂಚಾಯತ್ ರಾಜ್ ಸಂವಿಧಾನ ಬದಲಾವಣೆಯನ್ನು ತಂದಿದ್ದೇವೆ. ಆದರೆ ಅದು ರಾಜ್ಯದ ಹಂತಕ್ಕೆ ನಿಂತು ಹೋಗಿದೆ. ನಾವು ವಿಕೇಂದ್ರೀಕರಣವನ್ನು ಜಿಲ್ಲೆ, ಮುನಿಸಿಪಾಲಟಿ ಹಾಗೂ ಹಳ್ಳಿಗಳ ಹಂತಕ್ಕೆ ಹೋಗುವುದಕ್ಕೆ ಬಿಟ್ಟಿಲ್ಲ. ಯಾಕೆಂದರೆ ರಾಜ್ಯಗಳು ತಮ್ಮ ಅಧಿಕಾರವನ್ನು ಬಿಟ್ಟುಕೊಡುವುದಕ್ಕೆ ತಯಾರಿಲ್ಲ. ರಾಜ್ಯಗಳು ಗ್ರಾಮದ ಹಂತದವರೆಗೆ ಅಧಿಕಾರವನ್ನು ಬಿಟ್ಟುಕೊಡಬೇಕು. ಆಗ ಪ್ರಜಾಸತ್ತಾತ್ಮಕ ವ್ಯವಸ್ಥೆಗಿರುವ ನಮ್ಮ ಬದ್ಧತೆ ಹೆಚ್ಚುತ್ತದೆ. ಮತ್ತು ಆಡಳಿತ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಪ್ರಾಸಂಗಿಕವಾಗಿ ನಮ್ಮಲ್ಲಿ ದತ್ತಾಂಶದ ಸಮಸ್ಯೆಯ ಬಗ್ಗೆ ಮಾತನಾಡುವಾಗ ಸರ್ಕಾರ ಕೆಲವು ಸಮೀಕ್ಷೆಗಳ ವರದಿಯನ್ನು ಪ್ರಕಟಿಸುತ್ತಿಲ್ಲ. ಸಮೀಕ್ಷೆಯ ಕ್ರಮವನ್ನು ಕುರಿತಂತೆಯೂ ಹಸ್ತಕ್ಷೇಪ ಮಾಡುತ್ತಿದೆ. ಸರ್ಕಾರದ ಕಾರ್ಯಕ್ರಮಗಳು ಹೇಗೆ ಕೆಲಸ ಮಾಡುತ್ತಿವೆ ಎಂದು ತಿಳಿದುಕೊಳ್ಳುವುದಕ್ಕೂ ನಮಗೆ ಸೂಕ್ತ ಮಾಹಿತಿಯ ಅವಶ್ಯಕತೆಯಿದೆ. ನಾವು ಯೋಜನೆಗಳನ್ನು ರೂಪಿಸುತ್ತೇವೆ. ಘೋಷಿಸುತ್ತೇವೆ. ಆದರೆ ಅವು ಹೇಗೆ ಕೆಲಸ ಮಾಡುತ್ತಿವೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿಲ್ಲ. ಅದು ಕೇವಲ ಘೋಷಣೆಗಳಿಗೆ ಸೀಮಿತವಾಗಿವೆ. ಪ್ರತಿಯೊಂದು ಯೋಜನೆಯನ್ನು ಅವು ಹೇಗೆ ಕೆಲಸ ಮಾಡುತ್ತಿವೆ ಎಂದು ತಿಳಿದುಕೊಳ್ಳಬೇಕು. ಅವು ಸರಿಯಾಗಿ ಕೆಲಸ ಮಾಡದಿದ್ದರೆ ಅದನ್ನು ನಿಲ್ಲಿಸಬೇಕು ಅಥವಾ ಬದಲಿಸಬೇಕು. ಅದಕ್ಕೆ ಸೂಕ್ತ ಮಾಹಿತಿ ಬೇಕು. ಹಾಗೆ ಸಂಗ್ರಹಿಸಿದ ಮಾಹಿತಿಯನ್ನು ಅದನ್ನು ಟೀಕಿಸುವವರಿಗೆ ಕೊಡಬೇಕು. ತಪ್ಪಿದ್ದರೆ ಸರಿಪಡಿಸಿ ಅದಕ್ಕೆ ಬೇಕಾದರೆ ಮೆಚ್ಚುಗೆ ಪಡೆದುಕೊಳ್ಳಿ.
ಹಾಗೆಯೇ ಮಾಧ್ಯಮಗಳನ್ನು ಬಳಸಿಕೊಂಡು ಸುಳ್ಳು ಕಥನವನ್ನು ಹರಡಬಹುದು. ಆದರೆ ತಮ್ಮ ವಾಸ್ತವ ಬದುಕಿಗೂ ಅದಕ್ಕೂ ತಾಳೆಯಾಗದಿದ್ದರೆ ಜನ ಪ್ರಶ್ನಿಸುತ್ತಾರೆ. ಆದರೆ ಅದಕ್ಕೆ ತುಂಬಾ ದಿನ ಬೇಕು. ಜನರಿಗೆ ಇದು ಸುಳ್ಳು ಅಂತ ತಿಳಿಯುವುದಕ್ಕೆ ಸಮಯ ಹಿಡಿಯುತ್ತದೆ. ಹಾಗಾಗಿಯೇ ಸುಳ್ಳು ಸುದ್ದಿ ಹರಡುವುದು ಆಕರ್ಷಕವಾಗಿ ಕಾಣುತ್ತದೆ. ನಾವು ಇದನ್ನು ಎದುರಿಸಬೇಕು.

Sukumar Muralidharan is an independent writer and researcher based in the Delhi region.

ಕುರುಡು ಕಾಂಚಾಣ



ಜೇನ್ ಸ್ಟ್ರೀಟ್ ಪ್ರಕರಣವಾದರೂ ನಮಗೊಂದು ಪಾಠವಾಗಬಹುದೇ?

ಷೇರು ಮಾರುಕಟ್ಟೆ ಆಗಿಂದಾಗೆ ಸುದ್ದಿ ಮಾಡುತ್ತಲೇ ಇರುತ್ತದೆ. ಇದು ಕೋಟ್ಯಂತರ ಹೂಡಿಕೆದಾರರು ವ್ಯವಹಾರ ನಡೆಸುವ ತಾಣ. ಇದರಲ್ಲಿ ಸಣ್ಣ ಸ್ಥಳೀಯ ಹೂಡಿಕೆದಾರರಿಂದ ಹಿಡಿದು ಅತಿ ದೊಡ್ಡ ಅಂತರರಾಷ್ಟ್ರೀಯ ಹೂಡಿಕೆದಾರರು ವಹಿವಾಟು ನಡೆಸುತ್ತಿರುತ್ತಾರೆ. ಲಾಭ ಮಾಡಿಕೊಳ್ಳುವುದೇ ಇವರ ಉದ್ದೇಶವಾಗಿರುವುದರಿಂದ ನೂರಾರು ಅವ್ಯವಹಾರಗಳು, ಹಗರಣಗಳು ನಡೆಯುತ್ತಲೇ ಇರುತ್ತವೆ. ಇಲ್ಲಿ ಒಬ್ಬರು ಲಾಭ ಮಾಡಿಕೊಂಡರೆ ಇನ್ನ್ಯಾರೋ ಕಳೆದುಕೊಳ್ಳಲೇಬೇಕು. ಕಳೆದುಕೊಳ್ಳುವವರು ಬಹುತೇಕ ಸಣ್ಣ ಚಿಲ್ಲರೆ ಹೂಡಿಕೆದಾರರು.

ಇತ್ತೀಚೆಗೆ ಮತ್ತೊಂದು ಹಗರಣ ದೊಡ್ಡ ಸುದ್ದಿ ಮಾಡುತ್ತಿದೆ. ಜೇನ್ ಸ್ಟ್ರೀಟ್ ಎಂಬ ಅಮೇರಿಕೆಯ ವ್ಯಾಪಾರಿ ಉದ್ದಿಮೆ ಹಣಕಾಸು ಮಾರುಕಟ್ಟೆಯಲ್ಲಿ ಅಕ್ರಮ ವ್ಯವಹಾರದಿಂದ 4853.57 ಕೋಟಿ ರೂಪಾಯಿ ಲಾಭ ಮಾಡಿಕೊಂಡಿದೆ ಎಂದು ಸೆಬಿ(ಸೆಕ್ಯುರಿಟಿ ಮಾರುಕಟ್ಟೆಯನ್ನು ನಿಯಂತ್ರಿಸಲು ರಚನೆಯಾಗಿರುವ ಮಂಡಳಿ) ಆರೋಪಿಸಿದೆ. ಈ ಪ್ರಕರಣವನ್ನು ಕುರಿತಂತೆ ಅಧ್ಯಯನ ಮಾಡಿ 105 ಪುಟಗಳ ವಿವರವಾದ ವರದಿಯನ್ನು ಪ್ರಕಟಿಸಿದೆ. ಸೆಬಿ 19 ದಿನಗಳ ವಹಿವಾಟನ್ನು ತನ್ನ ವರದಿಯಲ್ಲಿ ಗಮನಿಸಿದೆ. ಅದರಲ್ಲಿ 17 ದಿನಗಳನ್ನು ವಿವರವಾಗಿ ಪರಿಶೀಲಿಸದೆ. ಒಂದು ದಿನದ ವಹಿವಾಟನ್ನು ಪೂರ್ಣ ಪರಿಶೀಲನೆಗೆ ಒಳಪಡಿಸಿದೆ. ಅದರ ವರದಿಯ ಪ್ರಕಾರ ಜೇನ್ ಸ್ಟ್ರೀಟ್ 1, ಜನವರಿ 2023ರಿಂದ 1, ಮಾರ್ಚ್ 2025 ಅವಧಿಯೊಳಗೆ 36,502.12 ಕೋಟಿ ರೂಪಾಯಿಯನ್ನು ಲಾಭ ಮಾಡಿಕೊಂಡಿದೆ. ವ್ಯವಹಾರದಲ್ಲಿ ಅಕ್ರಮ ನಡೆದಿದೆ ಅನ್ನುವ ಕಾರಣಕ್ಕೆ ಜೇನ್ ಸ್ಟ್ರೀಟ್ ಸಂಸ್ಥೆಯನ್ನು ಹಣಕಾಸು ಮಾರುಕಟ್ಟೆಯಲ್ಲಿ ವಹಿವಾಟು ನಡೆಸದಂತೆ ಸೆಬಿ ನಿಷೇಧಿಸಿದೆ. ಜೊತೆಗೆ ಅದರ ಮೇಲೆ ದಂಡವನ್ನೂ ವಿಧಿಸಿದೆ. ವಿದೇಶಿ ಸಂಸ್ಥೆಯ ಮೇಲೆ ಸೆಬಿ ಕ್ರಮ ಕೈಗೊಂಡಿರುವುದು ಒಂದು ಅಪರೂಪದ ಘಟನೆ.

ಜೇನ್ ಸ್ಟ್ರೀಟ್ ಮುಖ್ಯವಾಗಿ ಎಚ್‌ಎಫ್‌ಟಿ–ಹೈ ಫ್ರಿಕ್ವೆನ್ಸಿ ಟ್ರೇಡಿಂಗ್‌ನಲ್ಲಿ ತೊಡಗಿರುವ ಸಂಸ್ಥೆ. ಎಚ್‌ಎಫ್‌ಟಿ ಅಂದರೆ ಶಕ್ತಿಶಾಲಿ ಕಂಪ್ಯೂಟರುಗಳನ್ನು ಬಳಸಿ ಒಂದು ಸೆಕೆಂಡಿಗಿಂತ ಅತಿ ಕಡಿಮೆ ಸಮಯದಲ್ಲಿ ವ್ಯಾಪಾರ ಮಾಡಲಾಗುತ್ತದೆ. ಷೇರುಗಳು ಅಥವಾ ಆಪ್ಷನ್‌ಗಳಂತಹ ಆಸ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ಮಾಡಲಾಗುತ್ತದೆ. ಇದಕ್ಕೆ ತುಂಬಾ ಹಣ ಹಾಗೂ ಆಧುನಿಕ ತಂತ್ರಜ್ಞಾನ ಬೇಕು. ಇದಕ್ಕಾಗಿ ಅಲ್ಗೊರಿದಮ್‌ಗಳನ್ನು ಅಂದರೆ ವಿಶೇಷ ತಂತ್ರಾಂಶವನ್ನು ಬಳಸುತ್ತಾರೆ. ಅವು ಯಾವಾಗ ಕೊಳ್ಳಬೇಕು ಅಥವಾ ಮಾರಬೇಕು ಎಂದು ನಿರ್ಧರಿಸಲು ನೆರವಾಗುತ್ತವೆ. ಮಾರುಕಟ್ಟೆಯ ಮಾಹಿತಿಯನ್ನು ಕ್ಷಣದಲ್ಲಿ ಪರಿಶೀಲಿಸುತ್ತವೆ. ಇದರಿಂದ ಜೇನ್ ಸ್ಟ್ರೀಟ್ ಒಂದು ಕ್ಷಣದಲ್ಲಿ ಸಾವಿರಾರು ವಹಿವಾಟುಗಳನ್ನು ನಡೆಸುತ್ತದೆ. ಹಣ ಹಾಗೂ ತಾಂತ್ರಿಕ ಬೆಂಬಲ ಇದ್ದ ಸಂಸ್ಥೆಗಳಿಗಷ್ಟೇ ಎಲ್ಲರಿಗಿಂತ ಮುಂಚಿತವಾಗಿ ನಿರ್ಧಾರಗಳನ್ನು ತೆಗೆದುಕೊಂಡು, ಸಾವಿರಾರು ವ್ಯವಹಾರಗಳನ್ನು ಕ್ಷಣಮಾತ್ರದಲ್ಲಿ ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ. ಜೇನ್ ಸ್ಟ್ರೀಟ್ ಬಳಿ ಎಲ್ಲವೂ ಇದೆ. ಆದರೆ ಅದು ತನ್ನ ಈ ಎಲ್ಲಾ ಸಾಮರ್ಥ್ಯಗಳನ್ನು ಕೇವಲ ವಿಭಿನ್ನ ಹಣಕಾಸು ಸ್ವತ್ತುಗಳನ್ನು ಕೊಳ್ಳುವುದಕ್ಕೆ ಹಾಗೂ ಮಾರುವುದಕ್ಕಷ್ಟೇ ಸೀಮಿತಗೊಳಿಸಿಕೊಂಡಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನ ಅನುಕೂಲಕ್ಕೆ ತಕ್ಕಂತೆ ಮಾರುಕಟ್ಟೆಯ ಚಲನೆಯನ್ನೂ ನಿಯಂತ್ರಿಸುತ್ತಿದೆ. ಭಾರತದಲ್ಲಿ ಡಿರಿವಟಿವ್ ಕ್ಷೇತ್ರದಲ್ಲಿ ಶೇಕಡ 50ಕ್ಕೂ ಹೆಚ್ಚಿನ ವ್ಯವಹಾರ ನಡೆಸುತ್ತಿರುವವರು ಇಂತಹ ದೊಡ್ಡ ಹೂಡಿಕೆದಾರರೆ. ಇವರೊಂದಿಗೆ ಚಿಲ್ಲರೆ ಹೂಡಿಕೆದಾರರಿಗೆ ಸ್ಪರ್ಧಿಸುವುದಕ್ಕೆ ಸಾಧ್ಯವಿಲ್ಲ. ಹಾಗಾಗಿಯೇ ಇಂದು ಬಹುತೇಕ ನಷ್ಟ ಅನುಭವಿಸುತ್ತಿರುವವರು ಇಂತಹ ಚಿಲ್ಲರೆ ವ್ಯಾಪಾರಿಗಳು. ಸೆಬಿಯೇ ಹೇಳುವಂತೆ ಶೇಕಡ 91ರಷ್ಟು ಚಿಲ್ಲರೆ ಹೂಡಿಕೆದಾರರು 8600 ಕೋಟಿಯಷ್ಟು ಹಣ ಕಳೆದುಕೊಂಡಿದ್ದಾರೆ.

ಜೇನ್ ಸ್ಟ್ರೀಟ್ ವ್ಯವಹಾರದಲ್ಲಿ ಒಂದು ನಿರ್ದಿಷ್ಟ ವಿನ್ಯಾಸವನ್ನು ನೋಡಬಹುದು. ಅದು ತನ್ನ ಬಹುತೇಕ ವ್ಯವಹಾರಕ್ಕೆ ಅವಧಿಯ ಅಂತಿಮ ದಿನವನ್ನು ಆರಿಸಿಕೊಳ್ಳುತ್ತದೆ. ಅಂದೇ ಸ್ಟಾಕುಗಳ 'ಪಂಪಿಂಗ್ ಹಾಗೂ ಡಂಪಿಂಗ್' ಅಂದರೆ ಕೊಳ್ಳುವ ಹಾಗೂ ಮಾರುವ ಕೆಲಸವನ್ನು ಮುಗಿಸುತ್ತಿದೆ. ಅದರ ಇಡೀ ವ್ಯವಹಾರ ಬ್ಯಾಂಕ್ ನಿಫ್ಟಿಯನ್ನು ಮೇಲೆ ಕೆಳಗೆ ಮಾಡುವುದರ ಸುತ್ತಲೇ ನಡೆದಿದೆ. ಬ್ಯಾಂಕ್ ನಿಫ್ಟಿ ಅನ್ನುವುದು ಭಾರತದಲ್ಲಿ ಬ್ಯಾಂಕಿಂಗ್ ಕ್ಷೇತ್ರ ಎಷ್ಟು ಪರಿಣಾಮಕಾರಿಯಾಗಿದೆ ಅನ್ನುವುದರ ಸೂಚಿ. 12 ಬ್ಯಾಂಕುಗಳ ವ್ಯವಹಾರವನ್ನು ಆಧರಿಸಿ ಇದನ್ನು ಲೆಕ್ಕ ಹಾಕಲಾಗುತ್ತದೆ. ಬ್ಯಾಂಕ್ ನಿಫ್ಟಿ ಹೆಚ್ಚಿದ್ದರೆ ಬ್ಯಾಂಕಿಂಗ್ ಕ್ಷೇತ್ರ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ ಎಂದು ಹೂಡಿಕೆದಾರರು ಭಾವಿಸುತ್ತಾರೆ. ಲಾಭದ ನಿರೀಕ್ಷೆಯಿಂದ ಬ್ಯಾಂಕ್ ಸ್ಟಾಕುಗಳನ್ನು ಕೊಳ್ಳುತ್ತಾರೆ. ಅದು ಕುಸಿದರೆ



ಸ್ಟಾಕುಗಳನ್ನು ಮಾರಲು ಪ್ರಾರಂಭಿಸುತ್ತಾರೆ. ಎಲ್ಲಾ ವಹಿವಾಟುಗಳು ನಿಫ್ಟಿಗೆ ತೆಕ್ಕೆ ಹಾಕಿಕೊಂಡೆ ನಡೆಯುವುದು.

ಜೇನ್ ಸ್ಟ್ರೀಟ್ ಲಾಭವೆಲ್ಲಾ ಡಿರಿವಟಿವ್ ವ್ಯಹವಾರದಲ್ಲಿ ಬಂದಿರುವುದು. ಡಿರಿವಟಿವ್ ಅನ್ನುವುದು ಒಂದು ಹಣಕಾಸಿನ ಒಪ್ಪಂದ. ಅದಕ್ಕೆ ಅದರದೇ ಆದ ಮೌಲ್ಯವಿಲ್ಲ. ಅದು ಸ್ಟಾಕ್, ಸರಕು, ಕರೆನ್ಸಿ ಅಥವಾ ಇನ್ಯಾವುದಾದರೂ ಸ್ವತ್ತುಗಳ ಮೂಲಕ ತನ್ನ ಮೌಲ್ಯವನ್ನು ಪಡೆದುಕೊಳ್ಳುತ್ತದೆ (ಡಿರೈವ್ಡ್). ಉದಾಹರಣೆಗೆ ನೀವು ಮುಂದಿನ ತಿಂಗಳು ಒಂದು ಕೆಜಿ ಅಕ್ಕಿಯನ್ನು 50 ರೂಪಾಯಿಗೆ ಕೊಳ್ಳುವುದಕ್ಕೆ ಒಪ್ಪಿಕೊಳ್ಳುತ್ತೀರಿ. ಅದರ ಬೆಲೆ 60 ರೂಪಾಯಿ ಆದರೆ ನಿಮಗೆ ಲಾಭವಾಗುತ್ತದೆ. ನೀವು ಮಾಡಿಕೊಂಡ ಒಪ್ಪಂದದಿಂದಾಗಿ ನಿಮಗೆ ಅಕ್ಕಿ 50 ರೂಪಾಯಿಗೆ ಸಿಗುತ್ತದೆ. ಈ ಒಪ್ಪಂದದಿಂದಾಗಿ ನಿಮಗೆ 10 ರೂಪಾಯಿ ಲಾಭ ಮಾಡಿಕೊಳ್ಳುತ್ತೀರಿ. ಡಿರಿವಟಿವ್ 10 ರೂಪಾಯಿ ಮೌಲ್ಯ ಪಡೆದುಕೊಳ್ಳುತ್ತದೆ. ಅಕಸ್ಮಾತ್ ಅಕ್ಕಿಯ ಬೆಲೆ 40ರೂಪಾಯಿಗೆ ಇಳಿದುಬಿಟ್ಟರೆ ನಿಮಗೆ ನಷ್ಟವಾಗುತ್ತದೆ. ಯಾಕೆಂದರೆ ನೀವು ಈಗಾಗಲೇ ಒಪ್ಪಂದ ಮಾಡಿಕೊಂಡಿರುವುದರಿಂದ 40ರೂಪಾಯಿಗೆ ಸಿಗುವ ಅಕ್ಕಿಯನ್ನು 50 ಕೊಟ್ಟು ಕೊಳ್ಳಬೇಕಾಗುತ್ತದೆ. ಇಲ್ಲಿ ನೀವು ಅಕ್ಕಿಯನ್ನು ಮುಂದಿನ ತಿಂಗಳು 50 ರೂಪಾಯಿಗೆ ಕೊಳ್ಳಲು ಮಾಡಿಕೊಂಡ ಒಪ್ಪಂದವನ್ನು ಡಿರಿವಟಿವ್ ಅನ್ನಲಾಗುತ್ತದೆ. ಇಂತಹ ಒಪ್ಪಂದಗಳಲ್ಲಿ ಎರಡು ಬಗೆಯಿವೆ. ಒಂದು ಆಪ್ಷನ್ ಒಪ್ಪಂದ. ಮತ್ತೊಂದು ಫ್ಯೂಚರ್ ಒಪ್ಪಂದ. ಎರಡೂ ಒಂದು ನಿರ್ದಿಷ್ಟ ಅವಧಿಯೊಳಗೆ ಒಂದು ನಿರ್ದಿಷ್ಟ ಬೆಲೆಗೆ ನಿಗದಿತ ಪ್ರಮಾಣದ ವಸ್ತುಗಳನ್ನು ಕೊಳ್ಳುವುದಕ್ಕೆ ಅಥವಾ ಮಾರುವುದಕ್ಕೆ ಮಾಡಿಕೊಳ್ಳುವ ಒಪ್ಪಂದಗಳೆ. ಆದರೆ ಫ್ಯೂಚರ್ ಒಪ್ಪಂದದಲ್ಲಿ ನೀವು ನಿಮ್ಮ ಒಪ್ಪಂದವನ್ನು ಕಡ್ಡಾಯವಾಗಿ ಮಾನ್ಯ ಮಾಡಬೇಕು. ಉದಾಹರಣೆಗೆ ಒಬ್ಬ ರೈತ ಆರು ತಿಂಗಳ ನಂತರ 1 ಟನ್ ಗೋಧಿಯನ್ನು 20,000 ರೂಪಾಯಿಗೆ ಮಾರಲು ಒಪ್ಪಂದ ಮಾಡಿಕೊಳ್ಳುತ್ತಾನೆ ಅಂತಿಟ್ಟುಕೊಳ್ಳಿ. ಅಂದು ಅದರ ಬೆಲೆ 25000 ರೂಪಾಯಿ ಇರಬಹುದು, ಅಥವಾ 15,000 ಇರಬಹುದು. ಆದರೆ ಅವನು ಅದನ್ನು 20,000ಕ್ಕೇ ಮಾರಬೇಕು.

ಆದರೆ ಆಪ್ಷನ್ ಒಪ್ಪಂದದಲ್ಲಿ ನಿಮಗೆ ಆಯ್ಕೆ ಇದೆ. ಅದು ನಿಮಗಿರುವ ಹಕ್ಕು. ಹಕ್ಕನ್ನು ಚಲಾಯಿಸುವ ಅಥವಾ ಬಿಡುವ ಆಯ್ಕೆ ನಿಮ್ಮದು. ನಿಮಗೆ ಅನುಕೂಲಕರ ಅಲ್ಲದಿದ್ದಲ್ಲಿ ಆಯ್ಕೆ ಮಾಡಿಕೊಳ್ಳದೆ ಇರಬಹುದು. ಆಗ ನೀವು ಒಪ್ಪಂದದ ಸಮಯದಲ್ಲಿ ಪಾವತಿಸಿದ ಪ್ರಿಮಿಯಂ ಅನ್ನು ಕಳೆದುಕೊಳ್ಳುತ್ತೀರಿ. ಆಪ್ಷನ್ ವ್ಯವಹಾರದಲ್ಲಿ ಕೊಳ್ಳುವುದಕ್ಕೆ ಮಾಡಿಕೊಂಡ ಒಪ್ಪಂದವನ್ನು ಕಾಲ್ ಆಪ್ಷನ್ ಅಂತಲೂ ಮಾರುವುದಕ್ಕೆ ಮಾಡಿಕೊಂಡ ಒಪ್ಪಂದವನ್ನು ಪುಟ್ ಆಪ್ಷನ್ ಅಂತಲೂ ಕರೆಯುತ್ತಾರೆ.

ನೀವು ಒಂದು ಕಂಪೆನಿಯ ಷೇರನ್ನು 100 ರೂಪಾಯಿಗೆ ಕೊಳ್ಳುವುದಕ್ಕೆ ಕಾಲ್ ಆಪ್ಷನ್‌ಅನ್ನು ಖರೀದಿಸುತ್ತೀರಿ ಅಂತಿಟ್ಟುಕೊಳ್ಳಿ. ಆಗ ಅವಧಿಯೊಳಗೆ ನೀವು ಷೇರನ್ನು ಕೇಳಿದರೆ ನಿಮ್ಮೊಂದಿಗೆ ಒಪ್ಪಂದ ಮಾಡಿಕೊಂಡುವವರು ನಿಮಗೆ ನೂರು ರೂಪಾಯಿಗೆ ಅದನ್ನು ಮಾರಬೇಕು. ಆದರೆ ನಿಮಗೆ ಕೊಳ್ಳದೇ ಇರುವುದಕ್ಕೆ ಅವಕಾಶವಿದೆ. ಅವಧಿಯ ಕೊನೆಯಲ್ಲಿ ಅದರ ಬೆಲೆ 70 ರೂಪಾಯಿ ಆಗುತ್ತದೆ ಅಂದುಕೊಳ್ಳಿ. ಆಗ ನೀವು ನಿಮ್ಮ ಹಕ್ಕನ್ನು ಚಲಾಯಿಸಿ ನೂರು ರೂಪಾಯಿ ಕೊಟ್ಟು ಷೇರನ್ನು ಕೊಳ್ಳುವುದಿಲ್ಲ. ಯಾಕೆಂದರೆ ಅದು ಮಾರುಕಟ್ಟೆಯಲ್ಲಿ 70 ರೂಪಾಯಿಗೆ ಸಿಗುತ್ತದೆ. ಅದರಿಂದ ನೀವು ಈ ಹಕ್ಕಿಗಾಗಿ ಒಪ್ಪಂದದ ಸಮಯದಲ್ಲಿ ಕೊಟ್ಟಿದ್ದ ಪ್ರೀಮಿಯಂನ್ನು ಬಿಟ್ಟುಕೊಡುತ್ತೀರಿ. ಆದರೆ ಅದರ ಬೆಲೆ ಅದರ ಬೆಲೆ 130 ಆಗುತ್ತದೆ ಅಂದುಕೊಳ್ಳಿ. ಅಗ ನೀವು ಕೊಳ್ಳುವ ಹಕ್ಕನ್ನು ಚಲಾಯಿಸಿ ಷೇರನ್ನು 100 ರೂಪಾಯಿಗೆ ಕೊಳ್ಳುತ್ತೀರಿ.

ಪುಟ್ ಆಪ್ಷನ್ ಅನ್ನುವುದು ನಿಮಗೆ ಒಂದು ಸ್ವತ್ತನ್ನು ನಿರ್ದಿಷ್ಟ ಬೆಲೆಗೆ ಮಾರುವುದಕ್ಕೆ ಹಕ್ಕನ್ನು ನೀಡುತ್ತದೆ. ಉದಾಹರಣೆಗೆ ನೀವು ಒಂದು ಕಂಪೆನಿಯ ಷೇರನ್ನು 100 ರೂಪಾಯಿಗೆ ಮಾರುವುದಕ್ಕೆ ಪುಟ್ ಆಪ್ಷನ್ ಅನ್ನು ಖರೀದಿಸುತ್ತೀರಿ. ಒಂದು ವಾರದಲ್ಲಿ ಅದರ ಬೆಲೆ 70ರೂಪಾಯಿಗೆ ಕುಸಿಯುತ್ತದೆ ಅಂದುಕೊಳ್ಳಿ. ಆಗ ನೀವು 100 ರೂಪಾಯಿಗೆ ಮಾರುವ ಹಕ್ಕನ್ನು ಚಲಾಯಿಸುತ್ತೀರಿ. ಯಾಕೆಂದರೆ ನಿಮಗೆ 30 ರೂಪಾಯಿ ಲಾಭವಿದೆ. ಆದರೆ ಅದರ ಬೆಲೆ 150 ರೂಪಾಯಿ ಆದರೆ ನೀವು 100 ರೂಪಾಯಿಗೆ ಮಾರುವುದರಿಂದ ನಿಮಗೆ 50 ರೂಪಾಯಿ ನಷ್ಟವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನೀವು ಮಾರುವುದಕ್ಕೆ ಹೋಗುವುದಿಲ್ಲ. ಕಟ್ಟಿದ್ದ ಪ್ರೀಮಿಯಂ ಬಿಟ್ಟುಕೊಡುತ್ತೀರಿ.

ಜೇನ್ ಸ್ಟ್ರೀಟ್ ತನ್ನೆಲ್ಲಾ ಲಾಭವನ್ನು ಫ್ಯೂಚರ್ ಹಾಗೂ ಆಪ್ಷನ್ ವಹಿವಾಟಿನಲ್ಲಿ ಮಾಡಿಕೊಂಡಿದೆ. ಅದು ತನ್ನ ವಹಿವಾಟು ನಡೆಸುವುದಕ್ಕೆ ಒಂದು ನಿರ್ದಿಷ್ಟ ಕ್ರಮವನ್ನು ಅನುಸರಿಸಿದೆ. ಮೊದಲು ಬ್ಯಾಂಕ್ ನಿಫ್ಟಿ ಕುಸಿಯುತ್ತದೆ ಅಂತ ಡಿರಿವಟಿವ್ ಮಾರುಕಟ್ಟೆಯಲ್ಲಿ ಬಾಜಿ ಕಟ್ಟುತ್ತದೆ. ಅಮೇಲೆ ಅದು ಬ್ಯಾಂಕ್ ನಿಫ್ಟಿಯನ್ನು ಕುಸಿಯುವಂತೆ ಮಾಡುತ್ತದೆ ಅನ್ನುವುದು ಅದರ ಮೇಲಿನ ಆರೋಪ. ಎಲ್ಲೊ ಒಂದೆರಡು ಸಲ ಅದು ಬೆಟ್ ಗೆದ್ದಿದ್ದರೆ ಅದರ ಅದೃಷ್ಟ ಅಂತ ಸುಮ್ಮನಿರಬಹುದು. ಆದರೆ ಅದು ಟ್ರೇಡ್ ಮಾಡಿದ ಪ್ರತಿ ಬಾರಿಯೂ ನಿಫ್ಟಿ ಕುಸಿಯುತ್ತಿರುವುದನ್ನು ನೋಡಿದರೆ ಅದರಲ್ಲಿ ಜೇನ್ ಸ್ಟ್ರೀಟ್ ಕೈವಾಡ ಇರಬಹುದೆ ಅನ್ನುವ ಅನುಮಾನ ಸಹಜವಾಗಿಯೇ ಹುಟ್ಟಿಕೊಳ್ಳುತ್ತದೆ.

ಜೊತೆಗೆ ಅನುಮಾನಕ್ಕೆ ಇನ್ನೊಂದು ಕಾರಣವೂ ಇದೆ. ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚು ಕಮ್ಮಿಯಾಗುವುದಕ್ಕೆ ಯಾವುದಾದರೂ ಯುದ್ಧವೋ, ರಾಜಕೀಯ ಘಟನೆಯೋ, ಸರ್ಕಾರದ ನೀತಿಯೋ ಹೀಗೆ ಯಾವುದೋ ಒಂದು ಕಾರಣ ಇರುತ್ತದೆ. ಅಂತಹ ಯಾವುದೇ ಘಟನೆಗಳು ನಡೆಯದಿದ್ದಾಗ್ಯೂ ಮಾರುಕಟ್ಟೆಯಲ್ಲಿ ಏರಿಳಿತಗಳು ಕಾಣಿಸಿಕೊಳ್ಳತೊಡಗಿದಾಗ ಸಹಜವಾಗಿಯೇ ಅನುಮಾನ ಬರುತ್ತದೆ. ಅಪಾರ ಹಣ ಕಳೆದುಕೊಂಡ ಕೆಲವು ಹೂಡಿಕೆದಾರರಿಗೆ ಇಂತಹ ಅನುಮಾನ ಬಂತು. ಈ ಅಸಹಜ ಬೆಳವಣಿಗೆಯನ್ನು ಕುರಿತಂತೆ ಅವರು ತಮ್ಮ ಅನುಮಾನವನ್ನು ಸೆಬಿ ಗಮನಕ್ಕೆ ತರದರು. ಆದರೆ ಇವೆಲ್ಲಾ ಜೇನ್ ಸ್ಟ್ರೀಟ್ ಸಂಸ್ಥೆಯ ಕೈವಾಡ ಅನ್ನುವುದು ತಿಳಿದಿರಲಿಲ್ಲ. ಅದು ಗೊತ್ತಾಗಿದ್ದು ಜೇನ್ ಸ್ಟ್ರೀಟ್ ನ್ಯಾಯಾಲಯದಲ್ಲಿ ಮಿಲಿನಿಯಂ ಮ್ಯಾನೇಜ್‌ಮೆಂಟ್ ಸಂಸ್ಥೆಯ ಮೇಲೆ ಹೂಡಿದ ಒಂದು ಮೊಕದ್ದಮೆಯಿಂದ. ಜೇನ್ ಸ್ಟ್ರೀಟ್‌ನಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ನೌಕರರನ್ನು ಮಿಲಿನಿಯಂ ತನ್ನ ಸಂಸ್ಥೆಗೆ ಸೆಳೆದುಕೊಂಡಿದೆ. ಹಾಗೂ ಅವರ ಮೂಲಕ ಜೇನ್ ಸ್ಟ್ರೀಟ್ ಬಳಸುತ್ತಿದ್ದ ವ್ಯಾಪಾರದ ತಂತ್ರವನ್ನು ತಿಳಿದುಕೊಂಡು ಅದನ್ನು ತನ್ನ ವ್ಯಾಪಾರದಲ್ಲಿ ಬಳಸಿಕೊಳ್ಳುತ್ತಿದೆ ಎಂದು ಜೇನ್ ಸ್ಟ್ರೀಟ್ ಮಿಲಿನಿಯಂ ಸಂಸ್ಥೆಯ ವಿರುದ್ಧ ದೂರು ನೀಡಿತು. ವಿಚಾರಣೆಯ ಸಮಯದಲ್ಲಿ ಭಾರತದಲ್ಲಿ ಅದು ಅನುಸರಿಸುತ್ತಿದ್ದ ಕಾರ್ಯತಂತ್ರ ಬಹಿರಂಗವಾಗಿತ್ತು.
ಫ್ಯೂಚರ್ ಅಂಡ್ ಆಪ್ಷನ್ ವ್ಯವಹಾರದಲ್ಲಿ ಅಪಾರ ಹಣ

ಕಳೆದುಕೊಂಡಿದ್ದ ದೊಡ್ಡ ವ್ಯಾಪಾರಿಗಳು ಇದನ್ನು ಸೆಬಿಯ ಗಮನಕ್ಕೆ ತಂದರು. ಇದು ಸೆಬಿ ಪರಿಶೀಲನೆ ನಡೆಸುವುದಕ್ಕೆ ಹಾಗೂ ಕ್ರಮ ತೆಗೆದುಕೊಳ್ಳುವುದಕ್ಕೆ ಕಾರಣವಾಯಿತು. ದೊಡ್ಡ ವ್ಯಾಪಾರಿಗಳು ಕಳೆದುಕೊಳ್ಳ ತೊಡಗಿದ ಮೇಲೆಯೇ ಸೆಬಿ ತನಿಖೆ ನಡೆಸಿದ್ದು. ಅದಕ್ಕೆ ಮೊದಲು ಸಾವಿರಾರು ಚಿಲ್ಲರೆ ವ್ಯಾಪಾರಿಗಳು ಹಣ ಕಳೆದುಕೊಳ್ಳುತ್ತಲೇ ಇದ್ದರು.

ಸೆಬಿ ತನ್ನ ವರದಿಯಲ್ಲಿ ಜೇನ್ ಸ್ಟ್ರೀಟ್ ಅನುಸರಿಸುತ್ತಿದ್ದ ನಿರ್ದಿಷ್ಟ ಕ್ರಮವನ್ನು ದಾಖಲಿಸಿದೆ. ಅದರ ಬಹುತೇಕ ವ್ಯವಹಾರ ನಡೆಯುತ್ತಿದ್ದುದು ವಾಯಿದೆಯ ಅಂತಿಮ ದಿನ. ಅದು ಬ್ಯಾಂಕ್ ನಿಫ್ಟಿ ಬೀಳುತ್ತದೆ ಎಂದು ಬಾಜಿ ಕಟ್ಟುತ್ತದೆ. ನಿಫ್ಟಿ ಬೀಳುವುದಕ್ಕೆ ಕಾಯುವುದಕ್ಕೆ ಕಾಯುತ್ತಾ ಕೂರುವುದಿಲ್ಲ. ಬೀಳಿಸುವುದಕ್ಕೆ ಯೋಜನೆಯನ್ನು ಚಾಲು ಮಾಡುತ್ತದೆ. ಅದು ತನ್ನ ಯೋಜನೆಯನ್ನು ಎರಡು ಹಂತದಲ್ಲಿ ರೂಪಿಸಿಕೊಂಡಿದೆ. ಮೊದಲ ಹಂತದಲ್ಲಿ ನಿಫ್ಟಿಯನ್ನು ಏರಿಸುವ ಕೆಲಸ ಪ್ರಾರಂಭಿಸುತ್ತದೆ. ಬೆಳಗ್ಗೆ ಮಾರುಕಟ್ಟೆ ತೆರೆಯುತ್ತಿದ್ದಂತೆ ಅಂದರೆ ಸುಮಾರು 9.15ರಿಂದ ನಿಫ್ಟಿಯ ಸೂಚಿಯನ್ನು ಪ್ರಭಾವಿಸುವ ಕೆಲವು ಪ್ರಮುಖ ಬ್ಯಾಂಕುಗಳ ಸ್ಟಾಕುಗಳನ್ನು ದೊಡ್ಡ ಪ್ರಮಾಣದಲ್ಲಿ ಕೊಳ್ಳಲು ಪ್ರಾರಂಭಿಸುತ್ತದೆ. ಸಾಮಾನ್ಯವಾಗಿ ಈಗ ಬಿಕರಿಯಾಗುತ್ತಿರುವ ದರಕ್ಕಿಂತ (ಎಲ್‌ಟಿಪಿ) ಕಡಿಮೆಗೆ ಅಥವಾ ಅದೆ ಬೆಲೆಗೆ ಸ್ಟಾಕುಗಳನ್ನು ಕೊಳ್ಳುವುದು ರೂಢಿ. ಆದರೆ ಜೇನ್ ಸ್ಟ್ರೀಟ್‌ಗೆ ಬೆಲೆಗಳನ್ನು ಏರಿಸಬೇಕಿದೆ. ಹಾಗಾಗಿ ಬಿಕರಿಯಾಗುತ್ತಿರುವ ಬೆಲೆಗಿಂತ ಹೆಚ್ಚಿನ ಬೆಲೆಗೆ ಕೊಳ್ಳುತ್ತದೆ. ಆ ಮೂಲಕ ಸ್ಟಾಕುಗಳ ಬೆಲೆಯನ್ನು ಏರಿಸುತ್ತಾ ಹೋಗುತ್ತದೆ. ಸ್ಟಾಕುಗಳು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುತ್ತಿರುವುದನ್ನು ಹಾಗೂ ಅದರ ಬೆಲೆ ಏರುತ್ತಿರುವುದನ್ನು ನೋಡಿ ಜನ ಅದಕ್ಕೆ ಬೇಡಿಕೆ ಇದೆ ಎಂದು ಭಾವಿಸುತ್ತಾ ಅವರೂ ಕೊಳ್ಳತೊಡಗುತ್ತಾರೆ. ಸ್ಟಾಕಿನ ಬೆಲೆ ಇನ್ನೂ ಏರುತ್ತಾ ಹೋಗುತ್ತದೆ. ಅದರಿಂದಾಗಿ ಬ್ಯಾಂಕ್ ನಿಫ್ಟಿಯೂ ಏರುತ್ತದೆ. ನಿಫ್ಟಿ ಏರಿದರೆ ಕಾಲ್ (ಕೊಳ್ಳುವ) ಪ್ರೀಮಿಯಂ ಕೂಡ ಏರತೊಡಗುತ್ತದೆ. ಪುಟ್ಸ್‌ಗೆ(ಮಾರುವ ಆಪ್ಷನ್ನಿಗೆ) ಪ್ರೀಮಿಯಂ ಇಳಿಯುತ್ತದೆ.

ಸೆಬಿ ಅಧ್ಯಯನ ಮಾಡಿರುವ ದಿನ ಜೇನ್ ಸ್ಟ್ರೀಟ್ ಎಚ್‌ಡಿಎಫ್‌ಸಿ, ಐಸಿಐಸಿಐ, ಎಸ್‌ಬಿಐ, ಅಕ್ಸಿಸ್ ಇತ್ಯಾದಿ ಬ್ಯಾಂಕುಗಳ ಸ್ಟಾಕನ್ನು ದೊಡ್ಡ ಪ್ರಮಾಣದಲ್ಲಿ ಕೊಂಡಿದೆ. ಐಸಿಐಸಿಐ ಬ್ಯಾಂಕಿನ ಒಟ್ಟಾರೆ ವ್ಯಾಪಾರವಾದ ಸ್ಟಾಕುಗಳಲ್ಲಿ ಜೇನ್ ಸ್ಟ್ರೀಟ್ ಒಂದೇ 23.3% ಸ್ಟಾಕುಗಳನ್ನು, ಅಕ್ಸಿಸ್ ಬ್ಯಾಂಕಿನಿಂದ 24% ಸ್ಟಾಕುಗಳನ್ನು, ಎಸ್‌ಬಿಐ ಇಂದ ಸುಮಾರು 25% ಸ್ಟಾಕುಗಳನ್ನು ಖರೀದಿಸಿದೆ. ನೆಫ್ಟಿ ಸೂಚಿಯ ದೃಷ್ಟಿಯಿಂದ ಮುಖ್ಯವಾದ ಕೆಲವು ಪ್ರಮುಖ ಬ್ಯಾಂಕುಗಳಿಂದ ದೊಡ್ಡ ಪ್ರಮಾಣದಲ್ಲಿ ಸ್ಟಾಕುಗಳನ್ನು ಕೊಂಡಿದೆ. ಅಷ್ಟೇ ಅಲ್ಲ ಹೆಚ್ಚಿನ ಸ್ಟಾಕುಗಳನ್ನು ಬಿಕರಿಯಾಗುತ್ತಿರುವ ಬೆಲೆಗಿಂತ ಹೆಚ್ಚಿನ ಬೆಲೆಗೆ ಕೊಂಡಿದ್ದಾರೆ. ಉದಾಹರಣೆಗೆ ಅವರು ಐಸಿಐಸಿಐ ಬ್ಯಾಂಕಿನ 15316 ಆರ್ಡರ್‌ಗಳಲ್ಲಿ 7318 ಅರ್ಡರುಗಳನ್ನು ಹೆಚ್ಚಿನ ಬೆಲೆಗೆ ಕೊಂಡಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಬ್ಯಾಂಕಿನ ಸ್ಟಾಕುಗಳು ಅದೂ ಹೆಚ್ಚೆಚ್ಚು ಬೆಲೆಗೆ ಮಾರಾಟವಾಗುತ್ತಿದ್ದರೆ ಸಹಜವಾಗಿಯೆ ಸ್ಟಾಕುಗಳ ಬೆಲೆ ಹೆಚ್ಚುತ್ತದೆ. ಹಾಗೆಯೆ ನಿಫ್ಟಿಯೂ ಏರುತ್ತದೆ. ನಿಫ್ಟಿ ಹೆಚ್ಚಿದರೆ ಅದರಲ್ಲಿ ಹೂಡಿದರೆ ಹೆಚ್ಚಿನ ಆದಾಯದ ನಿರೀಕ್ಷೆಯಲ್ಲಿ ಜನ ಬ್ಯಾಂಕುಗಳ ಸ್ಟಾಕನ್ನು ಕೊಳ್ಳತೊಡಗುತ್ತಾರೆ. ಬೆಲೆಗಳು ಮತ್ತಷ್ಟು ಏರುತ್ತವೆ. ಬೆಲೆಗಳು ತಮ್ಮ ನಿರೀಕ್ಷೆಯ ಮಟ್ಟಕ್ಕೆ ಬರುವ ತನಕ ಜೇನ್ ಸ್ಟ್ರೀಟ್ ಕೊಳ್ಳುವ (ಪಂಪಿಂಗ್) ಪ್ರಕ್ರಿಯೆಯನ್ನು ಮುಂದುವರಿಸುತ್ತದೆ.
ಈಗ ಎರಡನೆಯ ಹಂತ, ಬ್ಯಾಂಕ್ ನಿಫ್ಟಿಯನ್ನು ಬೀಳಿಸುವ ಕೆಲಸ ಪ್ರಾರಂಭವಾಗುತ್ತದೆ. ಬೆಳಗಿನಿಂದ ನಡೆಸಿಕೊಂಡು ಬಂದಿದ್ದ ಪ್ರಕ್ರಿಯೆಗೆ ತದ್ವಿರುದ್ಧವಾದ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಬೆಳಗ್ಗೆಯಿಂದ ಕೊಂಡು ಗುಡ್ಡೆ ಹಾಕಿಕೊಂಡಿದ್ದ ಬ್ಯಾಂಕಿನ ಸ್ಟಾಕುಗಳನ್ನು ಮಾರಲು ಪ್ರಾರಂಭಿಸುತ್ತಾರೆ. ಮಾರುಕಟ್ಟೆಯಲ್ಲಿ ಸ್ಟಾಕುಗಳನ್ನು ಡಂಪ್ ಮಾಡುವ ಕೆಲಸ ಚಾಲು ಆಗುತ್ತದೆ. ಒಂದೆರಡು ಗಂಟೆಗಳಲ್ಲಿ ನಿಫ್ಟಿಯನ್ನು ಬೀಳಿಸಬೇಕು. ದೊಡ್ಡ ಪ್ರಮಾಣದಲ್ಲಿ ಸ್ಟಾಕುಗಳನ್ನು ಮಾರತೊಡಗುತ್ತಾರೆ. ಸೆಬಿ ಅಧ್ಯಯನ ಮಾಡಿದ ದಿನ ಜೇನ್ ಸ್ಟ್ರೀಟ್ ಒಂದೇ ಶೇಕಡ 25ರಷ್ಟು ಸ್ಟಾಕುಗಳನ್ನು ಮಾರಿದೆ. ಕೇವಲ ದೊಡ್ಡ ಪ್ರಮಾಣದಲ್ಲಿ ಮಾರಿದರೆ ಬೆಲೆಗಳು ಬೀಳದೆ ಹೋಗಬಹುದು. ಹಾಗಾಗಿ ಮಾರುಕಟ್ಟೆಯಲ್ಲಿ ಬಿಕರಿಯಾಗುತ್ತಿರುವ ಬೆಲೆಗಿಂತ ಕಡಿಮೆ ಬೆಲೆಗೆ ಮಾರುತ್ತಾರೆ. ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸ್ಟಾಕುಗಳು ಮಾರಾಟವಾಗತೊಡಗಿದಾಗ, ಅದೂ ಅಷ್ಟೊಂದು ಅಗ್ಗದ ಬೆಲೆಯಲ್ಲಿ ಮಾರಾಟವಾಗುತ್ತಿದ್ದರೆ ಸಹಜವಾಗಿಯೆ ಜನ ಆತಂಕಗೊಳ್ಳುತ್ತಾರೆ. ಸ್ಟಾಕುಗಳ ಬೆಲೆ ಇನ್ನಷ್ಟು ಕುಸಿಯುತ್ತದೆ. ಪ್ರಮುಖ ಬ್ಯಾಂಕುಗಳ ಸ್ಟಾಕ್ ಬೆಲೆ ಕುಸಿಯುತ್ತಿದ್ದಂತೆ ನಿಫ್ಟಿಯು ಬೀಳುತ್ತದೆ. ಜೇನ್ ಸ್ಟ್ರೀಟ್ ಗುರಿ ಸಾಧಿಸಿದರು. ಬಾಜಿ ಗೆಲ್ಲುತ್ತಾರೆ. ಅವಧಿಯ ಮುಕ್ತಾಯದ ಸಮಯದ ಬೆಲೆ ಮುಖ್ಯವಾಗುತ್ತದೆ. ಫ್ಯೂಚರ್ ಆಪ್ಷನ್ ಒಪ್ಪಂದದ ವ್ಯವಹಾರ ಕುದುರುವುದೇ ಆ ಬೆಲೆಗೆ.

ಫ್ಯೂಚರ್ ಮತ್ತು ಆಪ್ಷನ್ ವ್ಯವಹಾರ:

ಇದು ಅವರು ನಿಫ್ಟಿಯನ್ನು ಬೀಳಿಸಿದ ಕಥೆಯಾಯಿತು. ಇದು ಬಹುತೇಕ ನಗದು ವ್ಯಾಪಾರ. ಅವರು ಬಹುತೇಕ ಲಾಭ ಮಾಡಿಕೊಂಡಿರುವುದು ಫ್ಯೂಚರ್ ಮತ್ತು ಆಪ್ಷನ್ ವ್ಯವಹಾರದಲ್ಲಿ. ಸೆಬಿ ಜನವರಿ 17, 2024ರ ವ್ಯವಹಾರದ ಅಧ್ಯಯನದ ವರದಿಯನ್ನು ಗಮನಿಸೋಣ.

ಜನವರಿ 17, 2024ರಂದು ಬೆಳಗ್ಗೆ ಜೇನ್ ಸ್ಟ್ರೀಟ್ ಬ್ಯಾಂಕ್ ನಿಫ್ಟಿಯಲ್ಲಿ ನಮೂದಾಗಿರುವ ಪ್ರಮುಖ ಬ್ಯಾಂಕುಗಳ ಸುಮಾರು 4370 ಕೋಟಿ ರೂಪಾಯಿ ಮೌಲ್ಯದ ಸ್ಟಾಕ್ ಹಾಗೂ ಫ್ಯೂಚರ್‌ಗಳನ್ನು ಖರೀದಿಸಿತು. ಇಷ್ಟೊಂದು ದೊಡ್ಡ ಪ್ರಮಾಣದ ಕೊಳ್ಳುವಿಕೆಯಿಂದ ನಿಫ್ಟಿ ಸೂಚಿ 600 ಪಾಯಿಂಟ್ ಏರಿತು. ಆ ಮೂಲಕ ಅದು ಕೃತಕವಾಗಿ ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಏರಿಸಿತು. ಅಂದು ಮಾರುಕಟ್ಟೆ ಪ್ರಾರಂಭವಾದಾಗ 9.15 ಗಂಟೆಗೆ ಬ್ಯಾಂಕ್ ನಿಫ್ಟಿ 46573.93 ಇದ್ದುದು ಏಳೆ ನಿಮಿಷದಲ್ಲಿ 9.22ರ ವೇಳೆಗೆ ಅದು 47176.97. ಆಯಿತು. ಸುಮಾರು 600 ಪಾಯಿಂಟ್ ಹೆಚ್ಚಾಯಿತು.

ಮದ್ಯಾಹ್ನ ಜೇನ್ ಸ್ಟ್ರೀಟ್ 5372 ಕೋಟಿ ಮೌಲ್ಯದ ಸ್ಟಾಕುಗಳನ್ನು ಮಾರಾಟ ಮಾಡಿತು. ಈ ಮೂಲಕ ನಿಫ್ಟಿ ಕುಸಿಯುವಂತೆ ಮಾಡಿತು. ಯಾಕೆಂದರೆ ನಿಫ್ಟಿ ಕುಸಿದದ್ದರಿಂದ ಪುಟ್ ಆಪ್ಷನ್ ಮೌಲ್ಯ ಹೆಚ್ಚಾಯಿತು. ಇದರಿಂದ ಪುಟ್ ಆಪ್ಷನ್‌ನಿಂದ ಲಾಭ ಬಂತು.

ಈಗ ಅದರ ಕಾಲ್ ಆಪ್ಷನ್ ಮಾರಾಟದ ಹಾಗೂ ಪುಟ್ ಆಪ್ಷನ್ ಕೊಳ್ಳುವುದರ ವ್ಯವಹಾರವನ್ನು ಗಮನಿಸೋಣ.
ಅಂದು ಅದು 3661ಕೋಟಿ ರೂಪಾಯಿ ಮೌಲ್ಯದ ಕಾಲ್ ಆಪ್ಷನ್ ಮಾರಾಟ ಮಾಡಿದೆ. ಅಂದರೆ ಒಂದು ನಿರ್ದಿಷ್ಟ ಬೆಲೆಗೆ ಬ್ಯಾಂಕ್ ಸ್ಟಾಕನ್ನು ಮಾರುವುದಕ್ಕೆ ಒಪ್ಪಂದ ಮಾಡಿಕೊಳ್ಳುತ್ತದೆ. ಆಪ್ಷನ್ ಕೊಂಡವರಿಗೆ ಒಪ್ಪಂದ ಮಾಡಿಕೊಂಡ ಬೆಲೆಗೆ ಸ್ಟಾಕನ್ನು ಕೊಳ್ಳುವ ಹಕ್ಕು ಸಿಗುತ್ತದೆ. ಆ ಹಕ್ಕನ್ನು ಪಡೆದುಕೊಳ್ಳುವುದಕ್ಕಾಗಿ ಅವರು ಪ್ರೀಮಿಯಂ ಕಟ್ಟಿರುತ್ತಾರೆ. ಅಂದು ಕಾಲ್ ಪ್ರೀಮಿಯಂ ವಿಪರೀತ ಏರಿಕೆಯನ್ನು ಕಂಡಿತ್ತು. ಬೆಳಗ್ಗೆ ಮಾರುಕಟ್ಟೆ ಪ್ರಾರಂಭವಾದಾಗ 9.15ಕ್ಕೆ 198 ಇದ್ದುದು ಕೇವಲ 7 ನಿಮಿಷದಲ್ಲಿ 458 ಆಗಿತ್ತು. ಸಹಜವಾಗಿಯೇ ಜೇನ್ ಸ್ಟ್ರೀಟ್ ಬಳಿ ವಿಪರೀತ ಪ್ರೀಮಿಯಂ ಸಂಗ್ರಹವಾಗಿತ್ತು. ನಿಜ ಅವರ ಇಡೀ ಆಪ್ಷನನ್ನು ಒಂದೇ ದರದಲ್ಲಿ ಮಾರಿಲ್ಲ. ಆದರೆ ಸುಮಾರು 400ರಿಂದ 500 ರೂಪಾಯಿವರೆಗೆ ಪ್ರೀಮಿಯಂ ಸಂಗ್ರಹಿಸಿರುತ್ತಾರೆ. ಅವರು ದೊಡ್ಡ ಪ್ರಮಾಣದ ಸ್ಟಾಕುಗಳನ್ನು ಕಡಿಮೆ ದರಕ್ಕೆ ಮಾರಿದ್ದರಿಂದ ಮಾರುಕಟ್ಟೆಯ ಮುಕ್ತಾಯದ ವೇಳೆಗೆ ಬ್ಯಾಂಕ್ ನಿಫ್ಟಿ ವಿಪರೀತ ಕುಸಿಯಿತು. 0.65 ಅಯಿತು! ಮಾರುಕಟ್ಟೆಯಲ್ಲಿ ಸ್ಟಾಕ್ ಬೆಲೆ ಅಷ್ಟೊಂದು

ಕಡಿಮೆಯಾಗಿದ್ದರಿಂದ ಕಾಲ್ ಆಪ್ಷನ್ ಕೊಂಡವರು ಅವರು 400 –500 ಕೊಟ್ಟು ಇವರಿಂದ ಸ್ಟಾಕ್ ಕೊಳ್ಳುವುದಿಲ್ಲ. ಹಾಗಾಗಿ ಸಂಗ್ರಹವಾದ ಪ್ರೀಮಿಯಂ ಜೇನ್ ಸ್ಟ್ರೀಟ್ ಬಳಿಯಲ್ಲೇ ಉಳಿಯುತ್ತದೆ. ಇದು ಕಾಲ್ ಆಪ್ಷನ್ ಕಥೆ.

ಇನ್ನು ಪುಟ್ ಆಪ್ಷನ್ ಕಥೆಯನ್ನು ನೋಡೋಣ. ಅಂದು ಜೇನ್ ಸ್ಟ್ರೀಟ್ 5089 ಕೋಟಿ ಮೌಲ್ಯದ ಪುಟ್ ಆಪ್ಷನ್ ಅನ್ನು ಖರೀದಿಸಿದೆ. ಅಂದರೆ ಒಂದು ನಿರ್ದಿಷ್ಟ ಬೆಲೆಗೆ ಬ್ಯಾಂಕಿನ ಸ್ಟಾಕನ್ನು ಮಾರುವ ಹಕ್ಕನ್ನು ಅದು ಪಡೆದುಕೊಳ್ಳುತ್ತದೆ. ಆ ಹಕ್ಕಿಗಾಗಿ ಅದು ಒಂದಿಷ್ಟು ಪ್ರೀಮಿಯಂ ಕಟ್ಟಿರುತ್ತದೆ. ಈ ವ್ಯವಹಾರದಲ್ಲಿ ಬ್ಯಾಂಕ್ ನಿಫ್ಟಿ ಕುಸಿದಷ್ಟು ಜೇನ್ ಸ್ಟ್ರೀಟ್‌ಗೆ ಹೆಚ್ಚು ಲಾಭ. ಉದಾಹರಣೆಗೆ ನಿಫ್ಟಿ 25,000 ಇತ್ತು ಎಂದಿಟ್ಟುಕೊಳ್ಳಿ. ಜೇನ್ ಸ್ಟ್ರೀಟ್ ಸ್ಟಾಕನ್ನು 24,500 ರೂಪಾಯಿಗೆ ಕೊಳ್ಳುತ್ತದೆ. ಮತ್ತು ಪ್ರತಿ ಆರ್ಡರಿಗೆ 100 ಪ್ರಿಮಿಯಂ ಕೊಡುತ್ತದೆ ಅಂತಿಟ್ಟುಕೊಳ್ಳಿ. ನಿಫ್ಟಿ ಅವಧಿ ಮುಗಿಯುವಾಗ 24,000ಕ್ಕೆ ಕುಸಿಯುತ್ತದೆ ಅಂತಿಟ್ಟುಕೊಳ್ಳಿ. ಮಾರುಕಟ್ಟೆ ಬೆಲೆ 24,000ರೂಪಾಯಿಗೆ ಕುಸಿದಿದ್ದರೂ ಅದು ಸ್ಟಾಕನ್ನು 24,500ರೂಪಾಯಿಗೆ ಮಾರಬಹುದು. ಅಂದರೆ ಪುಟ್ ಅಪ್ಷನ್ ಮೌಲ್ಯ ಈಗ ಪ್ರತಿ ಆಪ್ಷನ್ನಿಗೆ 24,500– 24,000 =500 ರೂಪಾಯಿ ಆಗಿದೆ. ಅದು ಕಟ್ಟಿದ್ದ ಪ್ರೀಮಿಯಂ 100 ರೂಪಾಯಿ ಕಳೆದರೆ ಅದರ ಲಾಭ 400 ರೂಪಾಯಿ ಆಗುತ್ತದೆ. ನಿಫ್ಟಿ ಬಿದ್ದಷ್ಟೂ ಅದರ ಲಾಭ ಹೆಚ್ಚು. ಅದು ಅಪಾರ ಪ್ರಮಾಣದಲ್ಲಿ ಪುಟ್ ಆಪ್ಷನ್ ಕೊಂಡಿದ್ದರಿಂದ ವಿಪರೀತ ಲಾಭ ಮಾಡಿಕೊಂಡಿದೆ.

ಒಟ್ಟಾರೆಯಾಗಿ ಪುಟ್ ಆಪ್ಷನ್ ಕೊಳ್ಳುವುದರಿಂದಲೂ ಲಾಭ ಮಾಡಿಕೊಂಡಿದೆ. ಹಾಗೆಯೇ ಕಾಲ್ ಆಪ್ಷನ್ ಮಾರುವ ಮೂಲಕವೂ ಅಪಾರ ಲಾಭ ಮಾಡಿಕೊಂಡಿದೆ. ಒಂದೇ ದಿನದಲ್ಲಿ ಆ ಸಂಸ್ಥೆ 673.33 ರೂಪಾಯಿ ಲಾಭ ಮಾಡಿಕೊಂಡಿದೆ. ಇದು ಸಾಧ್ಯವಾಗಿದ್ದು ನಿಫ್ಟಿಯನ್ನು ಬೀಳಿಸುವುದರಲ್ಲಿ ಅದು ಸಫಲವಾಗಿದ್ದರಿಂದ. ದೊಡ್ಡ ಪ್ರಮಾಣದ ಹಾಗೂ ತೀವ್ರವಾದ ವ್ಯಾಪಾರದಿಂದ ಇದು ಸಾಧ್ಯವಾಗಿತ್ತು. ಹಾಗಾಗಿಯೇ ಅವರು ನಡೆಸಿದ ವಿವಿಧ ವ್ಯವಹಾರ ಅಕ್ರಮವಲ್ಲದಿದ್ದರೂ ಅದರ ಪ್ರಮಾಣ ಹಾಗೂ ತೀವ್ರತೆ ಅಕ್ರಮ ಎಂದು ಸೆಬಿ ಅಭಿಪ್ರಾಯ ಪಟ್ಟಿದೆ. ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸ್ಟಾಕುಗಳನ್ನು ಕೊಳ್ಳುವುದಕ್ಕೆ ಅಥವಾ ಮಾರುವುದಕ್ಕೆ ಯಾವುದೆ ಆರ್ಥಿಕ ಕಾರಣಗಳಿಲ್ಲ. ಅದು ಬ್ಯಾಂಕ್ ನಿಫ್ಟಿ ಮಾರುಕಟ್ಟೆಯ ಮೇಲೆ ಮಾಡಿದ ಪ್ರಭಾವ ಇಲ್ಲಿ ಸಮಸ್ಯೆಯಾಗಿರುವುದು.

ಇದನ್ನು ಗಮನಿಸಿದ್ದ ಸೆಬಿ ಅದಕ್ಕೆ ಈ ವ್ಯಹಾರವನ್ನು ನಿಲ್ಲಿಸುವಂತೆ ಎಚ್ಚರಿಕೆಯ ನೋಟಿಸನ್ನು ನೀಡಿತ್ತು. ಅದರೆ ಜೇನ್ ಸ್ಟ್ರೀಟ್ ಎಚ್ಚ–ರಿಕೆಯನ್ನು ಲೆಕ್ಕಿಸದೆ ತನ್ನ ವ್ಯವಹಾರವನ್ನು ಮುಂದುವರಿಸಿತ್ತು. ಹಾಗಾಗಿ ಸೆಬಿ 4853.57 ಕೋಟಿ ರೂಪಾಯಿಗಳಷ್ಟು ಅಕ್ರಮ ಗಳಿಕೆಯನ್ನು ಮುಟ್ಟುಗೋಲು ಹಾಕಿಕೊಂಡಿತು. ಜೊತೆಗೆ ದಂಡವನ್ನು ವಿಧಿಸಿತ್ತು. ಇದು ವಿದೇಶಿ ಸಂಸ್ಥೆಯ ವಿರುದ್ಧ ತೆಗೆದುಕೊಂಡ ಅಪರೂಪದ ಕ್ರಮವಾಗಿದೆ.

ಈ ವಾಯಿದಾ ಒಪ್ಪಂದಲ್ಲಿ ಒಬ್ಬರು ಲಾಭ ಮಾಡಿಕೊಂಡರೆ ಇನ್ನೊಬ್ಬರು ನಷ್ಟ ಮಾಡಿಕೊಳ್ಳಲೇಬೇಕು. ಇತ್ತೀಚಿನ ದಿನಗಳಲ್ಲಿ ಆಪ್ಷನ್ ಮಾರುಕಟ್ಟೆಯಲ್ಲಿ ನೆಫ್ಟಿ ಸೂಚಿಯನ್ನು ಆಧರಿಸಿ ವ್ಯಾಪಾರದಲ್ಲಿ ಹೆಚ್ಚೆಚ್ಚು ಚಿಲ್ಲರೆ ವ್ಯಾಪಾರಿಗಳು ಭಾಗವಹಿಸುತ್ತಿದ್ದಾರೆ. ಸೆಪ್ಟೆಂಬರ್ 2024ರ ಸೆಬಿ ವರದಿಯ ಪ್ರಕಾರ ಇಂತಹ ಚಿಲ್ಲರೆ ಹೂಡಿಕೆದಾರರ ಸಂಖ್ಯೆ ಶೇಕಡ 150ರಷ್ಟು ಹೆಚ್ಚಿದೆ. ಇಂತಹ ಹತ್ತು ಚಿಲ್ಲರೆ ವ್ಯಾಪಾರಿಗಳಲ್ಲಿ 9 ಜನ ನಷ್ಟ ಅನುಭವಿಸುತ್ತಿದ್ದಾರೆ. ಸೆಬಿಗೆ ಇದು ತಿಳಿದಿದ್ದರೂ ಕ್ರಮ ತೆಗೆದುಕೊಂಡಿರಲಿಲ್ಲ. ಬದಲಿಗೆ ಚಿಲ್ಲರೆ ವ್ಯಾಪಾರಿಗಳಿಗೆ ಎಚ್ಚರಿಕೆಯಿಂದ ಇರಲು ಸೂಚನೆ ನೀಡುತ್ತಿತ್ತು ಅಥವಾ ಮಾರುಕಟ್ಟೆಯಿಂದ ಹೊರಗುಳಿಯಲು ಸಲಹೆ ನೀಡುತ್ತಿತ್ತು. ಅಷ್ಟಕ್ಕೆ ಅದರ ಕ್ರಮ ಸೀಮಿತವಾಗಿತ್ತು. ದೊಡ್ಡ ಹೂಡಿಕೆದಾರರೂ ಹಣ ಕಳೆದುಕೊಳ್ಳುವುದು ಪ್ರಾರಂಭವಾದಾಗ ಹಾಗೂ ಅವರಲ್ಲಿ ಕೆಲವರು ಫ್ಯೂಚರ್ ಅಂಡ್ ಅಪ್ಷನ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾರುಕಟ್ಟೆಯಲ್ಲಿ ಅಕ್ರಮ ನಡೆಯುತ್ತಿದ್ದೆ ಎಂದು ಅರೋಪಿಸತೊಡಗಿದಾಗ ಸೆಬಿ ಇಂತಹ ಕ್ರಮಕ್ಕೆ ಮುಂದಾಯಿತು.

ಸಹಜವಾಗಿಯೇ ಜೇನ್ ಸ್ಟ್ರೀಟ್ ಆರೋಪವನ್ನು ಅಲ್ಲಗೆಳೆದಿದೆ. ಕೇವಲ ಆಗಬಹುದಾದ ನಷ್ಟದಿಂದ ತಪ್ಪಿಸಿಕೊಳ್ಳಲು ಎಚ್ಚರಿಕೆಯ ಕ್ರಮವಾಗಿ (ಹೆಡ್ಜಿಂಗ್ ಕಾರ್ಯತಂತ್ರ) ಮಾತ್ರ ಇದನ್ನು ಮಾಡುತ್ತಿದ್ದೇವೆ. ಇದರಲ್ಲಿ ಅಕ್ರಮವಾದದ್ದು ಏನೂ ಇಲ್ಲ. ಡಿರಿವಟಿವ್ ವ್ಯವಹಾರದಲ್ಲಿ ಇದಕ್ಕೆ ಅವಕಾಶವಿದೆ ಎಂದು ವಾದಿಸುತ್ತಿದೆ. ಅದು ತನ್ನ ಚಟುವಟಿಕೆಯನ್ನು ಮುಂದುವರಿಸಿಕೊಂಡು ಹೋಗಲು ಅವಕಾಶವನ್ನು ಕೊಡಲು ಮನವಿ ಮಾಡಿಕೊಂಡಿದೆ. ಸೆಬಿ ವಿಧಿಸಿರುವ ದಂಡವನ್ನು ಮುಂಗಡವಾಗಿ ಕಟ್ಟಿದೆ. ಆದರೆ ಅದು ತನ್ನ ವ್ಯವಹಾರದಲ್ಲಿ ಯಾವುದೇ ಅಕ್ರಮವೂ ನಡೆದಿಲ್ಲ. ತಾನು ನ್ಯಾಯಯುತವಾದ ವ್ಯಾಪಾರದ ಕ್ರಮವನ್ನೇ ಅನುಸರಿಸುತ್ತಿದ್ದೇನೆ ಎಂದು ಸೆಬಿ ಅಧಿಕಾರಿಗಳನ್ನು ಮನವರಿಕೆ ಮಾಡಿಕೊಡಬಹುದೆನ್ನುವ ವಿಶ್ವಾಸಲ್ಲಿದೆ.

ಇಡೀ ಡಿರಿವಟಿವ್ ವ್ಯವಹಾರ ಒಂದು ಜೂಜಾಗಿದೆ. ಪ್ರಬಲರು ಇಡೀ ಹಣಕಾಸು ಮಾರುಕಟ್ಟೆಯನ್ನು ನಿಯಂತ್ರಿಸುತ್ತಿದ್ದಾರೆ. ಹಲವು ಅವಶ್ಯಕ ಪದಾರ್ಥಗಳ ಬೆಲೆ ಏರುವುದರಲ್ಲೂ ಈ ಸಟ್ಟಾ ವ್ಯಾಪಾರದ ಪಾತ್ರವಿದೆ. ಜೊತೆಗೆ ಇದರಿಂದ ಯಾವುದೇ ಭೌತಿಕ ಹೂಡಿಕೆಯೂ ಆಗುವುದಿಲ್ಲ. ಸಣ್ಣ ಹಾಗೂ ಚಿಲ್ಲರೆ ಹೂಡಿಕೆದಾರರು ಒಂದಿಷ್ಟು ಆದಾಯ ಮಾಡಿಕೊಳ್ಳಬಹುದೆಂಬ ಆಕರ್ಷಣೆಯಿಂದ ಇದರಲ್ಲಿ ಹೂಡುತ್ತಿದ್ದಾರೆ. ಆದರೆ ಅಂತಿಮವಾಗಿ ತಮ್ಮ ನಿಯಂತ್ರಣದಲ್ಲಿಲ್ಲದ ಮಾರುಕಟ್ಟೆಯ ಏರುಪೇರುಗಳಿಂದ ನಷ್ಟ ಅನುಭವಿಸುತ್ತಾರೆ. ಸರ್ಕಾರ ಇಂತಹ ಹಣಕಾಸು ಮಾರುಕಟ್ಟೆಯ ಅವಶ್ಯಕತೆಯ ಬಗ್ಗೆ ಯೋಚಿಸಬೇಕು. ಅದು ಕೇವಲ ಒಂದು ಜೂಜಾಗಿದೆ ಅನ್ನುವುದಾದರೆ ಅದನ್ನು ನಿಲ್ಲಿಸಿಬಿಡುವುದು ಒಳ್ಳೆಯದು. ಜೊತೆಗೆ ಇದರ ರಚನೆಯಲ್ಲೇ ಅಪಬಳಕೆಗೆ, ಆಕ್ರಮಕ್ಕೆ ಅವಕಾಶವಿದೆ ಅನ್ನುವ ಆರೋಪ ಸುಳ್ಳಲ್ಲ.

ಆದರೆ ಸೆಬಿಗೆ ಈ ವ್ಯವಹಾರವನ್ನು ನಿಲ್ಲಿಸುವ ಯೋಚನೆಯಿಲ್ಲ. ಕೆಲವು ದೂರ್ತರು ಹಾದಿ ತಪ್ಪಿಸುತ್ತಿದ್ದಾರೆ. ಅವರನ್ನು ನಿಯಂತ್ರಿಸುವುದಕ್ಕೆ ಕ್ರಮತೆಗೆದುಕೊಳ್ಳಬೇಕು ಅನ್ನುವುದು ಬಹುಶಃ ಅವರ ಸಧ್ಯದ ಚಿಂತನೆ. ಅವರ ದೃಷ್ಟಿಯಲ್ಲಿ ಜೇನ್ ಸ್ಟ್ರೀಟ್ ಇರುವ ಅವಕಾಶವನ್ನು ಅಪಬಳಕೆ ಮಾಡಿಕೊಳ್ಳುತ್ತಿದೆ. ಅದಕ್ಕೆ ಅವಕಾಶವಾಗದಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ವ್ಯಾಪಾರದ ಪ್ರಮಾಣಕ್ಕೆ ಒಂದು ಮಿತಿಯನ್ನು ಹಾಕುವ, ಸಣ್ಣ ಹೂಡಿಕೆದಾರರನ್ನು ಹೊರಗಿಡುವ ಅಥವಾ ಆ ರೀತಿಯ ಕೆಲವು ಬದಲಾವಣೆಗಳು ಬರಬಹುದೇ ಹೊರತು ಇದನ್ನು ನಿಲ್ಲಿಸುವ ಅಥವಾ ದೊಡ್ಡ ಹೂಡಿಕೆದಾರರನ್ನು ಹೊರಗಿಡುವ ಕ್ರಮಗಳನ್ನು ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ. ಇದು ಸೆಬಿಗೆ, ಕೇಂದ್ರ ಸರ್ಕಾರಕ್ಕೆ ಒಳ್ಳೆಯ ಆದಾಯದ ಮೂಲ. ಯಾವುದೇ ಮೂಲಭೂತ ಬದಲಾವಣೆಯನ್ನು ನಿರೀಕ್ಷಿಸುವುದಕ್ಕೆ ಸಾಧ್ಯವೇ ಇಲ್ಲ. ಹಾಗಾಗಿ ಬರುವ ದಿನಗಳಲ್ಲಿ ದೊಡ್ಡ ಹೂಡಿಕೆದಾರರ ಆಕ್ರಮಗಳು ಹೊಸ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳುತ್ತಲೇ ಇರುತ್ತದೆ.

ಎರಡು ಶತಮಾನಗಳ ಅಸಮ ವಿನಿಮಯ

ಥಾಮಸ್ ಪಿಕೆಟ್ಟಿ


೨೦೨೫ರಲ್ಲಿ ಜಗತ್ತು ಸಿಲುಕಿರುವ ವ್ಯಾಪಾರದ ಬಿಕ್ಕಟ್ಟಿನ ಹೊಸ ಅಲೆಯನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಇದನ್ನು ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ನೆರವಾಗುವುದಕ್ಕೆ ವರ್ಲ್ಡ್ ಇನಿಕ್ವಾಲಿಟಿ ಲ್ಯಾಬ್ ೧೮೮೦ರಿಂದ ಈವರೆಗಿನ ಜಾಗತಿಕ ವ್ಯಾಪಾರ ಹಾಗೂ ಹಣಕಾಸಿನ ಅಸಮಾನತೆಯನ್ನು ಕುರಿತಂತೆ ಒಂದು ಚಾರಿತ್ರಿಕ ವರದಿಯನ್ನು ಪ್ರಕಟಿಸಿದೆ.

ಅದನ್ನು ಗಮನಿಸಿದರೆ ಸ್ಪಷ್ಟವಾದ ಕೆಲವು ತೀರ್ಮಾನಗಳು ಸಾಧ್ಯ. ಮುಕ್ತ ವ್ಯಾಪಾರದಿಂದ ಅದರಷ್ಟಕ್ಕೆ ಸಮತೋಲನ ಸಾಧ್ಯವಾಗಿಬಿಡುತ್ತದೆ ಹಾಗೂ ಮುಕ್ತ ವ್ಯಾಪಾರ ಅನ್ನುವುದು ಸುಸಂಗತವಾಗಿರುತ್ತದೆ ಅನ್ನುವುದಕ್ಕೆ ಯಾವ ಪುರಾವೆಯೂ ಇಲ್ಲ. ೧೮೦೦ರಿಂದ ವ್ಯಾಪಾರದಲ್ಲಿ ತೀವ್ರವಾದ ಅಸಮತೋಲನ ನಿರಂತರವಾಗಿ ಕಾಣಿಸಿಕೊಳ್ಳುತ್ತಿದೆ. ಪ್ರಬಲ ಶಕ್ತಿಗಳು ತಮ್ಮ ಸ್ಥಾನವನ್ನು ಬಳಸಿಕೊಂಡು ಪದೇ ಪದೇ ತಮಗೆ ಅನುಕೂಲವಾಗುವಂತಹ ವ್ಯಾಪಾರದ ನೀತಿಯನ್ನು ಹೇರುತ್ತಾ ಬಂದಿವೆ. ಮತ್ತು ಇದಕ್ಕಾಗಿ ಬಡದೇಶಗಳನ್ನು ದೋಚುವ ಕೆಲಸ ಚರಿತ್ರೆಯುದ್ದಕ್ಕೂ ನಡೆದಿದೆ.

ಇಂದಿನ ಬಿಕ್ಕಟ್ಟಿನ ವಿಶೇಷವೆಂದರೆ ಜಾಗತಿಕ ಅಧಿಕಾರದಲ್ಲಿ ಅಮೇರಿಕೆ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತಿದೆ. ಈಗ ಅದರ ಹಣಕಾಸಿನ ಸ್ಥಿತಿ ಹಿಂದೆಂದೂ ಇಲ್ಲದಷ್ಟು ದುರ್ಬಲವಾಗಿದೆ. ಟ್ರಂಪ್ ಆಡಳಿತ ಅಷ್ಟೊಂದು ಆಕ್ರಮಣಕಾರಿಯಾಗಿರುವುದಕ್ಕೆ ಅದೇ ಕಾರಣ. ಆದರೆ ಅದರ ಒತ್ತಡಕ್ಕೆ ಮಣಿಯುವುದು ತೀರಾ ಕೆಟ್ಟ ಕಾರ್ಯತಂತ್ರವಾಗುತ್ತದೆ. ಇತ್ತೀಚೆಗೆ ಐರೋಪ್ಯ ದೇಶಗಳು ಮಿಲಿಟರಿ ಖರ್ಚಿನ ವಿಷಯದಲ್ಲಿ (ಮಿಲಿಟರಿ ವೆಚ್ಚವನ್ನು ಹೆಚ್ಚು ಮಾಡುವುದು ಅಂದರೆ ಅಮೇರಿಕೆಯ ರಕ್ಷಣಾ ಕೈಗಾರಿಕೆಗೆ ಲಾಭ ಮಾಡಿಕೊಡುವುದು ಅಂತಲೇ ಅರ್ಥ) ಅಥವಾ ಬಹುರಾಷ್ಟ್ರೀಯ ಕಂಪೆನಿಗಳ ತೆರಿಗೆಯ ವಿಷಯದಲ್ಲಿ ಟ್ರಂಪ್ ಒತ್ತಡಕ್ಕೆ ಮಣಿದಿವೆ. ಯುರೋಪ್ ಸಂತೃಪ್ತಿಯ ಮನಸ್ಥಿತಿಯಿಂದ ಹೊರಬರುವುದಕ್ಕೆ ಇದು ಸಕಾಲ. ಜಗತ್ತಿನ ದಕ್ಷಿಣದ ಪ್ರಜಾಸತ್ತಾತ್ಮಕ ದೇಶಗಳೊಂದಿಗೆ ಕೈಜೋಡಿಸಬೇಕು. ವಾಣಿಜ್ಯ ಹಾಗೂ ಆರ್ಥಿಕ ವ್ಯವಸ್ಥೆಯನ್ನು ಪುನರ್ ನಿರ್ಮಾಣ ಮಾಡಬೇಕು. ಆ ಮೂಲಕ ಒಂದು ವಿಭಿನ್ನವಾದ ಅಭಿವೃದ್ಧಿ ಮಾದರಿಯನ್ನು ಬೆಂಬಲಿಸಬೇಕು. ವ್ಯಾಪಾರದ ಹರಿವು ಈಗ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಒಟ್ಟಾರೆ ರಫ್ತು ಹಾಗೂ ಆಮದು ಜಾಗತಿಕ ಜಿಡಿಪಿಯ ಶೇಕಡ ೩೦ರಷ್ಟಾಗಿದೆ. ಅದರಲ್ಲಿ ಶೇಕಡ ೭ರಷ್ಟು ಕಚ್ಚಾವಸ್ತುಗಳು (ಕೃಷಿ, ಗಣಿಗಾರಿಕೆ, ಇಂಧನ), ಶೇಕಡ ೧೬ರಷ್ಟು ಉತ್ಪಾದಿತ ಸರಕುಗಳು, ಹಾಗೂ ಶೇಕಡಸೇವೆಗಳಿಗೆ (ಪ್ರವಾಸ, ಸಾರಿಗೆ, ಸಲಹೆ) ಸಂಬಂಧಿಸಿದಂತೆ ವ್ಯಾಪಾರ ನಡೆದಿದೆ. ೧೮೦೦ರಲ್ಲಿ ಒಟ್ಟು ವ್ಯಾಪಾರ ಜಾಗತಿಕ ಜಿಡಿಪಿಯ ಶೇಕಡ ೭ರಷ್ಟಿತ್ತು. ಅದು ೧೯೧೪ರಲ್ಲಿ ೧೫%, ೧೯೭೦ರಲ್ಲಿ ೧೨% ಆಗಿದೆ (ಅದರಲ್ಲಿ ೪% ಕಚ್ಚಾ ಪದಾರ್ಥಗಳು, ೫% ಉತ್ಪಾದಿತ ವಸ್ತುಗಳು ಹಾಗೂ ೩% ಸೇವೆ). ೧೯೭೦ರಿಂದ ಎಲ್ಲಾ ಕ್ಷೇತ್ರಗಳಲ್ಲಿ ಭಾರೀ ಏರಿಕೆಯಾಗಿದೆ. ಸರಕುಗಳ ಉತ್ಪಾದನೆಯಲ್ಲಿ ಹಾಗೂ ಪರಿಸರದ ಹಾನಿಯಲ್ಲಿ ಏರಿಕೆಯನ್ನು ಇತ್ತೀಚಿನ ದಿನಗಳಲ್ಲಷ್ಟೇ ಗಮನಿಸಲು ಪ್ರಾರಂಭಿಸಿದ್ದೇವೆ. ೨೦೦೮ರ ಬಿಕ್ಕಟ್ಟಿನ ನಂತರ ಒಟ್ಟಾರೆ ಜಿಡಿಪಿ ಹಾಗೂ ವ್ಯಾಪಾರದ ಅನುಪಾತ ಹೆಚ್ಚು ಸ್ಥಿರವಾಗಿದೆ ಎಂದು ಹಲವರು ಗಮನಿಸಿದ್ದಾರೆ. ಅದು ನಿಜ. ಆದರೆ ಈಗ ಅದು ಗರಿಷ್ಠ ಮಟ್ಟ ತಲುಪಿದೆ ಅನ್ನುವುದನ್ನು ನಾವು ಗಮನಿಸಬೇಕು.

ಇನ್ನು ವ್ಯಾಪಾರದಲ್ಲಿನ ಅಸಮತೋಲದ ವಿಷಯವನ್ನು ಗಮನಿಸೋಣ. ಕೆಲವು ವಿಷಯಗಳು ಎಲ್ಲರಿಗೂ ತಿಳಿದಿದೆ: ೧೯೯೦ರಿಂದ ೨೦೨೫ರವರೆಗೆ ಅಮೇರಿಕೆ ವ್ಯಾಪಾರದ ಕೊರತೆಯನ್ನು ಎದುರಿಸುತ್ತಿದೆ. ಆಮದು ರಫ್ತಿಗಿಂತ ಹೆಚ್ಚಿದೆ. ಸುಮಾರು ಅಮೇರಿಕೆಯ ಜಿಡಿಪಿಯ ಶೇಕಡ ೩ರಿಂದ ೪ರಷ್ಟಿದೆ. ಸೇವೆಯಲ್ಲಿ ಮಾತ್ರ ರಫ್ತು ಆಮದಿಗಿಂತ ಹೆಚ್ಚಿದೆ. ಆದರೆ ಉತ್ಪಾದನ ಕ್ಷೇತ್ರದಲ್ಲಿನ ಬೃಹತ್ ಕೊರತೆಯನ್ನು ಸರಿತೂಗಿಸುವ ಮಟ್ಟದಲ್ಲಿಲ್ಲ. ಜಗತ್ತಿನ ಅತ್ಯಂತ ಪ್ರಬಲ ರಾಷ್ಟ್ರ ಹೀಗೆ ಶಾಶ್ವತವಾಗಿ ವ್ಯಾಪಾರದ ಕೊರತೆಯಲ್ಲಿ ಸಿಕ್ಕಿಬಿದ್ದಿದೆ ಅಂದರೆ ಕೆಲವೊಮ್ಮೆ ಅನುಮಾನ ಬರುತ್ತದೆ. ಆದರೆ ಇದೊಂದು ಚಾರಿತ್ರಿಕ ಪ್ರವೃತ್ತಿ.

೧೮೦೦ರಿಂದ ೧೯೧೪ರವರೆಗೆ ಐರೋಪ್ಯ ದೇಶಗಳು ಇಂಗ್ಲೆಂಡಿನ ಮುಂದಾಳತ್ವದಲ್ಲಿ– ಶಾಶ್ವತವಾಗಿ ವ್ಯಾಪಾರದ ಕೊರತೆಯ ಸಮಸ್ಯೆಯನ್ನು ಎದುರಿಸುತ್ತಿದ್ದವು. ಆಗ ಉತ್ಪಾದನಾ ಸರಕುಗಳ ವ್ಯಾಪಾರ ಹಾಗೂ ಸಾರಿಗೆಯಲ್ಲಿ ಬರುತ್ತಿದ್ದ ಆದಾಯಕ್ಕಿಂತ ಆಮದು ಮಾಡಿಕೊಳ್ಳುತ್ತಿದ್ದ ಕಚ್ಚಾ ಮಾಲು (ಹತ್ತಿ, ಮರ, ಸಕ್ಕರೆ ಇತ್ಯಾದಿ) ಗಳ ಪ್ರಮಾಣ ವಿಪರೀತ ಹೆಚ್ಚಿತ್ತು. ವಸಾಹತುಗಳಿಂದ ಆಮದು




ಮಾಡಿಕೊಳ್ಳುತ್ತಿದ್ದ ಕಚ್ಚಾ ಮಾಲುಗಳಿಗೆ ತೀರಾ ಕಡಿಮೆ ಹಣ ಕೊಡುತ್ತಿದ್ದರೂ ವ್ಯಾಪಾರದ ಕೊರತೆ ಇದ್ದೇ ಇತ್ತು. ನಾವು ಇಂದು ೧೯೯೦ರಿಂದ ಇಂದಿನವರೆಗೆ ಅಮೇರಿಕೆಯಲ್ಲಿ ನೋಡುತ್ತಿರುವ ಕೊರತೆಯಷ್ಟೇ ಪ್ರಮಾಣದ ವಾರ್ಷಿಕ ಸರಾಸರಿ ಕೊರತೆಯನ್ನು ೧೮೮೦ ಹಾಗೂ ೧೯೧೪ರ ನಡುವೆ ಪ್ರಮುಖ ಐರೋಪ್ಯ ದೇಶಗಳಲ್ಲಿ (ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ) ಕಾಣಬಹುದಿತ್ತು. ವ್ಯತ್ಯಾಸವೆಂದರೆ ಹಿಂದೆ ಐರೋಪ್ಯ ದೇಶಗಳಿಗೆ ಬೇರೆ ದೇಶಗಳಲ್ಲಿದ್ದ ಆಸ್ತಿಗಳಿಂದ ಪ್ರತಿ ವರ್ಷ ವಿಪರೀತ ಆದಾಯ ಬರುತ್ತಿತ್ತು. ಇಂಗ್ಲೆಂಡಿಗೆ ಜಿಡಿಪಿಯ ಸುಮಾರು ಶೇಕಡ ೧೦ರಷ್ಟು ಹಾಗೂ ಫ್ರಾನ್ಸಿಗೆ ಸುಮಾರು ಶೇಕಡ ೫ಕ್ಕಿಂತ ಹೆಚ್ಚು ಸಂಗ್ರಹವಾಗುತ್ತಿತ್ತು. ಈ ಹಣದಿಂದ ಅವು ವ್ಯಾಪಾರದ ಕೊರತೆಯನ್ನು ಸಲೀಸಾಗಿ ಸರಿತೂಗಿಸಿಕೊಳ್ಳುತ್ತಿತ್ತು. ಅದೇ ಕಾರಣಕ್ಕೆ ಜಗತ್ತಿನ ಎಲ್ಲಾ ಕಡೆಯಿಂದಲೂ ಏನೂ ಕಷ್ಟವಿಲ್ಲದೆ ಸಾಲ ಮಾಡಿಕೊಳ್ಳುತ್ತಿತ್ತು.

ಅದಕ್ಕೆ ವ್ಯತಿರಿಕ್ತವಾಗಿ ಅಮೇರಿಕೆಗೆ ತನ್ನ ವಿದೇಶಿ ಸ್ವತ್ತಿನಿಂದ ಬರುವ ಹಣದಿಂದ ಎಂದೂ ತನ್ನ ವ್ಯಾಪಾರ ಕೊರತೆಯನ್ನು ತುಂಬಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಹಾಗಾಗಿ ಅಮೇರಿಕೆಯ ವಿದೇಶಿ ಸಾಲ ವಿಪರೀತವಾಗಿದೆ. ಜಗತ್ತಿನ ಅತ್ಯಂತ ಪ್ರಬಲ ಮಿಲಿಟರಿ ಶಕ್ತಿ ಇಂದು ಜಗತ್ತಿನ ಉಳಿದ ದೇಶಗಳಿಗೆ ದೊಡ್ಡ ಪ್ರಮಾಣದಲ್ಲಿ, ದೀರ್ಘಕಾಲೀನ ಬಡ್ಡಿಯನ್ನು ಪಾವತಿಸಬೇಕಾದ ಸ್ಥಿತಿಯಲ್ಲಿದೆ. ಚರಿತ್ರೆಯಲ್ಲಿ ಹಿಂದೆಂದೂ ಹೀಗೆ ಆಗಿರಲಿಲ್ಲ. ಇದು ಟ್ರಂಪ್‌ನ ಆತಂಕಕ್ಕೆ ಮೂಲ ಕಾರಣ. ಅವನ ಬೆಂಬಲಿಗರು ಜಗತ್ತಿನ ಬೇರೆ ಬೇರೆ ದೇಶಗಳ ಸಂಪತ್ತನ್ನು ಕಸಿದುಕೊಳ್ಳಲು ಹತಾಶೆಯಿಂದ ಪ್ರಯತ್ನಿಸುತ್ತಿದ್ದಾರೆ. ಅವಶ್ಯಕವಾದರೆ ಬಲಪ್ರಯೋಗಕ್ಕೂ ತಯಾರಿದ್ದಾರೆ.

ಹಾಗೆ ವಸೂಲಿ ಮಾಡುವುದಕ್ಕೆ ಅವರದೇ ಆದ ಒಂದು ಸಮರ್ಥನೆ ಇದೆ. ಜಗತ್ತಿಗೆ ಸ್ಥಿರವಾದ ನಾಣ್ಯ ಹಾಗೂ ಸುಭದ್ರವಾದ ಹಣಕಾಸು ವ್ಯವಸ್ಥೆಯನ್ನು ನೀಡುತ್ತಿದ್ದೇವೆ. ಇದು ನಾವು ಜಗತ್ತಿಗೆ ಒದಗಿಸುತ್ತಿರುವ ಸಾರ್ವಜನಿಕ ಸೇವೆ. ಇದರಿಂದಾಗಿ ಜಗತ್ತಿನ ಎಲ್ಲಾ ದೇಶಗಳಿಗೆ ಆಸ್ತಿಯನ್ನು ಡಾಲರಿನಲ್ಲಿ ಕ್ರೋಡೀಕರಿಸುವುದಕ್ಕೆ ಸಾಧ್ಯವಾಗಿದೆ. ಇದರಿಂದ ಡಾಲರಿನ ಮೌಲ್ಯ ಹೆಚ್ಚಿದೆ. ಅದು ಅಮೇರಿಕೆಯ ಕೊರತೆಯನ್ನು ಹೆಚ್ಚಿಸಿದೆ. ಇದು ಅವರ ವಾದ. ಆದರೆ ವಾಸ್ತವ ಅಂದರೆ ಡಾಲರಿಂದ ಅಮೇರಿಕಾಕ್ಕೆ ನ್ಯಾಯಯುತವಾಗಿ ಬರಬೇಕಾಗಿದ್ದಕ್ಕಿಂತ ಹೆಚ್ಚಿನ ಲಾಭ ಸಿಕ್ಕಿದೆ. ಆದರೂ ಅವರ ವಾದವನ್ನು ಪರಿಶೀಲಿಸೋಣ. ಯಾಕೆಂದರೆ ಟ್ರಂಪ್‌ವಾದಿಗಳು ಸೂಚಿಸುತ್ತಿರುವ ಕ್ರಮದಿಂದ ಅವರ ಸಮಸ್ಯೆ ಪರಿಹಾರವಾಗುವುದಿಲ್ಲ. ಅದರ ಪರಿಹಾರಕ್ಕೆ ಅದಕ್ಕಿಂತ ಪೂರ್ತಿ ಭಿನ್ನವಾದ ಪರಿಹಾರ ಬೇಕಾಗುತ್ತದೆ.

ತೈಲ ಉತ್ಪಾದಿಸುವ ದೇಶಗಳ ವ್ಯಾಪಾರದಲ್ಲಿ ಇತ್ತೀಚಿನ ದಶಕಗಳಲ್ಲಿ ಅಪಾರ ಮಿಗುತಾಯ ಸಾಧ್ಯವಾಗಿದ್ದಕ್ಕೆ ಕಾರಣವಿದೆ. ಆ ದೇಶಗಳು ೧೯೭೦ರಲ್ಲಿ ತೈಲದ ಬೆಲೆಯನ್ನು ಮೂರು ಪಟ್ಟು ಹೆಚ್ಚಿಸಿದ್ದರು. ಅದು ಮಿಗುತಾಯಕ್ಕೆ ಬಹುಮಟ್ಟಿನ ಕಾರಣ. ಜೊತೆಗೆ ಉಳಿದ ದೇಶಗಳು ಮುಂದಿನ ಪರಿಣಾಮಗಳ ಬಗ್ಗೆ ಯೋಚಿಸದೆ ಪಳೆಯುಳಿಕೆ ತೈಲವನ್ನು ನಿರಂತರವಾಗಿ ಬಳಸುತ್ತಿವೆ. ಚೀನಾ, ಜಪಾನ್ ಹಾಗೂ ಜರ್ಮನಿಯಲ್ಲಿ ಹೆಚ್ಚುವರಿ ಕೈಗಾರಿಕಾ ಉತ್ಪಾದನೆ ಸಾಧ್ಯವಾಗಿರುವುದಕ್ಕೆ ಅತಿ ಕಡಿಮೆ ಕೂಲಿ ಒಂದು ಕಾರಣ. ಜೊತೆಗೆ ಅವರು ಬೇರೆ ದೇಶಗಳಲ್ಲಿ ಸಂಪತ್ತನ್ನು ಇಡುತ್ತಿರುವುದರಿಂದ ಅವರಿಗೆ ಹೆಚ್ಚಿನ ಅನುಕೂಲವಾಗಿದೆ. ಹೀಗೆ ಮಾಡುವುದಕ್ಕೆ ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿನ ಅಸ್ಥಿರತೆಯ ಆತಂಕವೂ ಒಂದು ಕಾರಣ. ಇನ್ನೊಂದು ಕಾರಣವೆಂದರೆ ಡಾಲರ್ ಬಿಟ್ಟರೆ ಬೇರೆ ಒಂದು ಜಾಗತಿಕ ಮೀಸಲು ಸ್ವತ್ತು ಇಲ್ಲದಿರುವುದು ಅವರ ಆತಂಕವನ್ನು ಹೆಚ್ಚಿಸಿದೆ.



ಜಾಗತಿಕ ಅಸಮತೋಲನ ತೀವ್ರವಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಒಂದು ಜಾಗತಿಕ ಕರೆನ್ಸಿಗಾಗಿ ಯೋಚಿಸುವುದು ಒಳ್ಳೆಯ ಪರಿಹಾರವಾಗಬಹುದು. ಅದು ಎಲ್ಲಾ ಪ್ರಮುಖ ಕರೆನ್ಸಿಗಳೊಂದಿಗೆ ತೆಕ್ಕೆ ಹಾಕಿಕೊಂಡಿರಬೇಕು. ಜಗತ್ತು ಡಾಲರ್‌ನಿಂದ ಮುಕ್ತವಾಗಬೇಕು. ಬಡರಾಷ್ಟ್ರಗಳ ವ್ಯಾಪಾರದ ಸ್ಥಿತಿ ಸುಧಾರಿಸಬೇಕು. ಹೆಚ್ಚು ಸಮತೋಲಿತ ಹಾಗೂ ತಾಳಿಕೆಯ ಅಭಿವೃದ್ಧಿಯನ್ನು ಬೆಳೆಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳು ಸಾಗಬೇಕು. ಟ್ರಂಪ್‌ನ ಕ್ರೌರ್ಯ ಈ ಪ್ರಕ್ರಿಯೆಯನ್ನು ಹೆಚ್ಚು ತ್ವರಿತಗೊಳಿಸುತ್ತದೆ ಎಂದು ಆಶಿಸೋಣ.

ವರದಿಗೆ ಕೆಳಗಿನ ಕೊಂಡಿಯನ್ನು ಬಳಸಿ.
(« Unequal Exchange and North-South Relations. Evidence from Global Trade Flows and the World Balance of Payment, 1800-2025 », available on inequalitylab.world et wbop.world).

ಇವ ನಮ್ಮವ
ಇವ ನಮ್ಮವ



ವಿ ಕೆ ಆರ್ ವಿ ರಾವ್–ಸಂಸ್ಥೆಗಳ ಶಿಲ್ಪಿ

ವಿಜಯೇಂದ್ರ ರಾವ್

ವಿಜಯೇಂದ್ರ ಕಸ್ತೂರಿ ರಂಗ ವರದರಾಜ (ವಿ.ಕೆ.ಆರ್.ವಿ.) ರಾವ್ ಸ್ವಾತಂತ್ರ್ಯೋತ್ತರ ಭಾರತೀಯ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ದಿಗ್ಗಜರು. ಅವರು ಸ್ಥಾಪಿಸಿದ ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್ (ಡಿಎಸ್ಇ) ಮತ್ತು ಇನ್‌ಸ್ಟಿಟ್ಯೂಟ್ ಫಾರ್ ಇಕನಾಮಿಕ್ ಗ್ರೋತ್ (ಐಇಜಿ) ಎರಡು ಸಂಸ್ಥೆಗಳು ಭಾರತದಲ್ಲಿ ಆರ್ಥಿಕ ಮತ್ತು ಸಮಾಜಶಾಸ್ತ್ರೀಯ ತರಬೇತಿ ಮತ್ತು ಸಂಶೋಧನೆಗೆ ಬೇಕಾದ ಮೂಲಸೌಕರ್ಯವನ್ನು ಒದಗಿಸುವ ಕೇಂದ್ರಗಳು. ಹಾಗೆಯೇ ಅವರು ಸ್ಥಾಪಿಸಿದ ಇನ್ನೊಂದು ಮಹತ್ವದ ಸಂಸ್ಥೆ ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಫಾರ್ ಸೋಶಿಯಲ್ ಅಂಡ್ ಇಕನಾಮಿಕ್ ಚೇಂಜ್ (ಐಎಸ್ಇಸಿ). ಇದೊಂದು ಪ್ರಮುಖ ಅಂತರಶಿಸ್ತೀಯ ಸಂಶೋಧನಾ ಮತ್ತು ತರಬೇತಿ ಕೇಂದ್ರ. ಇದಲ್ಲದೆ, ಇಂಡಿಯನ್ ಕೌನ್ಸಿಲ್ ಆಫ್ ಸೋಶಿಯಲ್ ಸೈನ್ಸ್ ರಿಸರ್ಚ್ (ಐಸಿ–ಎಸ್ಎಸ್ಆರ್), ಮುಂಬೈನ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಪಾಪ್ಯುಲೇಶನ್ ಸ್ಟಡೀಸ್ ಮತ್ತು ಸಂಬಂಧಿತ ಜನಸಂಖ್ಯಾ ಕೇಂದ್ರಗಳ ಜಾಲ, ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಾರಿನ್ ಟ್ರೇಡ್ (ಐಐಎಫ್‌ಟಿ) ಸೇರಿದಂತೆ ಹಲವು ಗಮನಾರ್ಹ ಸಂಸ್ಥೆಗಳು ಕೂಡ ಅವರ ಚಿಂತನೆಯ ಕೂಸುಗಳೆ ಆಗಿವೆ.

ರಾವ್ ಪ್ರಮುಖ ಸಂಸ್ಥೆಗಳನ್ನು ನಿರ್ಮಿಸುವುದರ ಜೊತೆಗೆ ಅಭಿವೃದ್ಧಿ ಅರ್ಥಶಾಸ್ತ್ರವನ್ನು ಬೆಳೆಸಿದ ಮೊದಲಿಗರಲ್ಲಿ ಒಬ್ಬರು. ಅವರು ಪ್ರಾರಂಭದಲ್ಲಿ ಅನ್ವಯಿಕ ಮತ್ತು ಸೈದ್ಧಾಂತಿಕ ಆರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ಮಾಡಿದ್ದ ಅಧ್ಯಯನ ಆ ಕ್ಷೇತ್ರದಲ್ಲಿ ಅಪಾರ ಪ್ರಭಾವ ಬೀರಿದೆ. ಮುಂಬೈ ವಿಶ್ವವಿದ್ಯಾಲಯದಲ್ಲಿ (ಹಿಂದೆ ಅದನ್ನು ಬಾಂಬೆ ವಿಶ್ವವಿದ್ಯಾಲಯ ಎಂದು ಕರೆಯುತ್ತಿದ್ದರು) ಅವರು ಎಂಎಗೆ ಪದವಿಗಾಗಿ 'ಭಾರತದಲ್ಲಿ ತೆರಿಗೆ' ಎಂಬ ವಿಷಯದಲ್ಲಿ ಪ್ರಬಂಧವನ್ನು ಮಂಡಿಸಿದ್ದರು. ಅದು ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಈ ವಿಷಯದ ಬಗೆಗಿನ ಮೊದಲ ಅನ್ವಯಿಕ ಅಧ್ಯಯನಗಳಲ್ಲಿ ಒಂದಾಗಿತ್ತು. ಬಹುಶಃ ಅವರ ಅತ್ಯಂತ ಪ್ರಮುಖ ಕೊಡುಗೆಯೆಂದರೆ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಅವರು ಮಂಡಿಸಿದ್ದ ಪಿಎಚ್‌ಡಿ ಪ್ರಬಂಧ. ಇದು ಭಾರತದ ರಾಷ್ಟ್ರೀಯ ವರಮಾನವನ್ನು ಕುರಿತ ಅಧ್ಯಯನವಾಗಿತ್ತು. ಅವರು ಪ್ರಬಂಧದಲ್ಲಿ ಅತ್ಯಂತ ಕಡಿಮೆ ದತ್ತಾಂಶವನ್ನು ಬಳಸಿಕೊಂಡು ಜಿಡಿಪಿಯನ್ನು ಅಂದಾಜು ಮಾಡುವ ವಿಧಾನಗಳನ್ನು ರೂಪಿಸಲು ಪ್ರಯತ್ನಿಸಿದ್ದರು. ಆ ನಿಟ್ಟಿನಲ್ಲಿ ಇದು ಮೊದಲ ಪ್ರಯತ್ನವಾಗಿತ್ತು. ಇದರ ಪರಿಣಾಮ ಜಗತ್ತಿನಾದ್ಯಂತ ಆಯಿತು. ಅವರ ಪ್ರಮುಖ ಲೇಖನ "ಅಭಿವೃದ್ಧಿಶೀಲ ದೇಶದಲ್ಲಿ ಹೂಡಿಕೆ, ಆದಾಯ ಮತ್ತು ಗುಣಕ". ಇದು ಕೀನ್ಸ್‌ನ ಸಾಮಾನ್ಯ ಸಿದ್ಧಾಂತವು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಎಷ್ಟರ ಮಟ್ಟಿಗೆ ಪ್ರಸ್ತುತ ಎಂದು ಮೌಲ್ಯಮಾಪನ ಮಾಡುವ ಮೊದಲ ಪ್ರಯತ್ನವಾಗಿತ್ತು. ಅದರಲ್ಲಿ ಅವರು ಅಭಿವೃದ್ಧಿಶೀಲ ದೇಶಗಳಲ್ಲಿ ಕೀನ್ಸ್‌ನ ನೀತಿಗಳು ಹಣದುಬ್ಬರಕ್ಕೆ ಕಾರಣವಾಗುತ್ತವೆ ಎಂದು ವಾದಿಸಿದ್ದರು. ಈ ಲೇಖನವನ್ನು ಹಲವಾರು ದಶಕಗಳ ಕಾಲ ವಿಶ್ವದಾದ್ಯಂತ ಅಭಿವೃದ್ಧಿ ಆರ್ಥಶಾಸ್ತ್ರದ ಕೋರ್ಸುಗಳಲ್ಲಿ ಕಡ್ಡಾಯವಾಗಿ ಓದಬೇಕಿತ್ತು. ಅವರು ಭಾರತದಲ್ಲಿ ಆಹಾರ ಪೂರೈಕೆಯ ಪ್ರಮಾಣ ಹಾಗೂ ಅವುಗಳಲ್ಲಿರುವ ಪೌಷ್ಟಿಕಾಂಶದ ಪ್ರಮಾಣವನ್ನು ಲೆಕ್ಕ ಮಾಡಲೂ ಪ್ರಯತ್ನಿಸಿದ್ದರು.

ರಾವ್ ಅವರ ಪ್ರಭಾವ ಭಾರತದಾಚೆಗೂ ಗಣನೀಯವಾಗಿ ಆಗಿದೆ. ಆರ್ಥಿಕ ಅಭಿವೃದ್ಧಿಯನ್ನು ಕುರಿತ ಸಂಯುಕ್ತ ರಾಷ್ಟ್ರಗಳ ಉಪ–ಆಯೋಗದ ಅಧ್ಯಕ್ಷರಾಗಿದ್ದರು (೧೯೪೭–೧೯೫೦). ಆ ಸಮಯದಲ್ಲಿ ಅವರು ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘಟನೆಗೆ (ಐಡಿಎ) ಅವಶ್ಯಕ ಬೌದ್ಧಿಕ ಬುನಾದಿಯನ್ನು ಹಾಕಿಕೊಟ್ಟರು. ಅವರು ರಚಿಸಿದ ಆಯೋಗದ ವರದಿಯು ಯುಎನ್‌ಇಡಿಎ (ಆರ್ಥಿಕ ಅಭಿವೃದ್ದಿಗಾಗಿ ಸಂಯುಕ್ತ ರಾಷ್ಟ್ರಗಳ ಆಡಳಿತ) ತುರ್ತಾಗಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ವಿವರಿಸಿತು. ಅವುಗಳು (೧) ಹಿಂದುಳಿದ ದೇಶಗಳಿಗೆ ಆರ್ಥಿಕ ಅಭಿವೃದ್ಧಿಗೆ ಬೇಕಾದ ಯೋಜನೆಗಳನ್ನು ರೂಪಿಸುವುದಕ್ಕೆ ಅವಶ್ಯಕವಾದ ತಾಂತ್ರಿಕ ನೆರವನ್ನು ಒದಗಿಸುವುದು; (೨) ಹಿಂದುಳಿದ ದೇಶಗಳು ಈಗಾಗಲೇ ಹಮ್ಮಿಕೊಂಡಿರುವ ಆರ್ಥಿಕ ಅಭಿವೃದ್ಧಿ ಯೋಜನೆಗಳಿಗೆ ತಾಂತ್ರಿಕ ಸಹಾಯವನ್ನು ಸಂಘಟಿಸುವುದು (೩) ಹಿಂದುಳಿದ ದೇಶಗಳಿಗೆ ಅಗತ್ಯ ವಸ್ತುಗಳನ್ನು, ಉಪಕರಣಗಳನ್ನು, ಸಿಬ್ಬಂದಿಯನ್ನು ಪಡೆಯಲು ಸಹಾಯ ಮಾಡುವುದು; (೪) ಆರ್ಥಿಕ ಅಭಿವೃದ್ಧಿಗೆ ಅವಶ್ಯಕವಾದ ಯೋಜನೆಗಳಿಗೆ ಹಣಕಾಸಿನ ನೆರವು ಒದಗಿಸುವುದು ಅಥವಾ ಹಣಕಾಸನ್ನು ಪಡೆಯುವುದಕ್ಕೆ ನೆರವಾಗುವುದು . . . ." ಈ ಎಲ್ಲಾ ಕ್ರಮಗಳನ್ನು ಯುಎನ್‌ಇಡಿಎ



ತೆಗೆದುಕೊಳ್ಳುವುದು ಅವಶ್ಯಕ ಎಂದು ವರದಿ ವಿವರಿಸಿತ್ತು. ಹಾಗೆಯೇ ಐಡಿಎ ಅನುಸರಿಸಬೇಕಾದ ಇತರ ತತ್ವಗಳನ್ನು ಅವರು ರೂಪಿಸಿದರು. ವಿಶ್ವ ಬ್ಯಾಂಕ್ ಮುಖ್ಯವಾಗಿ ಯುದ್ಧೋತ್ತರ ಪುನರ್‌ನಿರ್ಮಾಣದ ಕೆಲಸದಲ್ಲೇ ತೊಡಗಿಕೊಂಡಿತ್ತು. ಇವರ ವರದಿಯಿಂದಾಗಿ ಅದು ಆರ್ಥಿಕ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುವ ಸಂಸ್ಥೆಯಾಗಿ ರೂಪಾಂತರಗೊಳ್ಳುವಂತೆ ಆಯಿತು. ಇದು ರಾವ್ ಅವರ ಮಹತ್ತರ ಸಾಧನೆ. ಆದರೆ ಅವರಿಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲ.

ರಾವ್ ೧೯೦೮ ರಲ್ಲಿ ತಮಿಳುನಾಡಿನ ಕಾಂಚೀಪುರದಲ್ಲಿ ಕನ್ನಡ ಮಾಧ್ವ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಇವರ ಕುಟುಂಬ ಶ್ರೀರಂಗಂನಲ್ಲಿ ಹಲವಾರು ತಲೆಮಾರುಗಳಿಂದ ನೆಲೆಸಿತ್ತು. ಅವರ ತಂದೆ ಕಸ್ತೂರಿ ರಂಗಾಚಾರ್ ಪೂಜಾರಿಯಾಗಿ ಕೆಲಸ ಮಾಡುತ್ತಿದ್ದರು. ಜೊತೆಗೆ ಒಂದು ಸಣ್ಣ ಸರ್ಕಾರಿ ಕೆಲಸವನ್ನು ಮಾಡುತಿದ್ದರು. ಬದುಕು ಅನಿಶ್ಚಿತವಾಗಿತ್ತು. ಅಮೇಲೆ ಅವರು ಬಾಂಬೆಗೆ (ಈಗ ಮುಂಬೈ) ಸ್ಥಳಾಂತರಗೊಂಡರು. ಬಾಂಬೆಯ ವಾಣಿಜ್ಯ ಲೋಕದ ಕೆಲವು ಪ್ರಮುಖ ವ್ಯಕ್ತಿಗಳಿಗೆ ಜ್ಯೋತಿಷಿಯಾಗಿ ಸಲಹೆ ನೀಡುತ್ತಿದ್ದರು. ಅದರಿಂದ ಬರುತ್ತಿದ್ದ ಆದಾಯವೂ ತುಂಬಾ ಅನಿಶ್ಚಿತವಾಗಿ–ತ್ತು. ಜೊತೆಗೆ ಕಸ್ತೂರಿ ರಂಗಾಚಾರ್ ಅವರಿಗೆ ಕುದುರೆ ಜೂಜಿನ ಹುಚ್ಚು ಬೇರೆ ಇತ್ತು. ಎರಡೂ ಸೇರಿಕೊಂಡು ಬದುಕು ಇನ್ನೂ ಅನಿಶ್ಚಿತವಾಯಿತು. ಹಾಗಾಗಿ ರಾವ್, ಅವರ ತಾಯಿ ಭಾರತಿ ಮತ್ತು ಐದು ಜನ ಒಡಹುಟ್ಟಿದವರು ನಿರಂತರವಾಗಿ ಹಣಕಾಸಿನ ತೊಂದರೆಯನ್ನು ಎದುರಿಸುತ್ತಿದ್ದರು. ರಾವ್ ಅತ್ಯಂತ ಚುರುಕಾದ ಮಗು. ಅವನು ಮುಂದೆ ತಮ್ಮ ಬಡತನಕ್ಕೆ ಮುಕ್ತಿ ಕಾಣಿಸುತ್ತಾನೆ ಎಂಬ ನಂಬಿಕೆಯಿಂದ ಇರುವ ದುಡ್ಡನ್ನೆಲ್ಲಾ ಅವನ ಮೇಲೆ ಹೂಡಲು ಅವರ ತಂದೆ ನಿರ್ಧರಿಸಿದ್ದರು.

ರಾವ್ ಸ್ನಾತಕೋತ್ತರ ಶಿಕ್ಷಣಕ್ಕೆ ಬಾಂಬೆಯ ವಿಲ್ಸನ್ ಕಾಲೇಜ್ ಸೇರಿದರು. ಅಲ್ಲಿ ಅವರು ಅರ್ಥಶಾಸ್ತ್ರವನ್ನು ಪ್ರಮುಖ ವಿಷಯವನ್ನಾಗಿ ಆರಿಸಿಕೊಂಡರು. ಯೂಸುಫ್ ಮೆಹೆರಾಲಿಯವರ ಪ್ರಭಾವಕ್ಕೆ ಒಳಗಾದರು. ಮೆಹೆರಾಲಿ ಒಬ್ಬ ಶ್ರೇಷ್ಠ ಸಾಮಾಜಿಕ ಕಾರ್ಯಕರ್ತರಾಗಿದ್ದರು. ರಾವ್ ಅವರಲ್ಲಿ ಬಲವಾದ ಸಾಮಾಜಿಕ ಕಾಳಜಿ ಮೂಡುವುದಕ್ಕೆ ಅವರು ಕಾರಣ. ಗಾಂಧೀಜಿಯವರಿಂದ ಮತ್ತು ಅಸಹಕಾರ ಚಳುವಳಿಯಿಂದ ಪ್ರಭಾವಿತರಾಗಿ ರಾವ್ ಖಾದಿಯನ್ನು ಧರಿಸಲು ಪ್ರಾರಂಭಿಸಿದರು. ಅವರ ಮಾತಿನಲ್ಲೇ ಹೇಳುವುದಾದರೆ ಅವರು "ಜೀವನಪರ್ಯಂತ ಖಾದಿವಾದಿ"ಯಾದರು. ಅವರು ಮುಂಬೈ ವಿಶ್ವವಿದ್ಯಾಲಯದಲ್ಲಿ ಸಿ.ಎನ್. ವಕೀಲ್ ಅವರ ಮಾರ್ಗದರ್ಶನದಲ್ಲಿ ಅರ್ಥಶಾಸ್ತ್ರದಲ್ಲಿ ಎಂಎ ಪದವಿ ಪಡೆದರು. ಅದಕ್ಕಾಗಿ ಮಂಡಿಸಿದ್ದ ಪ್ರಬಂಧ ೧೯೩೧ ರಲ್ಲಿ "ಭಾರತದಲ್ಲಿ ಆದಾಯದ ತೆರಿಗೆ" ಎಂಬ ಹೆಸರಿನಲ್ಲಿ ಪ್ರಕಟವಾಯಿತು. ರಾವ್ ಅವರಿಗೆ ಮುಕ್ತ ಮಾರುಕಟ್ಟೆಯ ಬಗ್ಗೆ ಒಲವಿರಲಿಲ್ಲ. ಅವರ ಒಲವು ಯೋಜಿತ ಆರ್ಥಿಕ ಅಭಿವೃದ್ಧಿಯ ಕಡೆಗಿತ್ತು. ಇದು ನಂತರದಲ್ಲಿ ವಕೀಲ್‌ರೊಂದಿಗಿನ ಭಿನ್ನಾಭಿಪ್ರಾಯಕ್ಕೆ ಕಾರಣವಾಯಿತು. ಅವರು ಮುಂಬೈ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಪದವೀಧರರಾದರು. ಅರ್ಥಶಾಸ್ತ್ರದಲ್ಲಿ ಇನ್ನೂ ಆಳವಾದ ತರಬೇತಿಯ ಅಗತ್ಯವಿದೆ ಎಂದು ಅವರಿಗೆ ತೋರಿತು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ (ಎಲ್‌ಎಸ್‌ಇ) ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕೆ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿದರು. ಟಾಟಾ ಟ್ರಸ್ಟ್ ಮತ್ತು ಇತರ ಮೂಲಗಳಿಂದ ಸಾಲ ಮತ್ತು ಧನಸಹಾಯಗಳಿಂದ ಬೇಕಾದ ಹಣವನ್ನು ಒಟ್ಟುಮಾಡಿಕೊಂಡರು. ೧೯೩೨ರಲ್ಲಿ ಕೇಂಬ್ರಿಡ್ಜ್‌ನ ಗೊನ್ವಿಲ್ಲೆ ಮತ್ತು ಕೈಯಸ್ ಕಾಲೇಜಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಯಾಗಿ ಸೇರಲು ನಿರ್ಧರಿಸಿದರು. ಕೇಂಬ್ರಿಡ್ಜ್ ಆಗ ಬೌದ್ಧಿಕವಾಗಿ ಉತ್ತುಂಗದಲ್ಲಿತ್ತು. ಕೇನ್ಸ್ ತಮ್ಮ ಜನರಲ್ ಥಿಯರಿಯನ್ನು ಬರೆಯುತ್ತಿದ್ದರು. ಎ.ಸಿ. ಪಿಗೂ, ಪಿಯೆರೊ ಸ್ರಾಫಾ, ಜೋನ್ ರಾಬಿನ್ಸನ್, ಮತ್ತು ರಿಚರ್ಡ್ ಕಾನ್ ಇವರ ಜೊತೆ ಸೇರಿಕೊಂಡು ಕೇನ್ಸ್ ೨೦ನೇ ಶತಮಾನದ ಅರ್ಥಶಾಸ್ತ್ರದ ಬುನಾದಿಯನ್ನು ರೂಪಿಸುತ್ತಿದ್ದರು.

'ಕೇನ್ಸ್‌ನ ಪ್ರಸಿದ್ಧ ಪೊಲಿಟಿಕಲ್ ಎಕಾನಮಿ ಕ್ಲಬ್‌ಗೆ ರಾವ್ ಅವರನ್ನು ಆಹ್ವಾನಿಸಲಾಯಿತು. ಸಾಮಾನ್ಯವಾಗಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅದರಲ್ಲಿ ಭಾಗವಹಿಸಲು ಅವಕಾಶ ಸಿಗುತ್ತಿರಲಿಲ್ಲ. ವಾರಕ್ಕೊಮ್ಮೆ ಅಲ್ಲಿ ಪ್ರಸ್ತುತ ನಡೆಯುತ್ತಿದ್ದ ಅಧ್ಯಯನಗಳ ಬಗ್ಗೆ ಚರ್ಚಿಸಲಾಗುತ್ತಿತ್ತು. ಅದರಲ್ಲಿ ಕೇನ್ಸ್‌ನ ಜನರಲ್ ಥಿಯರಿಯ ಆರಂಭಿಕ ಕರಡನ್ನು ಕುರಿತೂ ಚರ್ಚೆಯಾಗಿತ್ತು. ಅಲ್ಲಿ ತುಂಬಾ ನಿಷ್ಠೂರವಾದ ಚರ್ಚೆ ನಡೆಯುತ್ತಿತ್ತು. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಅತ್ಯುತ್ತಮ ಅರ್ಥಶಾಸ್ತ್ರದ ವಿದ್ಯಾರ್ಥಿಗೆ ನೀಡುವ ಆಡಮ್ ಸ್ಮಿತ್ ಪ್ರಶಸ್ತಿಯನ್ನು

ರಾವ್ ಗೆದ್ದುಕೊಂಡಿದ್ದರು. ಇದು ಅವರಿಗೆ ಅತ್ಯಂತ ಹೆಮ್ಮೆಯ ಸಂಗತಿಯಾಗಿತ್ತು. ಅವರ ಸಹಪಾಠಿಗಳಾಗಿದ್ದ ಅಲೆಕ್ಸಾಂಡರ್ ಕೇರ್ನ್‌ಕ್ರಾಸ್ ಮತ್ತು ಹಾನ್ಸ್ ಸಿಂಗರ್ ಕೊನೆಯವರೆಗೂ ಅವರ ಆತ್ಮೀಯ ಗೆಳೆಯರಾಗಿದ್ದರು. ರಾವ್ ತಮ್ಮ ಸಹಪಾಠಿಗಳೊಂದಿಗೆ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಪ್ರತಿವಾರ ಹೋಗಿಬರುತ್ತಿದ್ದರು. ಅಲ್ಲಿ ಅವರಿಗೆ ಜಾನ್ ಮತ್ತು ಉರ್ಸುಲಾ ಹಿಕ್ಸ್, ಅಬ್ಬಾ ಲೆರ್ನರ್, ಮತ್ತು ಪಾಲ್ ಸ್ವೀಜಿಯವರ ಪರಿಚಯವಾಯಿತು. "೨೦-೩೦" ಯುವಅರ್ಥಶಾಸ್ತ್ರಜ್ಞರೊಂದಿಗೆ ಸೇರಿಕೊಂಡು ಇವರು "ರಿವ್ಯೂ ಆಫ್ ಎಕನಾಮಿಕ್ ಸ್ಟಡೀಸ್"ನ್ನು ಸ್ಥಾಪಿಸಿದರು. ಬಹುತೇಕ ಯುವ ಬರಹಗಾರರಿಗೆ ಪ್ರಖ್ಯಾತ ಜರ್ನಲ್‌ಗಳಲ್ಲಿ ಲೇಖನಗಳನ್ನು ಪ್ರಕಟಿಸಲು ಸಾಧ್ಯವಾಗುತ್ತಿರಲಿಲ್ಲ. ಅಂತಹ ಯುವ ಬರಹಗಾರರಿಗೆ ತಮ್ಮ ಬರಹಗಳನ್ನು ಪ್ರಕಟಿಸಲು ಇದೊಂದು ವೇದಿಕೆಯಾಗಿತ್ತು. ಆ ಮೂಲಕ ಯುವ ಲೇಖಕರನ್ನು ಪ್ರೋತ್ಸಾಹಿಸುವ ಉದ್ದೇಶ ಇದಕ್ಕಿತ್ತು. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಲಿಯೋನೆಲ್ ರಾಬಿನ್ಸ್ ಜೊತೆಯಲ್ಲಿ ರಾವ್ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಆ ಸಮಯದಲ್ಲಿ ರಾಬಿನ್ಸ್ ಅರ್ಥಶಾಸ್ತ್ರಕ್ಕೆ ನೀಡಿದ್ದ ವ್ಯಾಖ್ಯೆಯನ್ನು ಕುರಿತಂತೆ ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ರಾಬಿನ್ಸ್ ವ್ಯಾಖ್ಯೆ ತೀರಾ ಪ್ರಭಾವ ಬೀರಿತ್ತು. ರಾಬಿನ್ಸ್ ಪ್ರಕಾರ ಅರ್ಥಶಾಸ್ತ್ರ ಅನ್ನುವುದು "ಮಾನವನ ವರ್ತನೆಯನ್ನು ಬಳಕೆ ಹಾಗೂ ಸಂಪನ್ಮೂಲಗಳ ನಡುವಿನ ಸಂಬಂಧವಾಗಿ ಅಧ್ಯಯನ ಮಾಡುವ ವಿಜ್ಞಾನ. ಸಂಪನ್ಮೂಲಗಳು ಮಿತವಾಗಿರುತ್ತವೆ. ಹಾಗೂ ಹಲವು ಪರ್ಯಾಯ ಉದ್ದೇಶಕ್ಕೆ ಅವನ್ನು ಬಳಸಬಹುದಾಗಿರುತ್ತದೆ". ಪರ್ಯಾಯವಾಗಿ ರಾವ್ ನೀಡಿದ್ದ ವ್ಯಾಖ್ಯೆ ಹೆಚ್ಚು ದೀರ್ಘವಾಗಿತ್ತು. ಆದರೆ ಹೆಚ್ಚು ಸಮಗ್ರವಾಗಿತ್ತು.


"ಆರ್ಥಿಕ ಚಟುವಟಿಕೆಗಳಲ್ಲಿ ಗುರಿ ಹಾಗೂ ವಿಧಾನ ಎರಡೂ ಸೇರಿರುತ್ತವೆ. ಆರ್ಥಿಕ ಮೌಲ್ಯವಿರುವ ಹಾಗೂ ವಿನಿಮಯ ಮಾಡಬಹುದಾದ ಸರಕುಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವುದು ಇದರ ಉದ್ದೇಶ. ಆದರೆ ಆ ಪ್ರಕ್ರಿಯೆಯಲ್ಲಿ (ಎ) ಆರ್ಥಿಕ ಸರಕುಗಳು ಸಮುದಾಯದ ಮೂಲಭೂತ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಬೇಕು (ಬಿ) ಕನಿಷ್ಠ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು. ಹಾಗೂ ಉತ್ಪಾದನಾ ಕ್ರಿಯೆಗಳಲ್ಲಿ ಸಂಪನ್ಮೂಲಗಳು ಪೋಲಾಗುವುದನ್ನು ಸಾಧ್ಯವಾದಷ್ಟು ತಪ್ಪಿಸಬೇಕು. ಮತ್ತು (ಸಿ) ಪ್ರತಿಯೊಂದು ಮಾನವ ಚಟುವಟಿಕೆಯ ಗುರಿ ಮಾನವ ವ್ಯಕ್ತಿತ್ವದ ಅಭಿವೃದ್ಧಿಯನ್ನು ಪೋಷಿಸಿ ಬೆಳಸುವುದಾಗಬೇಕೇ ಹೊರತು ಅದಕ್ಕೆ ಅಡ್ಡಿ ಪಡಿಸುವುದಲ್ಲ." ಅರ್ಥಶಾಸ್ತ್ರವನ್ನು ಅದರ ಸಾಮಾಜಿಕ ಮತ್ತು ರಾಜಕೀಯ ಸಂದರ್ಭದಲ್ಲಿ ಅಧ್ಯಯನ ಮಾಡಬೇಕೇ ಹೊರತು ಪ್ರತ್ಯೇಕವಾಗಿ ಅಧ್ಯಯನ ಮಾಡಬಾರದು ಎಂದು ರಾವ್ ದೃಢವಾಗಿ ನಂಬಿದ್ದರು. ಅವರು ಈ ಕ್ರಮವನ್ನು ಡಿಎಸ್‌ಇ, ಐಇಜಿ, ಮತ್ತು ಐಎಸ್‌ಇಸಿಯಲ್ಲಿ ಜಾರಿಗೆ ತಂದಿದ್ದರು. ಅಲ್ಲಿ ಅರ್ಥಶಾಸ್ತ್ರಜ್ಞರ ಜೊತೆಗೆ ಸಮಾಜಶಾಸ್ತ್ರಜ್ಞರು, ಜನಸಂಖ್ಯಾಶಾಸ್ತ್ರಜ್ಞರು, ಮತ್ತು ರಾಜಕೀಯ ವಿಜ್ಞಾನಿಗಳನ್ನು ನೇಮಿಸಿಕೊಂಡಿದ್ದರು.


ಅವರು ತಮ್ಮ ಪಿಎಚ್‌ಡಿಗೆ ಕಾಲಿನ್ ಕ್ಲಾರ್ಕ್ ಅವರನ್ನು ಮಾರ್ಗದರ್ಶಕರನ್ನಾಗಿ ಆಯ್ಕೆ ಮಾಡಿಕೊಂಡರು. ಮತ್ತು ಅಧ್ಯಯನಕ್ಕೆ ಭಾರತೀಯ ರಾಷ್ಟ್ರೀಯ ವರಮಾನವನ್ನು ಅಂದಾಜು ಮಾಡುವ ಕ್ರಮವನ್ನು ವಿಷಯವನ್ನಾಗಿ ಆರಿಸಿಕೊಂಡರು. ಕಾಲಿನ್ ಕ್ಲಾರ್ಕ್ ಅವರು ರಿಚರ್ಡ್ ಸ್ಟೋನ್ ಅವರಿಗೂ ಮಾರ್ಗದರ್ಶಕರಾಗಿದ್ದರು. ಸ್ಟೋನ್ ಕೂಡ ರಾಷ್ಟ್ರೀಯ ವರಮಾನಕ್ಕೆ ಸಂಬಂಧಿಸಿದಂತಯೇ ಅಧ್ಯಯನ ಮಾಡಿದ್ದು. ಅವರು ರಾವ್ ಅಧ್ಯಯನ ಮಾಡಿದ ಹಲವು ವರ್ಷಗಳ ನಂತರ ಮಾಡಿದ್ದು. ಸ್ಟೋನ್ ಅವರ ಮಾಡಿದ್ದ ಅಧ್ಯಯನಕ್ಕೆ ೧೯೮೪ರಲ್ಲಿ ಅರ್ಥಶಾಸ್ತ್ರದಲ್ಲಿ ನೊಬೆಲ್ ಬಹುಮಾನ ಸಿಕ್ಕಿತ್ತು.

ಆ ಸಮಯದಲ್ಲಿ ನಡೆಯುತ್ತಿದ್ದ ಬೌದ್ಧಿಕ ಚರ್ಚೆಗಳಲ್ಲಿ ರಾವ್ ಸಂಪೂರ್ಣವಾಗಿ ಮುಳುಗಿಹೋಗಿದ್ದರು. ರಾವ್ ಅವರನ್ನು ನಂತರ ಕೇಂಬ್ರಿಡ್ಜ್‌ನ ಗಾಯಿಸ್ ಮತ್ತು ಕಾನ್‌ವಿಲ್ ಕಾಲೇಜಿನ ಫೆಲೋ ಆಗಿ ಅಧ್ಯಾಪಕ ವೃತ್ತಿಗೆ ಅರ್ಜಿ ಸಲ್ಲಿಸಲು ಆಹ್ವಾನಿಸಲಾಯಿತು. ಒಂದು ಕಡೆ ಶೈಕ್ಷಣಿಕವಾಗಿ ಅರ್ಥಶಾಸ್ತ್ರದಲ್ಲಿ ತೊಡಗಿಸಿಕೊಳ್ಳಬೇಕೆಂಬ ಆಸೆ ಕಾಡುತ್ತಿದ್ದರೆ, ಇನ್ನೊಂದೆಡೆ ತಾಯ್ನಾಡಿಗೆ ಮರಳಿ ಅಲ್ಲಿಯ ಅಭಿವೃದ್ಧಿಗೆ ನೆರವಾಗಬೇಕೆನ್ನುವ ತೀವ್ರ ಸೆಳೆತ ಅವರನ್ನು ಎಳೆಯುತ್ತಿತ್ತು. ಅವರು ಭಾರತಕ್ಕೆ ಮರಳಬೇಕೆಂದು ಕೇನ್ಸ್ ಬಲವಾಗಿಯೇ ಒತ್ತಾಯಿಸುತ್ತಿದ್ದರು. ಇಂಗ್ಲೆಂಡಿನಲ್ಲಿ ಉಳಿಯಬೇಕೆನ್ನುವ ರಾವ್ ಬಯಕೆಯಿಂದ ಅವರು ಸಿಟ್ಟಾಗಿದ್ದಂತೆ ತೋರುತ್ತದೆ. ಹಾಗೆ ಮಾಡುವುದು "ಜಗತ್ತಿನ ಅತಿದೊಡ್ಡ ತಪ್ಪಾಗುತ್ತದೆ" ಎಂದು ಹೇಳಿದ್ದರು (ಲೆಫ್ಟಿನೆಂಟ್ ಕರ್ನಲ್ ಎಂವಿ ಬ್ರೆಟ್‌ಗೆ ಕೇನ್ಸ್‌ರ ಪತ್ರ, ಜೂನ್ ೨೧, ೧೯೩೪). ಇಂಗ್ಲೆಂಡಿನಲ್ಲಿ ಉಳಿಯುವುದಕ್ಕಿಂತ ರಾವ್ ಭಾರತಕ್ಕೆ ಮರಳಿ ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಭಾಗವಹಿಸುವುದು ಒಳ್ಳೆಯದು ಎಂದು ಕೇನ್ಸ್ ಭಾವಿಸಿದರು. ರಾವ್ ೧೯೩೪ರಲ್ಲಿ ಅಹಮದಾಬಾದ್‌ನ ಎಸ್‌ಎಲ್‌ಡಿ ಆರ್ಟ್ಸ್ ಕಾಲೇಜಿನ ಪ್ರಾಂಶುಪಾಲರಾಗಿ ಭಾರತಕ್ಕೆ ಮರಳಿದರು. ಕೇನ್ಸ್ ಈ ಹುದ್ದೆಗಾಗಿ ರಾವ್ ಅವರಿಗೆ ಬರೆದುಕೊಟ್ಟಿದ್ದ ಶಿಫಾರಸು ಪತ್ರದಲ್ಲಿ "ಶ್ರೀ ರಾವ್‌ರ ಯೋಗ್ಯತೆ ಹಾಗೂ ಅರ್ಥಶಾಸ್ತ್ರದ ಹಲವು ಶಾಖೆಗಳಲ್ಲಿ ಅವರಿಗಿರುವ ಸಾಮರ್ಥ್ಯದ ಬಗ್ಗೆ ನನಗೆ ಅತ್ಯುತ್ತಮ ಅಭಿಪ್ರಾಯವಿದೆ" ಎಂದು ಬರೆದಿದ್ದರು (ಡಾ. ರಾವ್‌ಗಾಗಿ ಕೇನ್ಸ್‌ರ ಶಿಫಾರಸು, ಸೆಪ್ಟೆಂಬರ್ ೨೬, ೧೯೩೪).

೧೯೪೨ರಲ್ಲಿ, ದೆಹಲಿ ವಿಶ್ವವಿದ್ಯಾಲಯದಿಂದ ಅಲ್ಲಿನ ಅರ್ಥಶಾಸ್ತ್ರದ ಪ್ರಾಧ್ಯಾಪಕರ ಹುದ್ದೆಗೆ ರಾವ್ ಅವರೊಗೆ ಆಹ್ವಾನ ಬಂದಿತು. ರಾವ್ ಅವರನ್ನು ಆಗಿನ ಉಪಕುಲಪತಿಗಳಾಗಿದ್ದ ಸರ್ ಮಾರಿಸ್ ಗ್ವೈಯರ್ ಆಹ್ವಾನಿಸಿದ್ದರು. ನಂತರದಲ್ಲಿ ಬಂಗಾಳದ ಕ್ಷಾಮದ ಸಂದರ್ಭದಲ್ಲಿ ಅವರು ಭಾರತ ಸರ್ಕಾರದ ಆಹಾರ ಸಂಖ್ಯಾಶಾಸ್ತ್ರ ಇಲಾಖೆಯ ನಿರ್ದೇಶಕರ ಹುದ್ದೆಯನ್ನು ಒಪ್ಪಿಕೊಂಡರು. ಮತ್ತೆ ೧೯೪೬ರಲ್ಲಿ ದೆಹಲಿ ವಿಶ್ವವಿದ್ಯಾಲಯಕ್ಕೆ ಮರಳಿಬಂದರು.

೧೯೪೭ರಲ್ಲಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಮಾದರಿಯಲ್ಲಿ ಒಂದು ಅರ್ಥಶಾಸ್ತ್ರದ ಶಾಲೆಯನ್ನು ಸ್ಥಾಪಿಸುವ ಯೋಚನೆ ಹಾಕಿಕೊಂಡರು. ಇದು ಭಾರತೀಯ ಆರ್ಥಿಕ ಸೇವೆ (ಐಇಎಸ್)ಗೆ ಸೇರಬಹುದಾದ ಅರ್ಥಶಾಸ್ತ್ರಜ್ಞರ ತಂಡವನ್ನು ತರಬೇತುಗೊಳಿಸುತ್ತದೆ ಎಂದು ಅವರು ನಂಬಿದ್ದರು. ಐಇಎಸ್ ಕೂಡ ಇವರ ಚಿಂತನೆಯ ಕೂಸು. ಅವರು ಬಿ.ಎನ್. ಗಂಗೂಲಿ ಮತ್ತು ಪಿ.ಎನ್. ಧರ್ ಅವರನ್ನು ಅಧ್ಯಾಪಕರನ್ನಾಗಿ ಸೇರಿಸಿಕೊಂಡರು. ಅತ್ಯಂತ ಕಡಿಮೆ ಬಜೆಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್ ೧೯೫೨ರಲ್ಲಿ ಔಪಚಾರಿಕವಾಗಿ ಪ್ರಾರಂಭವಾಯಿತು. ಸಂಸ್ಥೆಯನ್ನು ವಿಸ್ತರಿಸುವುದಕ್ಕೆ ಬಿರ್ಲಾ ಗುಂಪಿನಿಂದ (೬ ಲಕ್ಷ ರೂಪಾಯಿ) ಮತ್ತು ಟಾಟಾ ಗುಂಪಿನಿಂದ (೧ ಲಕ್ಷ ರೂಪಾಯಿ) ಧನಸಹಾಯ ಸಿಕ್ಕಿತು. ಅದರಿಂದ ಕಟ್ಟಡ, ಗ್ರಂಥಾಲಯ ಮತ್ತು ಇತರ ಸೌಲಭ್ಯಗಳನ್ನು ಕಲ್ಪಿಸಲಾಯಿತು. ಅಧ್ಯಾಪಕರಾಗಿ ಅತ್ಯಂತ ಪ್ರತಿಭಾನ್ವಿರಾದ ಕೆ.ಎನ್. ರಾಜ್ ಮತ್ತು ಕೆ.ಆರ್. ನಾರಾಯಣನ್ (ಮುಂದೆ ಭಾರತದ ರಾಷ್ಟ್ರಪತಿಗಳಾದ) ಸೇವೆ ಸಲ್ಲಿಸುತ್ತಿದ್ದರು. ರಾವ್ ಅವರಿಗೆ ದೆಹಲಿ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಲು ಆಹ್ವಾನ ಬಂತು. ಆಗ ಅವರು ಅರ್ಥಶಾಸ್ತ್ರದ ವಿಭಾಗದ ಅಧ್ಯಕ್ಷ ಸ್ಥಾನವನ್ನು ಅಮರ್ತ್ಯ ಸೇನ್ ಅವರಿಗೆ ಬಿಟ್ಟುಕೊಡಲು ನಿರ್ಧರಿಸಿದರು. ಇದು ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್ ಸೇರುವುದಕ್ಕೆ ಸೇನ್ ಅವರಿಗೆ ಒಂದು ಪ್ರೇರಣೆಯಾಯಿತು.





ಶೀಘ್ರದಲ್ಲೇ ಸೇನ್, ಮನಮೋಹನ್ ಸಿಂಗ್, ಜಗದೀಶ್ ಭಗವತಿ, ಸುಖಮೋಯ್ ಚಕ್ರವರ್ತಿ, ಧರ್ಮ ಕುಮಾರ್ ಮತ್ತು ಪ್ರಣಬ್ ಬರ್ಧನ್ ಮೊದಲಾದ ಆ ಕಾಲದ ಭಾರತೀಯ ಅರ್ಥಶಾಸ್ತ್ರಜ್ಞರು ದೆಹಲಿ ಸ್ಕೂಲನ್ನು ಸೇರಿಕೊಂಡರು. ಅದು ದೇಶದಲ್ಲಿ ಅರ್ಥಶಾಸ್ತ್ರ ತರಬೇತಿ ಮತ್ತು ಸಂಶೋಧನೆಯ ಪ್ರಮುಖ ಸಂಸ್ಥೆಯಾಯಿತು. ರಾವ್ ಅವರು ದೆಹಲಿ ಸ್ಕೂಲಿನಲ್ಲಿ ಎಂ.ಎನ್. ಶ್ರೀನಿವಾಸ್ ಅವರೊಂದಿಗೆ ಸಮಾಜಶಾಸ್ತ್ರ ವಿಭಾಗ ಮತ್ತು ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗಗಳನ್ನೂ ಸ್ಥಾಪಿಸಿದರು. ಮೂರು ವರ್ಷಗಳ ನಂತರ ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ರಾಜೀನಾಮೆ ನೀಡಿದರು. ತಾವೇ ೧೯೫೨ರಲ್ಲಿ ಸ್ಥಾಪಿಸಿದ್ದ ಆರ್ಥಿಕ ಬೆಳವಣಿಗೆಯ ಸಂಸ್ಥೆಯನ್ನು ಅಭಿವೃದ್ಧಿ ಪಡಿಸುವ ಕಡೆ ಗಮನ ಹರಿಸಿದರು. ಬ್ರೂಕಿಂಗ್ಸ್ ಸಂಸ್ಥೆಯನ್ನು ಮಾದರಿಯಾಗಿ ಇಟ್ಟುಕೊಂಡು ಒಂದು ಆರ್ಥಿಕ ಚಿಂತನಾ ಮಂಡಳಿಯಾಗಿ ಅದನ್ನು ರೂಪಿಸಲಾಗಿತ್ತು.

ಅವರು ೧೯೬೩ ರಲ್ಲಿ ಯೋಜನಾ ಆಯೋಗವನ್ನು ಸೇರಿಕೊಂಡರು. ಕಾಂಗ್ರೆಸ್ ಪಕ್ಷವೂ ಬುದ್ಧಿಜೀವಿಗಳನ್ನು ತನ್ನ ಪಕ್ಷಕ್ಕೆ ಸೇರಿಸಿಕೊಳ್ಳಲು ಯೋಚಿಸುತ್ತಿತ್ತು. ರಾವ್ ಅವರನ್ನು ಪಕ್ಷಕ್ಕೆ ಸೇರಲು ಆಹ್ವಾನಿಸಲಾಯಿತು. ಕರ್ನಾಟಕದ ಆಗಿನ ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪ ಅವರು ರಾವ್ ಅವರನ್ನು ಬಳ್ಳಾರಿ ಕ್ಷೇತ್ರದಿಂದ ಸಂಸದರಾಗಿ ಚುನಾವಣೆಗೆ ನಿಲ್ಲುವಂತೆ ಒತ್ತಾಯಿಸಿದರು. ರಾವ್ ಚುನಾವಣೆಯಲ್ಲಿ ಗೆದ್ದರು. ಕೇಂದ್ರ ಸಾರಿಗೆ ಮತ್ತು ನೌಕಾಪಡೆಯ ಮಂತ್ರಿಯಾದರು. ಮೊದಲ ಮೂರು ವರ್ಷಗಳಲ್ಲಿ, ಅವರು ದೇಶದಲ್ಲಿ ಸಾರ್ವಜನಿಕ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಗಮನಕೊಟ್ಟರು. ಮಂಗಳೂರು ಮತ್ತು ಥೂತುಕುಡಿ (ಈಗಿನ ತೂತುಕೊಡಿ) ಬಂದರುಗಳ ನಿರ್ಮಾಣದ ಕೆಲಸ ಪ್ರಾರಂಭಿಸಿದರು. ೧೯೬೯ರಲ್ಲಿ ಅವರನ್ನು ಶಿಕ್ಷಣ ಮಂತ್ರಿಯಾಗಿ ವರ್ಗಾಯಿಸಲಾಯಿತು. ಅಲ್ಲಿ ಅವರು ಗ್ರಾಮೀಣ ಪ್ರಾಥಮಿಕ ಶಿಕ್ಷಣ ಮತ್ತು ವಯಸ್ಕರ ಸಾಕ್ಷರತೆಗೆ ಗಮನ ಕೊಟ್ಟರು. ಮತ್ತೆ ೧೯೭೧ರಲ್ಲಿ ಚುನಾವಣೆಯಲ್ಲಿ ಇನ್ನೂ ಹೆಚ್ಚಿನ ಬಹುಮತದೊಂದಿಗೆ ಗೆದ್ದರು. ಆದರೂ ಅವರಿಗೆ ಮಂತ್ರಿಮಂಡಳದಲ್ಲಿ ಅವಕಾಶ ಸಿಗಲಿಲ್ಲ. ಬಹುಶಃ ಅವರ ಪ್ರಶ್ನಿಸುವ ಶೈಲಿ ಪ್ರಧಾನಿ ಇಂದಿರಾ ಗಾಂಧಿಯವರಿಗೆ ಹೊಂದಿಕೆಯಾಗಲಿಲ್ಲ ಅನಿಸುತ್ತದೆ. ಅವರಿಗೆ ೧೯೭೪ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿ ನೀಡಲಾಯಿತು.

೧೯೭೨ರಲ್ಲಿ, ಅವರು ಬೆಂಗಳೂರಿಗೆ ಬಂದರು. ಐಸೆಕ್–ಸಾಮಾಜಿ–ಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯನ್ನು ಪ್ರಾರಂಭಿಸಿದರು. ಅದೊಂದು ಬಹುಶಿಸ್ತಿನ ಸಾಮಾಜಿಕ ವಿಜ್ಞಾನ ಸಂಸ್ಥೆಯಾಗಿತ್ತು. ಅವರ ನಾಯಕತ್ವದಲ್ಲಿ, ಸಂಸ್ಥೆಯು ರಾಮಕೃಷ್ಣ ಹೆಗಡೆ ಸರ್ಕಾರದ ಮಂಡಲ ಪಂಚಾಯತ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಲ್ಲಿ ಕೇಂದ್ರ ಪಾತ್ರ ವಹಿಸಿತು. ಇದು ಸಂವಿಧಾನದ ೭೩ನೇ ತಿದ್ದುಪಡಿಗೆ ಆಧಾರವಾಯಿತು. ರಾವ್ ಈ ಅವಧಿಯಲ್ಲಿ ಹಲವು ವಿಷಯಗಳ ಬಗ್ಗೆ ಬಹಳಷ್ಟು ಬರೆದರು. ಭಾರತೀಯ ಸಮಾಜವಾದ, ಭಾರತದ ರಾಷ್ಟ್ರೀಯ ಆದಾಯದ ಪ್ರವೃತ್ತಿಗಳ ಮರುಪರಿಶೀಲನೆ ಮತ್ತು ಭಾರತದ ಭಾಷಾ ಏಕೀಕರಣ ಇತ್ಯಾದಿ ಹಲವು ವಿಷಯಗಳ ಬಗ್ಗೆ ಬರೆದರು. ಭಾಷೆಯ ಏಕೀಕರಣಕ್ಕಾಗಿ ಅವರು ಹಿಂದಿ ವ್ಯಾಕರಣವನ್ನು ಸರಳೀಕರಿಸಬೇಕು, ಇತರ ಭಾರತೀಯ ಭಾಷೆಗಳಿಂದ ನುಡಿಗಟ್ಟುಗಳನ್ನು ಮತ್ತು ವಿಚಾರಗಳನ್ನು ತೆಗೆದುಕೊಳ್ಳಬೇಕು. ಮತ್ತು ದೇಶದ ಎಲ್ಲಾ ಕಡೆಗಳಲ್ಲಿ ಪ್ರಮುಖ ಭಾರತೀಯ ಭಾಷೆಗಳ ಮೂಲ ಪಾಠಗಳನ್ನು ಕಲಿಸಲು ಹೆಚ್ಚಿನ ಪ್ರಯತ್ನ ಮಾಡಬೇಕು ಇತ್ಯಾದಿ ಹಲವು ಶಿಫಾರಸ್ಸುಗಳನ್ನು ಮಾಡಿದ್ದರು.

ವಿ.ಕೆ.ಆರ್.ವಿ. ರಾವ್ ಅವರು ಹಿಂದು ಧರ್ಮದಲ್ಲಿ ಶ್ರದ್ಧೆ ಇಟ್ಟುಕೊಂಡಿದ್ದರು. ಸ್ವಾಮಿ ವಿವೇಕಾನಂದರ ಸಿದ್ಧಾಂತಗಳಿಂದ ಗಾಢವಾಗಿ ಪ್ರಭಾವಿತರಾಗಿದ್ದರು. ರಾವ್ ಇದನ್ನು "ವೇದಾಂತಿಕ ಸಮಾಜವಾದ" ಎಂದು ಕರೆದರು. ಇದು ಪ್ರಜಾಸತ್ತಾತ್ಮಕ ಸಮಾಜವಾದ ಮತ್ತು ಗಾಂಧೀವಾದೀ ಸಮಾಜವಾದವನ್ನು ಹೆಚ್ಚಾಗಿ ಹೋಲುತ್ತದೆ ಎಂದು ವಾದಿಸುತ್ತಿದ್ದರು. ರಾವ್ ಅವರು ಎರಡು ಬಾರಿ ವಿವಾಹವಾದರು. ಅವರ ಮೊದಲ ಪತ್ನಿ ಪ್ರಮೀಳಾ. ಈ ದಾಂಪತ್ಯದಿಂದ ಅವರಿಗೆ ಮೂರು ಮಕ್ಕಳಿದ್ದರು. ಮೊದಲ ಮಗ ಮಾಧವ ರಾವ್ ಅರ್ಥಶಾಸ್ತ್ರಜ್ಞರು. ಸುಧಾರಾವ್ ಶಿಕ್ಷಣದ ಸಮಾಜಶಾಸ್ತ್ರಜ್ಞೆ. ಮೂರನೆಯವರು ಮೀರಾ ರಾಮಕೃಷ್ಣನ್. ಮೀರಾ ಅವರ ಮಗಳು ಉಮಾ ಮತ್ತು ಮಗ ಮುಕುಂದ ಇಬ್ಬರೂ ಜೀವವಿಜ್ಞಾನಿಗಳು. ಪ್ರಮಿಳಾ ರಾವ್ ೧೯೫೫ ರಲ್ಲಿ ಮಲ್ಟಿಪಲ್ ಸ್ಕ್ಲೆರೋಸಿಸ್ಸಿಂದ ನಿಧನರಾದರು. ನಂತರ ಅವರು ಮಿರಾಂಡಾ ಹೌಸ್ನ ಉಪಪ್ರಾಂಶುಪಾಲೆಯಾಗಿದ್ದ ಕಮಲಾ ಅಚಾಯ ಅವರನ್ನು ವಿವಾಹವಾದರು. ಇವರು ಆಕ್ಸ್‌ಫರ್ಡಿನಲ್ಲಿ ಜೆ.ಆರ್.ಆರ್. ಟೋಲ್ಕೀನ್ ಅವರ ಮಾರ್ಗದರ್ಶನದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದರು. ಅವರ ಸೋದರಳಿಯ ಎಸ್.ಎಲ್. ರಾವ್ (ನನ್ನ ತಂದೆ) ಅವರ The Partial Memoirs of V K R V Rao ಕೃತಿಯನ್ನು ಸಂಪಾದಿಸಿ ಪ್ರಕಟಿಸಿದರು. ಅವರ ಜೀವನವನ್ನು ಕುರಿತಂತೆ ಇನ್ನೂ ಹೆಚ್ಚು ವಿವರವಾದ, ಪೂರ್ಣಪ್ರಮಾಣದ ಜೀವನ ಚರಿತ್ರೆ ಬರಬೇಕಿದೆ.

[ಅಜಿಂ ಪ್ರೇಂಜಿ ಫೌಂಡೇಷನ್ ವೆಬ್‌ಸೈಟಿನಲ್ಲಿ ಪ್ರಕಟವಾಗಿರುವ ಲೇಖನವನ್ನು ಇಲ್ಲಿ ಅನುವಾದಿಸಿ ನೀಡಲಾಗಿದೆ]

ಕ್ಷೇತ್ರ ಮರುವಿಂಗಡಣೆಯ ಚರ್ಚೆ: ಹಲವು ಪರ್ಯಾಯಗಳು

ಅಂಜಿಷ್ಣು ದಾಸ್

ಈಗ ಕ್ಷೇತ್ರ ಮರುವಿಂಗಡನೆ ಕುರಿತ ಚರ್ಚೆ ತೀವ್ರವಾಗುತ್ತಿದೆ. ೨೦೨೬ರೊಳಗೆ ಅದು ನಿರ್ಧಾರವಾಗಬೇಕು. ಲೋಕಸಭೆಯಲ್ಲಿ ಸ್ಥಾನಗಳನ್ನು ನಿಗದಿಪಡಿಸಲು ಕೇವಲ ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಳ್ಳಬಾರದು ಎಂದು ಬಹುತೇಕ ಎಲ್ಲಾ ವಿರೋಧ ಪಕ್ಷಗಳು ಒಪ್ಪಿಕೊಂಡಿವೆ. ಯಾಕೆಂದರೆ ಇದರಿಂದ ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸಿರುವ ರಾಜ್ಯಗಳಿಗೆ ಅನ್ಯಾಯವಾಗುತ್ತದೆ. ಇದಕ್ಕೆ ಹಲವು ಪರ್ಯಾಯ ಕ್ರಮಗಳನ್ನು ಹಲವು ವರ್ಷಗಳಿಂದ ಸೂಚಿಸುತ್ತಾ ಬರಲಾಗಿದೆ. ಫಲವತ್ತತೆಯ ದರವನ್ನು ಕ್ಷೇತ್ರಗಳ ಸಂಖ್ಯೆಯನ್ನು ನಿರ್ಧರಿಸುವುದಕ್ಕೆ ಪರಿಗಣಿಸಬೇಕು ಅನ್ನುವುದರಿಂದ ಮೊದಲುಗೊಂಡು ರಾಜ್ಯಸಭಾದ ಸುಧಾರಣೆ ಮಾಡಬೇಕು ಅನ್ನುವವರೆಗೆ ಹಲವಾರು ಸಲಹೆಗಳು ಚರ್ಚಿತವಾಗುತ್ತಿದೆ. ಕೆಲವನ್ನು ಇಲ್ಲಿ ಗಮನಿಸೋಣ:

ಸೀಟುಗಳ ಮಿತಿಯನ್ನು ಏರಿಸುವುದು:

ಸರಳವಾದ ಪರಿಹಾರವೆಂದರೆ ಲೋಕಸಭೆಯಲ್ಲಿ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸುವುದು. ಈಗ ಸಂವಿಧಾನ ಅದನ್ನು ೫೫೦ಕ್ಕೆ ಮಿತಿಗೊಳಿಸಿದೆ. ಮಿತಿಯನ್ನು ಹೆಚ್ಚಿಸುವುದರಿಂದ ದೇಶಾದ್ಯಂತ ಎಲ್ಲಾ ಕ್ಷೇತ್ರಗಳ ಜನಸಂಖ್ಯೆ ಸಮಾನವಾಗಿರುವಂತೆ ನೋಡಿಕೊಳ್ಳಬಹುದು. ಅಮೇರಿಕೆಯ ಕಾರ್ನಿಗಿ ಎಂಡೋಮೆಂಟ್ ಫಾರ್ ಇಂಟರ್ ನ್ಯಾಷನಲ್ ಪೀಸ್ ಸಂಸ್ಥೆಯ ಥಿಂಕ್ ಟ್ಯಾಂಕ್‌ನ ಸಂಶೋಧಕರಾದ ಮಿಲನ್ ವೈಷ್ಣವ್ ಹಾಗೂ ಜಮಿ ಹಿಂಟ್ಸನ್ ಅವರು ೨೦೨೬ರಲ್ಲಿ ಭಾರತಲ್ಲಿನ ಜನಸಂಖ್ಯೆಯ ಅಂದಾಜನ್ನು ಆಧರಿಸಿ ೮೪೮ ಕ್ಷೇತ್ರಗಳು ಬೇಕಾಗುತ್ತದೆ ಎಂದು ಲೆಕ್ಕ ಹಾಕಿದ್ದಾರೆ. ಆಗ ಯಾವುದೇ ರಾಜ್ಯದಲ್ಲೂ ಒಟ್ಟಾರೆ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗುವುದಿಲ್ಲ ಎಂದಿದ್ದಾರೆ. ಈ ಕ್ರಮದ ಒಂದು ಅನುಕೂಲವೆಂದರೆ ಪ್ರತಿ ಕ್ಷೇತ್ರದಲ್ಲಿನ ಜನಸಂಖ್ಯೆಯ ಪ್ರಮಾಣ ಕಡಿಮೆಯಿರುತ್ತದೆ. ಹಾಗಾಗಿ ಪ್ರಾತಿನಿಧಿಕ ಪ್ರಜಾಸತ್ತಾತ್ಮಕತೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಉದಾಹರಣೆಗೆ ಈ ಲೆಕ್ಕದ ಪ್ರಕಾರ ೮೪೮ ಸಂಖ್ಯೆಯ ಲೋಕಸಭೆಯಲ್ಲಿ ಉತ್ತರ ಪ್ರದೇಶದಲ್ಲಿ ೧೪೩ ಕ್ಷೇತ್ರಗಳಿರುತ್ತವೆ. ಈಗ ಅಲ್ಲಿ ೮೦ ಕ್ಷೇತ್ರಗಳಿವೆ. ತಮಿಳುನಾಡಿಗೆ ೪೯ ಕ್ಷೇತ್ರಗಳು ಸಿಗುತ್ತದೆ ಈಗ ಅಲ್ಲಿ ೩೯ ಕ್ಷೇತ್ರಗಳಿವೆ.

ಮಾಜಿ ಐಎಎಸ್ ಅಧಿಕಾರಿಗಳಾದ ರಂಗರಾಜನ್ ಆರ್ ಅವರು ದಿ ಇಂಡಿಯನ್ ಫೋರಂ ಎಂಬ ಆನ್‌ಲೈನ್ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯಲ್ಲಿ ಪ್ರತಿಪಾದಿಸುವ ಪ್ರಕಾರ ೨೦೬೦ರ ವೇಳೆಗೆ ಭಾರತದ ಜನಸಂಖ್ಯೆ ಗರಿಷ್ಠ ಮಟ್ಟ ತಲುಪಿ ನಂತರ ಕಡಿಮೆಯಾಗತೊಡಗುತ್ತದೆ. ಅವರ ಅಭಿಪ್ರಾಯದಲ್ಲಿ ಲೋಕಸಭೆಗೆ ಈಗಿರುವಷ್ಟೇ ಕ್ಷೇತ್ರವನ್ನು ಉಳಿಸಿಕೊಳ್ಳಬೇಕು. ರಾಜ್ಯದ ಅಸೆಂಬ್ಲಿಗೆ ಸೀಟುಗಳನ್ನು ಹೆಚ್ಚಿಸಬೇಕು. ಯಾಕೆಂದರೆ ಎಂಎಲ್‌ಎಗಳು ತಮ್ಮ ಕ್ಷೇತ್ರದಲ್ಲಿ ಹೆಚ್ಚು ನಿಕಟವಾಗಿ ಕೆಲಸ ಮಾಡುತ್ತಾರೆ. ರಂಗರಾಜನ್ ಇನ್ನೂ ಮುಂದುವರಿದು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವನ್ನು ಹಾಗೂ ಅನುದಾನವನ್ನು ನೀಡಬೇಕು. ಅದರಿಂದ ಪ್ರಜಾಸತ್ತಾತ್ಮಕತೆ ಬಲಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಸ್ವತಂತ್ರ ಸಂಶೋಧನಾ ಕೇಂದ್ರವಾದ ತಕ್ಷಶಿಲಾ ಸಂಸ್ಥೆಯ ಪ್ರಣಯ್ ಕೋಟಸ್ಥಾನೆ ಹಾಗೂ ಸುಮನ್ ಜೋಷಿಯವರ ಸಲಹೆ ಭಿನ್ನವಾಗಿದೆ. ಕ್ಷೇತ್ರಗಳ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸಿದರೆ ಉತ್ತರಪ್ರದೇಶಕ್ಕೆ ಸಿಗುವ ಹೆಚ್ಚಿನ ಪ್ರಾತಿನಿಧ್ಯದಿಂದಾಗಿ ಅದು ಪಾರ್ಲಿಮೆಂಟಿನ ಮೇಲೆ ವಿಪರೀತ ಪ್ರಭಾವ ಬೀರುವ ಸಾಧ್ಯತೆಯಿದೆ. ಹಾಗಾಗಿ ರಾಜ್ಯಗಳನ್ನು ವಿಂಗಡಿಸುವುದಕ್ಕೆ ಶಿಫಾರಸ್ಸು ಮಾಡುತ್ತಾರೆ. ರಾಜ್ಯಗಳನ್ನು ವಿಂಗಡಿಸುವುದರಿಂದ ಆಡಳಿತದಲ್ಲಿ ಸುಧಾರಣೆಯಾಗುತ್ತದೆ. ವಿಪರೀತ ಜನರಿರುವ ಪ್ರದೇಶದಲ್ಲಿ ಆಳ್ವಿಕೆ ನಡೆಸುವುದಕ್ಕಿಂತ ಸಣ್ಣ ರಾಜ್ಯಗಳಲ್ಲಿ ಹೆಚ್ಚು ಸಮರ್ಥವಾಗಿ ಆಡಳಿತ ನಡೆಸಬಹುದು ಎನ್ನುತ್ತಾರೆ. ಈಗಿರುವ ಮರುವಿಂಗಡಣೆಯ ಕ್ರಮದಲ್ಲಿ ಕ್ಷೇತ್ರವನ್ನು ವಿಂಗಡಿಸಲು ಆ ಕ್ಷೇತ್ರದಲ್ಲಿರುವ ಒಟ್ಟಾರೆ ಜನರನ್ನು ಆಧಾರವಾಗಿಟ್ಟುಕೊಳ್ಳುತ್ತಾರೆ. ಅವರಿಗೆ ಮತದಾನದ ವಯಸ್ಸು ಆಗಿದೆಯಾ, ಅವರು ಮತದಾರರಾಗಿ ದಾಖಲಾಗಿದ್ದಾರಾ, ಇಲ್ಲವಾ ಯಾವುದನ್ನೂ ಗಮನಿಸುವುದಿಲ್ಲ.

ಪ್ರತಿಯೊಂದು ಸೀಟು ಆ ಕ್ಷೇತ್ರದಲ್ಲಿರುವ ಎಲ್ಲಾ ಜನರನ್ನೂ ಪ್ರತಿನಿಧಿಸುತ್ತಿರುತ್ತದೆ. ಹಲವು ರಾಜ್ಯಗಳಲ್ಲಿ ಜನ ಆಯಾ ಕ್ಷೇತ್ರದ ಮೂಲದವರು ಆಗಿಲ್ಲದೇ ಇರಬಹುದು. ಆದರೂ ಅವರನ್ನು ಈಗಿರುವ ಮರುವಿಂಗಡಣೆಯ ಸೂತ್ರ ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಈ ಅಸಮಂಜಸತೆಯನ್ನು ಸರಿಪಡಿಸುವುದಕ್ಕೆ ಕೇವಲ ಮತದಾರರನ್ನು ಆಧರಿಸಿ ಸೀಟುಗಳನ್ನು ನಿರ್ಧರಿಸಬೇಕು ಅನ್ನುವ ವಾದವೊಂದಿದೆ. ದೆಹಲಿಯಲ್ಲಿನ ಕಾನೂನು ನೀತಿಯನ್ನು ಅಧ್ಯಯನ ಮಾಡುವ ವಿಧಿ ಕೇಂದ್ರವೂ "ನಿಜವಾಗಿ ಚುನಾವಣೆಯಲ್ಲಿ ಪ್ರತಿನಿಧಿಗಳನ್ನು ಬಾಧ್ಯರನ್ನಾಗಿ ಮಾಡುವ ಸಾಮರ್ಥ್ಯವಿರುವ ಅಥವಾ ಮಾಡುವವರನ್ನು ಆಧರಿಸಿ ಮತಕ್ಷೇತ್ರದ ಗಾತ್ರವನ್ನು ನಿರ್ಧರಿಸುವುದು ಹೆಚ್ಚು ನ್ಯಾಯಯುತವಾದ" ವ್ಯವಸ್ಥೆಯಾಗುತ್ತದೆ ಎಂದು ಸೂಚಿಸಿದೆ. ಆದರೆ ಈ ವರದಿಯಲ್ಲಿ ಒಂದು ಇಳಿಕೆ ಅನುಪಾತ ಕ್ರಮವನ್ನೂ ಪ್ರಸ್ತಾಪಿಸಲಾಗಿದೆ. ಇದರ ಪ್ರಕಾರ "ಹೆಚ್ಚು ಜನಸಂಖ್ಯೆ ಇರುವ ರಾಜ್ಯಗಳು ಕಡಿಮೆ ಪ್ರಾತಿನಿಧ್ಯಕ್ಕೆ ಒಪ್ಪಿಕೊಂಡು, ಕಡಿಮೆ ಜನಸಂಖ್ಯೆ ಇರುವ ರಾಜ್ಯಗಳಿಗೆ ಹೆಚ್ಚಿನ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಡುತ್ತವೆ" ಉದಾಹರಣೆಗೆ, ಕೆನಡಾ ತನ್ನ ಸಂವಿಧಾನವನ್ನು ೨೦೧೧ರಲ್ಲಿ ತಿದ್ದುಪಡಿ ಮಾಡಿ, ದೊಡ್ಡದಾದ ಹಾಗೂ ವೇಗವಾಗಿ ಬೆಳೆಯುತ್ತಿರುವ ಪ್ರಾಂತ್ಯಗಳು ಹಾಗೂ ಪುಟ್ಟ ಮತ್ತು ನಿಧಾನವಾಗಿ ಅಭಿವೃದ್ಧಿಯಾಗುತ್ತಿರುವ ಪ್ರಾಂತ್ಯಗಳ ನಡುವೆ ಸಮತೋಲನ ಸಾಧಿಸಲು ಇಳಿಕೆ ಅನುಪಾತ ಕ್ರಮವನ್ನು ಜಾರಿಗೆ ತಂದಿತು. ಇದರ ಪ್ರಕಾರ ಹೌಸ್ ಆಫ್ ಕಾಮನ್ಸ್‌ಗೆ ಒಂದು ಆದರ್ಶ ಎನ್ನಬಹುದಾದ ಪ್ರತಿನಿಧಿಗಳ ಸಂಖ್ಯೆಯನ್ನು ನಿರ್ಧರಿಸಲಾಗುತ್ತದೆ. ಮತ್ತು ಪ್ರತಿ ಪ್ಯಾಂತ್ಯಕ್ಕೆ ಅದರ ಗಾತ್ರವನ್ನು ಆಧರಿಸಿ ಸೀಟುಗಳನ್ನು ನಿಗದಿಪಡಿಸಲಾಗುತ್ತದೆ. ಆ ಸಂಖ್ಯೆ ಸೆನೆಟ್ಟಿನಲ್ಲಿ ನಿಗದಿಪಡಿಸಲಾಗಿರುವ ಸಂಖ್ಯೆಗಿಂತ ಕಡಿಮೆ ಇದ್ದರೆ ಅಥವಾ ಹಿಂದೆ ನಿಗದಿಯಾದ ಸಂಖ್ಯೆಗಿಂತ ಕಡಿಮೆ ಇದ್ದರೆ, ಆ ಪ್ರಾಂತ್ಯಗಳಿಗೆ ಹೆಚ್ಚಿನ ಸೀಟನ್ನು ನಿಗದಿ ಮಾಡಿ ಈ ಕೊರತೆಯನ್ನು ಸರಿಪಡಿಸಲಾಗುತ್ತದೆ. ಇದರಿಂದ ಸಣ್ಣ ಪ್ರಾಂತ್ಯಗಳಿಗೆ ಕನಿಷ್ಠ ಪ್ರಾತಿನಿಧ್ಯ ಖಾತರಿಯಾಗುತ್ತದೆ. ಇತರ ಪ್ರಾಂತ್ಯಗಳು ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ಪಡೆಯುತ್ತವೆ" ಎಂದು ವರದಿ ಹೇಳುತ್ತದೆ.

ಎಸ್. ರಾಜಾ ಸೇತುದುರೈ ಮತ್ತು ಆರ್. ಶ್ರೀನಿವಾಸನ್ ಅವರು ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯಲ್ಲಿ ಬರೆದ ಲೇಖನದಲ್ಲಿ, (ಇವರು ಕ್ರಮವಾಗಿ ಹೈದರಾಬಾದ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮತ್ತು ತಮಿಳುನಾಡು ರಾಜ್ಯ ಯೋಜನಾ ಆಯೋಗದ ಸದಸ್ಯ) ಕೆನಡಾ ವ್ಯವಸ್ಥೆಯನ್ನು ಲೋಕಸಭೆಗೆ ಅನ್ವಯಿಸಿದರೆ, ಒಟ್ಟು ಲೋಕಸಭೆಯ ಪ್ರತಿನಿಧಿಗಳ ಸಂಖ್ಯೆ ೫೫೨ ಆಗುತ್ತದೆ ಎಂದು ಲೆಕ್ಕ ಹಾಕಿದ್ದಾರೆ. ಉದಾಹರಣೆಗೆ, ಉತ್ತರಪ್ರದೇಶಕ್ಕೆ ೯ ಹೆಚ್ಚುವರಿ ಸೀಟುಗಳು ಸಿಗುತ್ತವೆ, ಮತ್ತು ಅದರ ಒಟ್ಟು ಸೀಟುಗಳು ೮೯ ಆಗುತ್ತವೆ. ಆದರೆ, ತಮಿಳುನಾಡಿಗೆ ೩೯ ಸೀಟುಗಳೇ ಉಳಿಯುತ್ತವೆ.

ಯಾವುದೇ ಬದಲಾವಣೆಯೂ ಆಗುವುದಿಲ್ಲ.
ಫಲವತ್ತತೆಯ ದರವನ್ನು ಗಣನೆಗೆ ತೆಗೆದುಕೊಂಡರೆ ದುರೈ ಮತ್ತು ಶ್ರೀನಿವಾಸನ್ ಅವರು ಒಟ್ಟು ಫಲವತ್ತತೆ ದರವನ್ನು (ಟೋಟಲ್ ಫರ್ಟಿಲಿಟಿ ರೇಟ್– ಟಿಎಫ್ಆರ್)ಮರುವಿಂಗಡಣೆಯ ಪ್ರಕ್ರಿಯೆಯಲ್ಲಿ ಗಣನೆಗೆ ತೆಗೆದುಕೊಳ್ಳಬೇಕು ಎಂಬ ವಾದವನ್ನು ಮುಂದಿಟ್ಟಿದ್ದಾರೆ.

ಉದಾಹರಣೆಗೆ, ಹದಿನೈದನೇ ಹಣಕಾಸು ಆಯೋಗವು ೨೦೨೧–೨೬ ರಾಜ್ಯಗಳಿಗೆ ಹಣಕಾಸು ಹಂಚಿಕೆಗೆ ಸಂಬಂಧಿಸಿದಂತೆ ಸಲಹೆ ನೀಡುವ ಸಂದರ್ಭದಲ್ಲಿ ಜನಸಂಖ್ಯೆಯ ಸಮಸ್ಯೆಯನ್ನು ಸರಿತೂಗಿಸುವುದಕ್ಕೆ ಒಟ್ಟು ಫಲವತ್ತತೆಯ ದರವನ್ನು ಗಣನೆಗೆ ತೆಗೆದುಕೊಂಡಿತು. ಇದರಿಂದ ಒಟ್ಟಾರೆ ಫಲವತ್ತತೆಯ ದರವನ್ನು ನಿಯಂತ್ರಿಸಿದ ರಾಜ್ಯಗಳಿಗೆ ಅನ್ಯಾಯವಾಗುವುದು ತಪ್ಪುತ್ತದೆ. ದುರೈ ಹಾಗೂ ಶ್ರೀನಿವಾಸನ್ ೨೦೧೧ರ ಜನಗಣತಿಯಿಂದ ಟಿಎಫ್ಆರ್‌ನ್ನು ಗಣನೆಗೆ ತೆಗೆದುಕೊಂಡು ಜನಸಂಖ್ಯೆಯನ್ನು ಲೆಕ್ಕ ಹಾಕಲು ಒಂದು ಸೂತ್ರವನ್ನು ರೂಪಿಸಿದ್ದಾರೆ.

ಅವರ ಲೆಕ್ಕಾಚಾರಗಳ ಪ್ರಕಾರ, ಲೋಕಸಭೆಯ ಸದಸ್ಯರ ಸಂಖ್ಯೆ ೭೫೦ಕ್ಕೆ ಏರುತ್ತದೆ. ಆದರೆ, ಸೀಟುಗಳನ್ನು ಮರುಹಂಚಿಕೆ ಮಾಡುವಾಗ, ಜನಸಂಖ್ಯೆಯ ದರವನ್ನು ನಿಯಂತ್ರಿಸುತ್ತಿರುವ ರಾಜ್ಯಗಳಿಗೆ ಅನ್ಯಾಯವಾಗುವುದು ತಪ್ಪುತ್ತದೆ.
ಉದಾಹರಣೆಗೆ, ಉತ್ತರಪ್ರದೇಶಕ್ಕೆ ೧೦೬ ಸೀಟುಗಳು ಮತ್ತು ಬಿಹಾರಕ್ಕೆ ೫೦ ಸೀಟುಗಳು (ಪ್ರಸ್ತುತ ೪೦) ಸಿಗುತ್ತವೆ. ಆದರೆ, ಕಡಿಮೆ ಜನಸಂಖ್ಯೆಯಿರುವ ತಮಿಳುನಾಡಿನಂತಹ ರಾಜ್ಯಗಳಿಗೆ ೫೫ ಸೀಟುಗಳು ಸಿಗುತ್ತವೆ.

ರಾಜ್ಯಸಭೆಯ ಸುಧಾರಣೆ

ಲೋಕಸಭೆಯ ಸೀಟುಗಳ ಮರುಹಂಚಿಕೆಯಿಂದ ಆಗಬಹುದಾದ ನಕಾರಾತ್ಮಕ ಪರಿಣಾಮಗಳನ್ನು ಸರಿತೂಗಿಸಲು, ರಾಜ್ಯಸಭೆಯಲ್ಲಿ ಸುಧಾರಣೆಗಳನ್ನು ತರಬೇಕಾಗುತ್ತದೆ ಎನ್ನುವ ವಾದವೂ ಇದೆ. ವಿಧಿ ಸೆಂಟರ್ ಪ್ರಕಟಿಸಿರುವ ವರದಿಯ ಪ್ರಕಾರ, ರಾಜ್ಯಸಭೆಯ ಸೀಟುಗಳನ್ನು ಇಳಿಕೆ ಅನುಪಾತ ಕ್ರಮದಲ್ಲಿ ಹಂಚಲಾಗುತ್ತದೆ. ಇದರಿಂದ, ಸಣ್ಣ ರಾಜ್ಯಗಳಿಗೆ ಪ್ರಾತಿನಿಧ್ಯ ಕಡಿಮೆಯಾಗುವುದು ತಪ್ಪುತ್ತದೆ. "ಈ ಸೂತ್ರದ ಪ್ರಕಾರ, ಮೊದಲ ೫ ಮಿಲಿಯನ್‌ವರೆಗೆ ಪ್ರತಿ ಮಿಲಿಯನ್ ಜನರಿಗೆ ಒಂದು ಸೀಟು ನೀಡಲಾಗುತ್ತದೆ. ೫ ಮಿಲಿಯನ್ ನಂತರ ಪ್ರತಿ ಎರಡು ಮಿಲಿಯನ್ ಜನಸಂಖ್ಯೆಗೆ ಒಂದು ಹೆಚ್ಚುವರಿ ಸೀಟು ನೀಡಲಾಗುತ್ತದೆ. ಇದರಿಂದ, ರಾಜ್ಯದ ಜನಸಂಖ್ಯೆ ಹೆಚ್ಚಾದಂತೆ, ಸೀಟು–ಜನಸಂಖ್ಯೆಯ ಅನುಪಾತ ಕಡಿಮೆಯಾಗುತ್ತದೆ," ಎಂದು ವರದಿಯಲ್ಲಿ ಹೇಳಲಾಗಿದೆ.

ಆದರೆ, ಈ ಸೂತ್ರವನ್ನು ನಂತರದ ದಿನಗಳಲ್ಲಿ ತರ್ಕಬದ್ಧವಾಗಿ ಜಾ–ರಿಗೊಳಿಸಿಲ್ಲ. ಪ್ರಸ್ತುತ, ೧೦ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯಗಳು ರಾಜ್ಯಸಭೆಯ ೨೫೦ ಸೀಟುಗಳಲ್ಲಿ ೧೫೬ ಸೀಟುಗಳನ್ನು ಹೊಂದಿವೆ. ಆದರೆ, ೯ ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ರಾಜ್ಯಗಳು ತಲಾ ಒಂದು ಸೀಟನ್ನಷ್ಟೇ ಹೊಂದಿವೆ.
ಐರೋಪ್ಯ ಪಾರ್ಲಿಮೆಂಟ್‌ನ ಉದಾಹರಣೆಯನ್ನು ಬಳಸಿ, ವಿಧಿ ಸೆಂಟರ್ ಪ್ರತಿ ರಾಜ್ಯಕ್ಕೆ ಕನಿಷ್ಠ ಮತ್ತು ಗರಿಷ್ಠ ಸೀಟುಗಳನ್ನು ನಿಗದಿಪಡಿಸಿ, ಸಣ್ಣ ರಾಜ್ಯಗಳ ಹಕ್ಕಿಗೆ ಚ್ಯುತಿಯಾಗದಂತೆ ಸೀಟುಗಳನ್ನು ಹಂಚಿಕೆ ಮಾಡುವ ಸಲಹೆಯನ್ನು ಮುಂದಿಟ್ಟಿದೆ. "ಕನಿಷ್ಠ ೫ ಸೀಟುಗಳು ಮತ್ತು ಗರಿಷ್ಠ ೨೦ ಸೀಟುಗಳನ್ನು ನಿಗದಿಪಡಿಸಿದರೆ, ಅತಿ ಸಣ್ಣ ರಾಜ್ಯಗಳಿಗೂ ಒಟ್ಟಾಗಿ ಅತಿ ದೊಡ್ಡ ರಾಜ್ಯದಷ್ಟೇ ಪ್ರಾತಿನಿಧ್ಯ ಸಾಧ್ಯವಾಗುತ್ತದೆ." ಎಂದು ವರದಿಯಲ್ಲಿ ಹೇಳಲಾಗಿದೆ.

ಆದರೆ, ರಾಜ್ಯಸಭೆಯ ಅಧಿಕಾರಗಳು ಸೀಮಿತವಾಗಿವೆ ಮತ್ತು ಅದ–ರಿಂದಾಗಿ ರಾಜ್ಯಗಳನ್ನು ಸಮರ್ಥವಾಗಿ ಪ್ರತಿನಿಧಿಸಲು ರಾಜ್ಯಸಭೆ ಸಾಮಾನ್ಯವಾಗಿ ವಿಫಲವಾಗುತ್ತದೆ. ರಾಜ್ಯಸಭೆಯ ಸದಸ್ಯರು ತಮ್ಮನ್ನು ಆಯ್ಕೆ ಮಾಡುವ ವಿಧಾನಸಭೆಯ ರಾಜ್ಯದ ನಿವಾಸಿ ಆಗಿರಬೇಕಾಗಿಲ್ಲ. ಹಾಗಾಗಿ, ಬಜೆಟ್‌ನಂತಹ ವಿತ್ತೀಯ ಶಾಸನಗಳಿಗೆ ಸಂಬಂಧಿಸಿದ ಹಣಕಾಸು ಮಸೂದೆಗಳ ಮೇಲೆ ರಾಜ್ಯಸಭೆಗೆ ಯಾವುದೇ ಹಕ್ಕು ಇರುವುದಿಲ್ಲ. ಇದರಿಂದಾಗಿ, ಪ್ರಮುಖ ಹಣಕಾಸು ನೀತಿಗಳನ್ನು ರೂಪಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯಸಭೆಯ ಪಾತ್ರ ತುಂಬಾ ಸೀಮಿತವಾಗಿದೆ. ಇದರಿಂದಾಗಿ ರಾಜ್ಯಗಳ ಹಿತಾಸಕ್ತಿಗಳನ್ನು ಪೂರ್ಣವಾಗಿ ಪ್ರತಿನಿಧಿಸುವ ಸಾಮರ್ಥ್ಯ ಕುಂಠಿತಗೊಳ್ಳುತ್ತದೆ.
ಈ ಸಮಸ್ಯೆಯನ್ನು ಪರಿಹರಿಸಲು, ರಾಜ್ಯಸಭೆಯನ್ನು ಚುನಾಯಿತ ಸಂಸ್ಥೆಯಾಗಿ ಮಾಡಬೇಕು. ಅಮೇರಿಕೆಯ ಸೆನೆಟ್ ಮಾದರಿಯಲ್ಲಿ ಇದನ್ನು ರೂಪಿಸಬೇಕು. ಅಲ್ಲಿ ಪ್ರತಿ ರಾಜ್ಯಕ್ಕೆ ಇಬ್ಬರು ಸದಸ್ಯರಿರುತ್ತಾರೆ. ಇದರಿಂದ, ಲೋಕಸಭೆಯ ಜನಸಂಖ್ಯಾ–ಆಧಾರಿತ ಸೀಟುಗಳನ್ನು ಸರಿತೂಗಿಸಬಹುದು. ರಾಜ್ಯಸಭೆಗೆ ನೀವು ಯಾವುದೇ ಕ್ರಮದಲ್ಲಿ ಸ್ಥಾನಗಳನ್ನು ಹಂಚಿದರೂ ಅಂದರೆ ಜನಸಂಖ್ಯೆಯ ಆಧಾರದ ಮೇಲೆ ಹಂಚಿ ಅಥವಾ ಪ್ರತಿಯೊಂದು ರಾಜ್ಯಕ್ಕೂ ಸಮಾನ ಸ್ಥಾನಗಳನ್ನು ನೀಡಿದ್ದರೂ ಚುನಾಯಿತ ರಾಜ್ಯಸಭೆ ಪರಿಣಾಮಕಾರಿಯಾಗಬೇಕಾದರೆ, ಮೇಲ್ಮನೆಗೆ ಹಣಕಾಸು ಮಸೂದೆಗಳನ್ನು ತಿದ್ದುಪಡಿ ಮಾಡುವ ಅಧಿಕಾರವಿರಬೇಕು ಹಾಗೂ ಚುನಾಯಿತ ಪ್ರತಿನಿಧಿ ಅಲ್ಲಿಯ ನಿವಾಸಿಯಾಗಿರಬೇಕು ಎನ್ನುವ ನಿಯಮವನ್ನು ಪುನಃ ಜಾರಿಗೆ ತರಬೇಕು.

ಇದಕ್ಕೆ ಪರಿಹಾರವಾಗಿ ಅಮೆರಿಕದ ಜಾರ್ಜ್ ಮೇಸನ್ ವಿಶ್ವವಿದ್ಯಾಲಯದ ಸಂಶೋಧನಾ ಸಹೋದ್ಯೋಗಿ ಶ್ರುತಿ ರಾಜಗೋಪಾಲನ್ ಅವರು ರಾಜ್ಯಸಭೆಯನ್ನು "ರೆವೆನ್ಯೂ ಸಭೆ"ಯಾಗಿ ಪರಿವರ್ತಿಸಬೇಕೆಂದು ಸಲಹೆ ನೀಡಿದ್ದಾರೆ. ಕ್ಷೇತ್ರ ವಿಂಗಡಣೆಗೆ ವಿತ್ತಿಯ ಒಕ್ಕೂಟ ವ್ಯವಸ್ಥೆಯನ್ನೇ ಮುಖ್ಯವಾಗಿ ಕೇಂದ್ರ ಮಾಡಿಕೊಳ್ಳಬೇಕು ಎಂದು ರಾಜಗೋಪಾಲನ್ ವಾದಿಸುತ್ತಾರೆ. ವಿಭಿನ್ನ ರಾಜ್ಯಗಳ ಕಂದಾಯ ಸಂಗ್ರಹಣೆ ಹಾಗು ಖರ್ಚು ನಿಭಾಯಿಸುವ ಸಾಮರ್ಥ್ಯದಲ್ಲಿ ವ್ಯತ್ಯಾಸವಿರುತ್ತದೆ. ಕೇಂದ್ರ ಸರ್ಕಾರವು ರಾಜ್ಯಗಳ ಅಗತ್ಯವನ್ನು ಆಧರಿಸಿ ನಿಧಿಯನ್ನು ವಿತರಿಸುತ್ತದೆ. ಕಡಿಮೆ ಜನಸಂಖ್ಯೆ ಇರುವ ಹೆಚ್ಚು ಶ್ರೀಮಂತ ದಕ್ಷಿಣ ಭಾರತದ ರಾಜ್ಯಗಳು ಹೆಚ್ಚು ಜನಸಂಖ್ಯೆಯಿರುವ ಉತ್ತರದ ಬಡ ರಾಜ್ಯಗಳಿಗಿಂತ ರಾಷ್ಟ್ರೀಯ ಆದಾಯದ ನಿಧಿಗೆ ಹೆಚ್ಚು ಕೊಡುಗೆ ನೀಡುತ್ತವೆ. ಆದರೆ ಶ್ರೀಮಂತ ರಾಜ್ಯಗಳಿಗೆ ಕೇಂದ್ರ ನಿಧಿಯಿಂದ ಸಿಗುತ್ತಿರುವ ಪಾಲು ಮಾತ್ರ ಕಡಿಮೆ. ಆದರೆ ಲೋಕಸಭೆಗೆ ಮಾತ್ರ ಹಣಕಾಸು ಮಸೂದೆಗಳನ್ನು ಅಂಗೀಕರಿಸುವ ಅಧಿಕಾರವಿದೆ. "ಇಂದು ವಿತ್ತೀಯವಾಗಿ ಕೇಂದ್ರೀಕೃತವಾದ ವ್ಯವಸ್ಥೆಯಿದೆ. ಲೋಕಸಭೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಕಡಿಮೆ ಸೀಟುಗಳನ್ನು ಹಂಚುವ ಮೂಲಕ ಅವುಗಳಿಗೆ ಅನ್ಯಾಯ ಮಾಡಲಾಗುತ್ತಿದೆ" ಎಂದು ರಾಜಗೋಪಾಲನ್ ವಾದಿಸಿದ್ದಾರೆ.

.

ರಾಜಗೋಪಾಲನ್ ಸೂಚಿಸುವ "ರೆವೆನ್ಯೂ ಸಭಾ" ಕ್ರಮದಲ್ಲಿ, ರಾಜ್ಯಗಳ ಸ್ವಂತ ತಲಾ ಆದಾಯವನ್ನು ಆಧರಿಸಿ ಮೇಲ್ಮನೆಯನ್ನು ಸಂಪೂರ್ಣವಾಗಿ ಮರುರೂಪಿಸಲಾಗುತ್ತದೆ. ಇದನ್ನು ಜನಸಂಖ್ಯೆಯನ್ನು ಆಧರಿಸಿದ ಲೋಕಸಭೆಗೆ ಪೂರಕವಾಗಿ, ರೂಪಿಸಲಾಗುತ್ತದೆ. ಸ್ವಂತ ತಲಾ ಆದಾಯ– ಓಆರ್‌ಪಿಸಿ(ಓನ್ ರೆವೆನ್ಯೂ ಪರ್ ಕ್ಯಾಪಿಟ) ರಾಜ್ಯಗಳ ಸ್ವಂತ ವರಮಾನ ಮೂಲದಿಂದ ಸೃಷ್ಟಿಸಬಹುದಾದ ಆದಾಯವನ್ನು ಸೂಚಿಸುತ್ತದೆ. ಅಂದರೆ ಇದು ಒಟ್ಟು ರಾಜ್ಯದ ಆದಾಯ ಸಂಗ್ರಹಣೆಯ ಸಾಮರ್ಥ್ಯವನ್ನು ಸೂಚಿಸುತ್ತದೆ.

ರೆವೆನ್ಯೂ ಸಭೆಯಲ್ಲಿ, ಪ್ರತಿ ರಾಜ್ಯದ ಓಆರ್‌ಪಿಸಿಯನ್ನು ರಾಷ್ಟ್ರೀಯ ಸರಾಸರಿಯೊಂದಿಗೆ ಹೋಲಿಸಿ ರಾಜ್ಯದ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು ಪ್ರತಿ ರಾಜ್ಯದ ಸ್ಥಾನಗಳನ್ನು ನಿಗದಿಪಡಿಸಲಾಗುತ್ತದೆ. ಉದಾಹರಣೆಗೆ, ಉತ್ತರಪ್ರದೇಶದಲ್ಲಿ ಪ್ರಸ್ತುತ ೩೧ ರಾಜ್ಯಸಭಾ ಸ್ಥಾನಗಳಿವೆ. ಜನಸಂಖ್ಯೆಯ ಆಧಾರದ ಮೇಲೆ ಹಂಚಿಕೆಯಾದರೆ ೪೦ ಕ್ಕೆ ಏರಬಹುದು. ಆದರೆ, ಉತ್ತರಪ್ರದೇಶದ ಓಆರ್‌ಪಿಸಿ ರೂ. ೫,೦೫೦ ಆಗಿದೆ, ಇದು ರಾಷ್ಟ್ರೀಯ ಸರಾಸರಿ ರೂ. ೮,೭೭೧ಕ್ಕಿಂತ ಕಡಿಮೆಯಾಗಿದೆ. ಉತ್ತರಪ್ರದೇಶದ ಓಆರ್‌ಪಿಸಿ ಮತ್ತು ರಾಷ್ಟ್ರೀಯ ಸರಾಸರಿಯ ಅನುಪಾತವನ್ನು ಬಳಸಿದರೆ, ರೆವೆನ್ಯೂ ಸಭೆಯಲ್ಲಿ ಅದರ ಸಂಖ್ಯೆ ಕಡಿಮೆಯಾಗುತ್ತದೆ. ಅಂತೆಯೇ, ತಮಿಳುನಾಡಿನ ಓಆರ್‌ಪಿಸಿ ರೂ. ೧೩,೫೬೫ ಆಗಿದೆ, ಇದು ರಾಷ್ಟ್ರೀಯ ಸರಾಸರಿಗಿಂತ ೧.೫ ಪಟ್ಟು ಹೆಚ್ಚಾಗಿದೆ. ರಾಜ್ಯಕ್ಕೆ ಪ್ರಸ್ತುತ ೧೮ ರಾಜ್ಯಸಭಾ ಸ್ಥಾನಗಳಿವೆ, ಇದು ಜನಸಂಖ್ಯೆಯ ಆಧಾರದ ಮೇಲೆ ೧೩ ಕ್ಕೆ ಇಳಿಯಬಹುದು, ಆದರೆ ರೆವೆನ್ಯೂ ಸಭೆಯಲ್ಲಿ ಇದಕ್ಕೆ ೨೦ ಸ್ಥಾನಗಳು ಸಿಗುತ್ತದೆ. ಅಂದರೆ ರೆವೆನ್ಯೂ ಸಭೆಯ ಪರಿಕಲ್ಪನೆಯಿಂದ ಸ್ವತಂತ್ರವಾಗಿ ಹೆಚ್ಚು ನಿಧಿಯನ್ನು ಸಂಗ್ರಹಿಸುವ ಸಾಮರ್ಥ್ಯವಿರುವ ರಾಜ್ಯಗಳಿಗೆ ಅನುಕೂಲವಾಗುತ್ತದೆ. ಜೊತೆಗೆ ಇದರಿಂದ ಆರ್ಥಿಕವಾಗಿ ದುರ್ಬಲವಾಗಿರುವ ರಾಜ್ಯಗಳಿಗೆ ಹೆಚ್ಚಿನ ಆದಾಯವನ್ನು ಸಂಗ್ರಹಿಸಿಕೊಳ್ಳುವುದಕ್ಕೆ ಬೇಕಾದ ಸಾಮರ್ಥ್ಯವನ್ನು ರೂಢಿಸಿಕೊಳ್ಳುವುದಕ್ಕೆ ಪ್ರೋತ್ಸಾಹವೂ ಸಿಗುತ್ತದೆ. ಇದರಿಂದ "ರಾಜಕೀಯ ಪ್ರೋತ್ಸಾಹ ಹಾಗೂ ಆರ್ಥಿಕ ಬೆಳವಣಿಗೆ ಒಂದಕ್ಕೊಂದು ತೆಕ್ಕೆಹಾಕಿಕೊಂಡು ಪರಸ್ಪರ ಪೂರಕವಾಗಿ ಬೆಳೆಯುತ್ತವೆ."

[ಸಮಾಜಮುಖಿ ಮಾಸಿಕದಲ್ಲಿ ಏಪ್ರಿಲ್ ೨೦೨೫ರಲ್ಲಿ ಪ್ರಕಟವಾಗಿದ್ದ ಅನುವಾದ]

ಜನಪರ ಕಾಳಜಿಯ ತೀಕ್ಷ್ಣ ತಾರ್ಕಿಕ ಮನಸ್ಸಿನ ಅರ್ಥಶಾಸ್ತ್ರಜ್ಞ– ಅಮರ್ತ್ಯ ಸೇನ್

ಟಿ ಎಸ್ ವೇಣುಗೋಪಾಲ್

"ಒಂದು ಮದ್ಯಾಹ್ನ, ಒಬ್ಬ ಯುವಕ ಜೋರಾಗಿ ಕಿರುಚಿಕೊಂಡು ನಮ್ಮ ಮನೆಯ ಮುಂದೆ ಓಡಿಕೊಂಡು ಬಂದ. ಮೈಯೆಲ್ಲಾ ರಕ್ತಮಯವಾಗಿತ್ತು. ಯಾರೋ ಅವನನ್ನು ಚಾಕುವಿನಿಂದ ಇರಿದಿದ್ದರು. ಆತ ಖಾದಿರ್ ಮಿಯಾ ಅಂತ ಒಬ್ಬ ಮುಸ್ಲಿಂ ಕೆಲಸಗಾರ. ಕೆಲಸ ಹುಡುಕಿಕೊಂಡ ಇಲ್ಲಿಗೆ ಬಂದಿದ್ದ. ದಾರಿಯಲ್ಲಿ ಯಾರೋ ಮತಾಂಧರು ಅವನನ್ನು ಇರಿದಿದ್ದರು. ನಮ್ಮ ತಂದೆ ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. 'ಆಗದವರೂ ಇರುವ ಕಡೆ, ಅದೂ ಕೋಮು ಗಲಭೆಯ ಸಮಯದಲ್ಲಿ ಹೋಗಬೇಡ' ಅಂತ ಅವನ ಹೆಂಡತಿ ಹೇಳುತ್ತಲೇ ಇದ್ದಳಂತೆ. ಅವನು ಅದನ್ನು ರಸ್ತೆಯ ಉದ್ದಕ್ಕೂ ಜ್ಞಾಪಿಸಿಕೊಳ್ಳುತ್ತಲೇ ಇದ್ದನಂತೆ. ಆದರೆ ಕುಟುಂಬದ ಹೊಟ್ಟೆಪಾಡಿಗೆ ಕೆಲಸ ಅನಿವಾರ್ಯವಾಗಿತ್ತು. ಅವನ ಈ 'ಆರ್ಥಿಕ ಅಸ್ವಾತಂತ್ರ' ಅವನ ಸಾವಿಗೆ ಕಾರಣವಾಯಿತು. ಅವನು ಆಸ್ಪತ್ರೆಯಲ್ಲಿ ಪ್ರಾಣಬಿಟ್ಟ."

ಈ ಘಟನೆ, ಅಮರ್ತ್ಯಸೇನ್ ಅವರನ್ನು ತುಂಬಾ ಘಾಸಿಗೊಳಿಸಿತು. ನಾವು ಅಸ್ಮಿತೆಗಳನ್ನು ಸಂಕುಚಿತವಾಗಿ ಅರ್ಥಮಾಡಿಕೊಂಡಿರುತ್ತೇವೆ. ನಾವೆಲ್ಲಾ ಮನಸ್ಸುಗಳನ್ನು ಒಡೆಯುವ ಮತೀಯ ರಾಜಕೀಯದಲ್ಲಿ ಹೂತು ಹೋಗಿರುತ್ತೇವೆ. ಈ ಅಪಾಯ ಉಂಟುಮಾಡುವ ಅನಾಹುತಗಳು ಅವರನ್ನು ತೀವ್ರವಾಗಿ ಅಲ್ಲಾಡಿಸಿತ್ತು. ಖಾದಿರ್ ಮಿಯಾ ಅವರ ದಾರಿದ್ರ್ಯ ಅವರ ಆರ್ಥಿಕ ಅಸ್ವಾತಂತ್ರಕ್ಕೆ ಕಾರಣವಾಗಿತ್ತು. ಆರ್ಥಿಕ ಅಸ್ವಾತಂತ್ರ್ಯ ಉಳಿದೆಲ್ಲಾ ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸಿಬಿಡುತ್ತದೆ. ಮನುಷ್ಯ ತೀರಾ ಅಸಹಾಯಕ ಬಲಿಪಶು ಆಗಿಬಿಡುತ್ತಾನೆ. ಖಾದಿರ್ ಮಿಯಾಗೆ ಬೇರೆ ದಾರಿ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ತನ್ನನ್ನು ದ್ವೇಷಿಸುವವರೇ ತುಂಬಿರುವ ಪ್ರದೇಶಕ್ಕೆ ಬರುವ ಅವಶ್ಯಕತೆ ಅವನಿಗಿರುತ್ತಿರಲಿಲ್ಲ.
ಅಮರ್ತ್ಯ ಸೇನ್ ಅವರ ಇಡೀ ಚಿಂತನೆಯ ಹಿಂದೆ ಕೆಲಸ ಮಾಡುತ್ತಿರುವುದು ಈ ಮನಸ್ಸು. ಬದುಕನ್ನು ನೋಡುವ ಇಂತಹ ಕ್ರಮವನ್ನು ಪೋಷಿಸಿ, ಅವರಲ್ಲಿ ಬೆಳೆಸಿದ್ದು ರವೀಂದ್ರರ ಶಾಂತಿನಿಕೇತನ. ಅಲ್ಲಿ ಕಲಿಯುವುದಕ್ಕೆ ತೀರಾ ಮುಕ್ತ ವಾತಾವರಣವಿತ್ತು. ರ್‍ಯಾಂಕ್, ಗ್ರೇಡ್ ಇವುಗಳ ಗೊಡವೆ ಅಲ್ಲಿರಲಿಲ್ಲ. ಭಾರತೀಯ ಸಾಂಸ್ಕೃತಿಕ, ವೈಜ್ಞಾನಿಕ ಪರಂಪರೆಯೊಂದಿಗೆ ಜಗತ್ತಿನ ಇತರ ಎಲ್ಲಾ ಸಂಸ್ಕೃತಿಗಳ ಪ್ರಭಾವಕ್ಕೂ ಅಲ್ಲಿ ಮಕ್ಕಳು ತೆರೆದುಕೊಳ್ಳುತ್ತಿದ್ದರು. ಬೌದ್ಧಿಕ ಕುತೂಹಲವಿರುವ ಹಲವಾರು ಸಹಪಾಠಿಗಳಿದ್ದರು. ಸ್ನೇಹಪರವಾದ ಅಧ್ಯಾಪಕರಿದ್ದರು. ಪಠ್ಯಕ್ರಮಕ್ಕೆ ಸಂಬಂಧಪಡದ ವಿಷಯಗಳ ಬಗ್ಗೆಯೂ ಅವರನ್ನು ಪ್ರಶ್ನೆ ಕೇಳಬಹುದಿತ್ತು. ಆ ಕಾಲದ ಎಷ್ಟೋ ಘಟನೆಗಳೊಡನೆ ಮಕ್ಕಳು ಮುಖಾಮುಖಿ ಆಗುತ್ತಿದ್ದರು. ಬಂಗಾಲದ ಕ್ಷಾಮದ ಮೊದಲ ಅನುಭವ ಸೇನರಿಗೆ ಆಗಿದ್ದೂ ಅಲ್ಲೆ. ಅದು ಮುಂದೆ ಅವರ ಬಹುದೊಡ್ಡ ಅಧ್ಯಯನಕ್ಕೂ ಕಾರಣವಾಯಿತು.


ಶಾಂತಿನಿಕೇತನದ ನಂತರ ಇವರು ಪ್ರಸಿಡೆನ್ಸಿ ಕಾಲೇಜು ಸೇರಿದರು. ಅಲ್ಲಿಗೆ ಬರುವ ವೇಳೆಗೆ ಅವರಲ್ಲಿ ಸಾಂಸ್ಕೃತಿಕ ಅಸ್ಮಿತೆಯ ಬಗ್ಗೆ ಒಂದು ಸ್ಪಷ್ಟ ನಿಲುವು ಬೆಳೆದಿತ್ತು. ಬಹುತ್ವ ಅನಿವಾರ್ಯ ಅನ್ನುವುದು ಅವರಿಗೆ ಸ್ಪಷ್ಟವಾಗಿತ್ತು. ಹಾಗೆಯೇ ಸಮಾನತೆ ಅವರಿಗೆ ತೀರಾ ಕಾಳಜಿಯ

ಅಮರ್ತ್ಯ ಸೇನ್– ಬದುಕು ಹಾಗು ಆಲೋಚನೆಗಳು

ಅಮರ್ತ್ಯ ಸೇನ್ ನಮ್ಮ ನಡುವಿನ ಅಪರೂಪದ ಅರ್ಥಶಾಸ್ತ್ರಜ್ಞ, ತತ್ತ್ವಶಾಸ್ತ್ರಜ್ಞ, ಚಿಂತಕ. ಅವರ ಅಧ್ಯಯನದ ಹರಿವು ತೀರಾ ವಿಶಾಲವಾದದ್ದು. ಅವರ ಬಗ್ಗೆ ಕನ್ನಡದಲ್ಲಿ ಬರಹಗಳು ತುಂಬಾ ಕಡಿಮೆ. ಅವರ ಬದುಕು ಚಿಂತನೆಗಳನ್ನು ಪರಿಚಯ ಮಾಡಿಕೊಳ್ಳುವ ದೃಷ್ಟಿಯಿಂದ ಈ ಸರಣಿಯನ್ನು ಪ್ರಾರಂಭಿಸಲಾಗಿದೆ. ಗಮನಿಸಿ.

ವಿಷಯವಾಗಿತ್ತು. ಪ್ರೆಸಿಡೆನ್ಸಿ ಕಾಲೇಜಿನ ಶೈಕ್ಷಣಿಕ ಉತ್ಕೃಷ್ಟತೆ ಇವರನ್ನು ಆಕರ್ಷಿಸಿತ್ತು. ಅಲ್ಲಿ ಬಾಬುತೋಷ್ ದತ್ತ, ತಪಸ್ ಮಜುಂದಾರ್ ಇಂತಹ ಘಟಾನುಘಟಿಗಳೆಲ್ಲಾ ಅಧ್ಯಾಪಕರಾಗಿದ್ದರು. ಜೊತೆಗೆ ಸುಕುಮಾಯ್ ಚಕ್ರವರ್ತಿ, ಮೃಣಾಲ್ ದತ್ತ ಚೌಧುರಿಯಂತಹ ಸಹಪಾಠಿಗಳಿದ್ದರು. ಬೇರೆ ವಿಭಾಗಗಳೊಂದಿಗೂ ಅವರಿಗೆ ಒಳ್ಳೆಯ ಒಡನಾಟ ಸಾಧ್ಯವಾಗಿತ್ತು. ಇತಿಹಾಸ ವಿಭಾಗದಲ್ಲಿ ಬರುನ್ ಡೆ, ಪಾರ್ಥಗುಪ್ತ ಹಾಗೂ ಬಿನಾಯ್ ಚೌಧರಿ ಮುಂತಾದವರು ಇವರ ಆತ್ಮೀಯ ಸ್ನೇಹಿತರಾಗಿದ್ದರು. ಹಾಗಾಗಿ ಇವರ ಬೌದ್ಧಿಕ ಹರವು ವಿಸ್ತಾರಗೊಂಡಿತ್ತು.

ಪ್ರೆಸಿಡೆನ್ಸಿ ಕಾಲೇಜು ಆಗ ರಾಜಕೀಯವಾಗಿ ತೀರಾ ಸಕ್ರಿಯವಾಗಿದ್ದ ಕಾಲ. ಆದರೆ ಸೇನರಿಗೆ ಯಾವುದೇ ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಳ್ಳುವ ಉತ್ಸಾಹ ಇರಲಿಲ್ಲ. ಆದರೆ ಎಡಪಂಥೀಯರ ಉನ್ನತ ನೈತಿಕತೆ ಹಾಗೂ ಅವರ ಸಾಮಾಜಿಕ ಅನುಕಂಪೆ, ರಾಜಕೀಯ ಅರ್ಪಣಾ ಮನೋಭಾವದ ಬದ್ಧತೆ ಹಾಗೂ ಸಮಾನತೆ ಕುರಿತ ಕಾಳಜಿಯ ಬಗ್ಗೆ ಸೇನ್ ಅವರಿಗೆ ಅಪಾರವಾದ ಗೌರವವಿತ್ತು. ಜೊತೆಗೆ ಅವರ ಬಗ್ಗೆ ತಕರಾರೂ ಇತ್ತು. ಎಡಪಂಥೀಯರಿಗೆ ಪ್ರಜಾಸತ್ತಾತ್ಮಕ ಸಂಸ್ಥೆಗಳ ಬಗ್ಗೆ ನಂಬಿಕೆ ಇರಲಿಲ್ಲ. ಅವುಗಳನ್ನು ಬೂರ್ಜ್ವಾ ಡೆಮಾಕ್ರೆಸಿ ಎಂದು ತಳ್ಳಿಹಾಕುತ್ತಿದ್ದರು. ಅವುಗಳ ಕೊರತೆಯ ಬಗ್ಗೆ ಮಾತ್ರ ಅವರು ಗಟ್ಟಿದನಿಯಲ್ಲಿ ಮಾತನಾಡುತ್ತಾರೆ ಅನ್ನುವುದೇ ಅವರ ಒಂದು ತಕರಾರು. ಎಡಪಂಥೀಯರು ಪ್ರಜಾಸತ್ತೆಯ ಬಗ್ಗೆ ಮಾಡುತ್ತಿದ್ದ ಕೆಲವು ಟೀಕೆಗಳನ್ನು ಸೇನ್ ಕೂಡ ಒಪ್ಪಿಕೊಳ್ಳುತ್ತಿದ್ದರು. ಉದಾಹರಣೆಗೆ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಹಣದ ಬಲವನ್ನು ಕುರಿತಂತೆ ಎಡಪಂಥೀಯರೊಂದಿಗೆ ಅವರಿಗೆ ಸಹಮತವಿತ್ತು. ಆದರೆ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಅನುಕೂಲಗಳೂ ಇವೆ. ಅವುಗಳನ್ನೂ ಗುರುತಿಸಬೇಕೆನ್ನುವುದು ಇವರ ವಾದವಾಗಿತ್ತು. ಜೊತೆಗೆ ಎಡಪಂಥೀಯರು ಸೂಚಿಸುವ ಪರ್ಯಾಯ ವ್ಯವಸ್ಥೆಯಲ್ಲಿರುವ ಮಿತಿಗಳನ್ನು ಅವರು ಚರ್ಚಿಸುವುದಿಲ್ಲ ಅನ್ನುವ ಬೇಸರವೂ ಇತ್ತು. ಉದಾಹರಣೆಗೆ ಒಂದು ವ್ಯವಸ್ಥೆಯಲ್ಲಿ ವಿರೋಧಕ್ಕೆ ಅವಕಾಶವೇ ಇಲ್ಲದ ಹೋದರೆ ಅಲ್ಲಿ ರಾಜಕೀಯ ದುರ್ಬಳಕೆಯ ಸಾಧ್ಯತೆಯಿರುತ್ತದೆ. ಈ ಬಗ್ಗೆ ಎಡಪಂಥೀಯರು ಗಂಭೀರವಾಗಿ ಯೋಚಿಸಬೇಕು ಅನ್ನುತ್ತಿದ್ದರು. ಹಾಗೆಯೇ



ಫೋಟೊ ಸೌಜನ್ಯ: ಇಂಡಿಯನ್ ಎಕ್ಸ್‌ಪ್ರೆಸ್

ರಾಜಕೀಯ ಸಹಿಷ್ಣುತೆಯನ್ನು ಎಡಪಂಥೀಯರು ಕೇವಲ ಪಾಶ್ಚಾತ್ಯ ಉದಾರವಾದವನ್ನಾಗಿ ನೋಡುವುದು ಕೂಡ ಅವರಿಗೆ ಒಂದು ಗಂಭೀರ ಮಿತಿಯಾಗಿಯೇ ತೋರಿತ್ತು. ಪಾಶ್ಚಾತ್ಯ ಉದಾರವಾದವನ್ನು ತಿರಸ್ಕರಿಸುವ ಭರದಲ್ಲಿ ನಾವು ವಿವಿಧ ಸಂಸ್ಕೃತಿಗಳಲ್ಲಿ ಬೆಳೆದು ಬಂದಿರುವ ಸಹಿಷ್ಣುತೆ ಸಾಂಪ್ರದಾಯಿಕ ಮೌಲ್ಯಗಳನ್ನು ಅಲ್ಲಗೆಳೆಯುತ್ತಿರುತ್ತೇವೆ ಅನ್ನುತ್ತಿದ್ದರು. ಉದಾಹರಣೆಗೆ ಅಶೋಕ ಮೂರನೇ ಶತಮಾನದಲ್ಲೇ ಈ ಬಗ್ಗೆ ತೀರಾ ಸ್ಪಷ್ಟವಾಗಿ ಹೇಳಿದ್ದ- "ಯಾವನು ತನ್ನ ಧರ್ಮದ ಘನತೆಯನ್ನು ಹೆಚ್ಚಿಸುವ ಉದ್ದೇಶದಿಂದ ಇನ್ನೊಂದು ಮತವನ್ನು ಹೀಗಳೆಯುತ್ತಾನೋ ಅವನು ವಾಸ್ತವದಲ್ಲಿ ತನ್ನ ಮತವನ್ನು ಗಂಭೀರವಾಗಿ ಘಾಸಿಗೊಳಿಸುತ್ತಿರುತ್ತಾನೆ".

ಸೇನ್ ಅವರು ಜೀವನವಿಡೀ ತೊಡಗಿಸಿಕೊಂಡಿದ್ದ ಶೈಕ್ಷಣಿಕ ವಿಷಯಗಳಾದ ಯೋಗಕ್ಷೇಮ ಅರ್ಥಶಾಸ್ತ್ರ, ಆರ್ಥಿಕ ಅಸಮಾನತೆ ಹಾಗೂ ಬಡತನ, ಸಾಮಾಜಿಕ ಆಯ್ಕೆ ಇವೆಲ್ಲಾ ಕಲ್ಕತ್ತಾ ದಿನಗಳಲ್ಲೇ ಇವರನ್ನು ಆವರಿಸಿಕೊಂಡಿತ್ತು. ಕೆನೆತ್ ಆರೋ ಅವರ ಕೃತಿ "ಸಾಮಾಜಿಕ ಆಯ್ಕೆ ಹಾಗೂ ವೈಯಕ್ತಿಕ ಮೌಲ್ಯಗಳು ಇವರನ್ನು ಬಲವಾಗಿ ಪ್ರಭಾವಿಸಿತ್ತು. ಸಹಪಾಠಿ ಸುಕುಮಾಯ್ ಚಕ್ರವರ್ತಿ ಪುಸ್ತಕದ ಅಂಗಡಿಯಿಂದ ಕೆಲ ಗಂಟೆಗಳಿಗೆ ಎರವಲು ತಂದಿದ್ದನ್ನು ಕಾಫಿ ಕ್ಲಬ್‌ನಲ್ಲಿ ಕೂತು ಓದಿ ಮುಗಿಸಿದ್ದರು. ಸುಕುಮಾಯ್ ಜೊತೆಗೆ ಈ ಬಗ್ಗೆ ಗಂಭಿರವಾಗಿ ಚರ್ಚಿಸಿದ್ದನ್ನು ಸೇನ್ ಆಗಾಗ ನೆನೆಸಿಕೊಳ್ಳುತ್ತಿದ್ದರು.

ಇವರು ಕೇಂಬ್ರಿಡ್ಜಿನ ಟ್ರಿನಿಟಿ ಕಾಲೇಜು ಸೇರುವ ವೇಳೆಗಾಗಲೇ ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಬಿಎ ಮುಗಿಸಿಯಾಗಿತ್ತು. ಆದರೂ ಮತ್ತೆ ಕೇಂಬ್ರಿಡ್ಜಿನಲ್ಲಿ ಬಿಎ ಮಾಡಬೇಕಾಗಿ ಬಂತು. ಕಲ್ಕತ್ತೆಗೆ ಹೋಲಿಸಿದರೆ ಅಲ್ಲಿ ಅರ್ಥಶಾಸ್ತ್ರ ಅಷ್ಟೊಂದು ಗಣಿತೀಯವಾಗಿರಲಿಲ್ಲ. ಜೊತೆಗೆ ಇವರನ್ನು ಆವರಿಸಿಕೊಂಡಿದ್ದ ಬಹುತೇಕ ವಿಷಯಗಳ ಬಗ್ಗೆ ಅಲ್ಲಿ ಯಾರಿಗೂ ಆಸಕ್ತಿಯೂ ಇರಲಿಲ್ಲ. ಕೇಂಬ್ರಿಡ್ಜಿನಲ್ಲಿ ಆಗ ಕೇನ್ಸ್ ಅರ್ಥಶಾಸ್ತ್ರದ ಗುಣಾವಗುಣಗಳ ಬಗ್ಗೆ ತೀವ್ರ ಚರ್ಚೆಯಾಗುತ್ತಿತ್ತು. ಪರ ವಿರೋಧದ ಎರಡು ಬಣಗಳೇ ಆಗಿಬಿಟ್ಟಿತ್ತು. ರಿಚರ್ಡ್ ಕ್ಷನ್, ನಿಕೊಲಸ್ ಕಾಲ್ಡರ್, ಜೋನ್ ರಾಬಿನ್ಸನ್ ಮೊದಲಾದ ಕೇನ್ಸ್ ಪರವಾದ ಅರ್ಥಶಾಸ್ತ್ರಜ್ಞರು ಒಂದು ಕಡೆ. ಹಾಗೆಯೇ ಕೇನ್ಸನ್ನು ಅನುಮಾನದಿಂದ ನೋಡುತ್ತಿದ್ದ ನವ ಕ್ಲಾಸಿಕಲ್ ಅರ್ಥಶಾಸ್ತ್ರಜ್ಞರಾದ ಡೆನ್ನಿಸ್ ರಾಬರ್ಟಸನ್, ಹ್ಯಾರಿ ಜಾನಸನ್, ಮೈಕೆಲ್ ಫಾರೆಲ್ ಮೊದಲಾದವರು ಇನ್ನೊಂದು ಕಡೆ. ಎರಡೂ ಗುಂಪಿಗೆ ಸೇರದ ಕೆಲವು ಅತ್ಯುತ್ತಮ ಅಧ್ಯಾಪಕರೂ ಇದ್ದರು. ಸೇನ್ ಅವರಿಗೆ ಇವರೆಲ್ಲರ ಜೊತೆ ಒಳ್ಳೆಯ ಸಂಬಂಧವಿತ್ತು.

ಟ್ರಿನಿಟಿ ಕಾಲೇಜಿನಲ್ಲಿ ಅರ್ಥಶಾಸ್ತ್ರಜ್ಞರ ನಡುವೆ ತೀವ್ರ ಭಿನ್ನಾಭಿಪ್ರಾಯ ಇತ್ತು. ಆದರೂ ಅವರಿಗೆ ಒಟ್ಟಿಗೆ ಕೆಲಸಮಾಡುವುದಕ್ಕೆ, ಚರ್ಚಿಸುವುದಕ್ಕೆ ಸಾಧ್ಯವಾಗಿತ್ತು. ಸೇನ್ ಅಲ್ಲಿಗೆ ಸೇರಿದ್ದೂ ಕೂಡ ಇದೇ ಕಾರಣಕ್ಕೆ. ಅಲ್ಲಿ ವಿಭಿನ್ನ ರಾಜಕೀಯ ನಿಲುವಿನ ಮೂವರು ಮಹಾನ್ ಮೇಧಾವಿಗಳು ಇದ್ದರು. ಮಾರ್ಕ್ಸವಾದಿ ನಿಲುವಿನ ಮಾರಿಸ್ ಡಾಬ್. ಸಂಪ್ರದಾಯವಾದಿ ನಿಯೋ ಕ್ಲಾಸಿಕಲ್ ಪಂಥಕ್ಕೆ ಸೇರಿದ್ದ ಡೆನಿಸ್ ರಾಬರ್ಟ್‌ಸನ್ ಹಾಗೂ ಪಿಯೆರೋ ಸ್ರಾಫಾ ಅಲ್ಲಿ ಒಟ್ಟಿಗೆ ಅತ್ಮೀಯವಾಗಿ ಕೆಲಸ ಮಾಡುತ್ತಿದ್ದರು. ಬೇರೆ ಕಡೆ ಅರ್ಥಶಾಸ್ತ್ರಜ್ಞರ ನಡುವೆ ಸಮರವೇ ನಡೆಯುತ್ತಿದ್ದಾಗ, ಇದು ನಿಜವಾಗಿ ಆಶ್ಚರ್ಯಕರವಾದ ವಿಷಯ. ಇವರಲ್ಲಿ ಪರಸ್ಪರ ಗೌರವ ಮತ್ತು ಸಹನೆ ಇದ್ದವು. ಇದಕ್ಕೆ ಸ್ರಾಫಾ ಅವರು ಸೇನ್ ಅವರೊಂದಿಗೆ ಹಂಚಿಕೊಂಡ ಒಂದು ಘಟನೆ ಒಳ್ಳೆಯ ಉದಾಹರಣೆ. ಡಾಬ್ ಅವರನ್ನು ಟ್ರಿನಿಟಿ ಕಾಲೇಜಿಗೆ ಉದ್ಯೋಗಕ್ಕೆ ರಾಬರ್ಟ್‌ಸನ್ ಅಹ್ವಾನಿಸುತ್ತಾರೆ. ಡಾಬ್ ಖುಷಿಯಾಗೇ ಒಪ್ಪಿಕೊಂಡು ಬಿಡುತ್ತಾರೆ. ನಂತರ ಡಾಬ್ ಅವರಿಗೆ ತಾನು ರಾಬರ್ಟ್ಸನ್ನಿಗೆ ತನ್ನ ಬಗ್ಗೆ ಪೂರ್ಣ ಮಾಹಿತಿ ನೀಡಿಲ್ಲ ಎಂಬ ಗಿಲ್ಟ್ ಕಾಡುತ್ತದೆ. ಡಾಬ್ ತಕ್ಷಣ ಕ್ಷಮೆ ಕೋರಿ ಪತ್ರ ಬರೆದರು, "ನಾನು ಕಮ್ಯುನಿಸ್ಟ್ ಪಕ್ಷದ ಸದಸ್ಯ ಎಂಬುದನ್ನು ತಮ್ಮ ಗಮನಕ್ಕೆ ತಂದಿಲ್ಲ. ಈ ಕಾರಣದಿಂದಾಗಿ ನಾನು ಟ್ರಿನಿಟಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಗೆ ಯೋಗ್ಯನಲ್ಲ ಎಂದು ನಿಮಗೆ ಅನಿಸಿದರೆ, ಅದು ನನಗೆ ಅರ್ಥ ಆಗುತ್ತದೆ." ಅದಕ್ಕೆ ರಾಬರ್ಟ್‌ಸನ್ "ನೀವು ಚಾಪೆಲ್ ಒಡೆಯುತ್ತೇನೆ ಅಂತ ೧೫ ದಿನಗಳ ನೋಟಿಸ್ ಕೊಡುವ ದಿನ ಬರುವವರೆಗೆ ಯಾವುದೇ ತೊಂದರೆಯೂ ಇಲ್ಲ." ಎಂದು ಉತ್ತರಿಸುತ್ತಾರೆ.

ಹೀಗೆ ಸೇನ್ ಬಾಲ್ಯದಿಂದ ಬೆಳೆದುಕೊಂಡು ಬಂದಿದ್ದ ಒಂದು ಪ್ರಜಾಸತ್ತಾತ್ಮಕ, ಪರಸ್ಪರ ಸಹನಶೀಲತೆಯ ವಾತಾವರಣ ಟ್ರಿನಿಟಿ ಕಾಲೇಜಿನಲ್ಲೂ ಮುಂದುವರಿದಿತ್ತು. ಆದರೆ ಅವರಿಗೆ ತೀರಾ ಪ್ರಿಯ ವಿಷಯವಾಗಿದ್ದ ಯೋಗಕ್ಷೇಮ ಅರ್ಥಶಾಸ್ತ್ರದಲ್ಲಿ ಅಲ್ಲಿ ಯಾರಿಗೂ ಆಸಕ್ತಿ ಇರಲಿಲ್ಲ. ಹಾಗಾಗಿ ಸಂಶೋಧನಾ ಪ್ರಬಂಧಕ್ಕೆ ಅವರು ಬೇರೆಯ ವಿಷಯವನ್ನು ಆರಿಸಿಕೊಳ್ಳಬೇಕಾಯಿತು. ಇವರ ಮಾರ್ಗದರ್ಶಿ ಜೋನ್ ರಾಬಿನ್‌ಸನ್ ಅವರಿಗೆ ಪ್ರಿಯವಾಗಿದ್ದ "ವಿವಿಧ ಕಾರ್ಯವಿಧಾನಗಳ ನಡುವಿನ ಆಯ್ಕೆ" ಎಂಬ ವಿಷಯವನ್ನು ಸಂಶೋಧನೆಗೆ ಆರಿಸಿಕೊಂಡರು. ಅದರಲ್ಲೂ ವಿಶೇಷವಾಗಿ ಉತ್ಪಾದನೆಗೆ ಸಂಬಂಧಿಸಿದಂತೆ ಸಾಮಾಜಿಕ ದೃಷ್ಟಿಕೋನದಿಂದ ಸೂಕ್ತವಾದ ಕಾರ್ಯವಿಧಾನವನ್ನು ಹೇಗೆ ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ಇವರು ಸಂಶೋಧನೆಯ ವಿಷಯವನ್ನಾಗಿ ಆರಿಸಿಕೊಂಡರು. ಅದಕ್ಕಾಗಿ ಅವರು ತೀವ್ರ ನಿರುದ್ಯೋಗವಿರುವ ಹಾಗೂ ಕಡಿಮೆ ಕೂಲಿ ಇರುವ ಆರ್ಥಿಕತೆಯನ್ನು ಆರಿಸಿಕೊಂಡಿದ್ದರು.

ಒಂದೇ ವರ್ಷದಲ್ಲಿ ಸಂಶೋಧನೆ ಮುಗಿಯುವ ಹಂತಕ್ಕೆ ಬಂದಿತ್ತು. ಆದರೆ ಸಂಶೋಧನೆಯ ಅವಧಿ ಮೂರು ವರ್ಷಗಳು. ಅದಕ್ಕೆ ಮೊದಲು ಪ್ರಬಂಧವನ್ನು ಮಂಡಿಸುವುದಕ್ಕೆ ಅವಕಾಶವಿರಲಿಲ್ಲ. ಉಳಿದ ಎರಡು ವರ್ಷ ಭಾರತದಲ್ಲಿ ಕಲಿಯೋಣ ಅನ್ನಿಸಿ ಅವಕಾಶಕ್ಕೆ ಮನವಿ ಮಾಡಿಕೊಂಡರು. ಅವಕಾಶ ಸಿಕ್ಕಿತು. ಆದರೆ ಭಾರತದಲ್ಲಿ ಮಾರ್ಗದರ್ಶಿಯೊಬ್ಬರು ಇರಲೇಬೇಕೆಂಬ ಶರತ್ತನ್ನು ವಿಧಿಸಿದರು. ಆರ್ಥಿಕ ವಿಧಾನಶಾಸ್ತ್ರದಲ್ಲಿ ಅಪಾರ ಅಧ್ಯಯನ ಮಾಡಿದ್ದ ಎ ಕೆ ದಾಸ್‌ಗುಪ್ತ ಅದಕ್ಕೆ ಒಪ್ಪಿಕೊಂಡರು. ಸೇನ್ ಭಾರತಕ್ಕೆ ಮರಳಿದರು. ಜಾಧವಪುರ್ ವಿಶ್ವವಿದ್ಯಾನಿಲಯದಲ್ಲಿ ಆಗಷ್ಟೇ ಅರ್ಥಶಾಸ್ತ್ರ ಪೀಠ ಪ್ರಾರಂಭವಾಗಿತ್ತು. ಅದಕ್ಕೆ ಸೇನ್ ಅವರನ್ನು ಪ್ರೊಫೆಸರ್ ಆಗಿ ಆಯ್ಕೆ ಮಾಡಲಾಯಿತು. ಇವರಿಗೆ ಆಗ ಇನ್ನೂ ೨೩ರ ಹರೆಯ. ಪ್ರತಿಭಟನೆಯ ಮಹಾಪೂರವೇ ಹರಿದು ಬಂದಿತು. ತೊಟ್ಟಿಲಿನಿಂದ "ಹೊಸ ಪ್ರೊಫೆಸರ್" ಅವರನ್ನು ಅಪಹರಿಸಿಕೊಂಡು ಬರಲಾಗಿದೆ, ಇತ್ಯಾದಿ ಬರಹಗಳು ಗೋಡೆಗಳ ಮೇಲೆಲ್ಲಾ ಕಾಣಿಸಿಕೊಂಡವು. ಅಲ್ಲಿ ಇವರ ಜೊತೆ ಹಲವು ಹೆಸರಾಂತ ಚಿಂತಕರು ಕೆಲಸ ಮಾಡುತ್ತಿದ್ದರು. ಇವರಿಗೆ ಅದೊಂದು ಒಳ್ಳೆಯ ಅವಕಾಶವಾಯಿತು. ಕೇಂಬ್ರಿಡ್ಜ್‌ನಲ್ಲಿ ಕೈಬಿಟ್ಟಿದ್ದ ತಮ್ಮ ಆತ್ಮೀಯ ವಿಷಯಗಳ ಬಗ್ಗೆ ಮತ್ತೆ ಅಧ್ಯಯನ ಆರಂಭಿಸಿದರು. ಮೂರು ವರ್ಷ ಕಳೆಯುವ ವೇಳೆಗೆ ಇವರ ಸಂಶೋಧನಾ ಪ್ರಬಂಧವೂ "ಮಾಗುತ್ತಾ" ಹೋಯಿತು. ಅದನ್ನು ಟ್ರಿನಿಟಿ ಕಾಲೇಜಿನ ಸ್ಪರ್ಧಾತ್ಮಕ ಫೆಲೋಷಿಪ್ ಬಹುಮಾನಕ್ಕೂ ಸಲ್ಲಿಸಿದರು. ಫೆಲೋಷಿಪ್ ಕೂಡ ದೊರಕಿತು. ಫೆಲೋಷಿಪ್ಪಿನ ಅವಧಿ ನಾಲ್ಕು ವರ್ಷ. ಆ ಅವಧಿಯಲ್ಲಿ ಏನು ಬೇಕಾದರೂ ಮಾಡುವ ಸ್ವಾತಂತ್ರ್ಯ ಅವರಿಗಿತ್ತು. ಸೇನ್ ತತ್ತ್ವಶಾಸ್ತ್ರವನ್ನು ಅಧ್ಯಯನ ಮಾಡಲು ನಿರ್ಧರಿಸಿದರು. ಮೊದಲಿನಿಂದಲೂ ಅವರಿಗೆ ತರ್ಕ ಹಾಗೂ ಜ್ಞಾನಶಾಸ್ತ್ರದ ಬಗ್ಗೆ ವಿಶೇಷ ಒಲವಿತ್ತು. ನಂತರ ನೈತಿಕ ಹಾಗೂ ರಾಜಕೀಯ ತತ್ವಶಾಸ್ತ್ರದ ಕಡೆಗೂ ಅವರ ಆಸಕ್ತಿ ಹರಡಿಕೊಂಡಿತು. ಅವರಿಗೆ ಪ್ರಜಾಸತ್ತಾತ್ಮಕತೆ ಹಾಗೂ ಸಮಾನತೆಯನ್ನು ಕುರಿತಂತೆ ಇದ್ದ ಕಾಳಜಿಗೂ ತತ್ತ್ವಶಾಸ್ತ್ರದ ಈ ಆಸಕ್ತಿಗೂ ಹೊಂದಿಕೆಯಾಗುತ್ತಿತ್ತು.



ಅಂದರೆ ಅರ್ಥಶಾಸ್ತ್ರದಲ್ಲಿ ಅವರ ಆಸಕ್ತಿಯ ಕ್ಷೇತ್ರಕ್ಕೂ ತತ್ತ್ವಶಾಸ್ತ್ರದಲ್ಲಿ ಅವರು ಅಧ್ಯಯನ ಮಾಡಲು ಆರಿಸಿಕೊಂಡ ವಿಷಯಕ್ಕೂ ಹತ್ತಿರದ ನೆಂಟಿತ್ತು. ಉದಾಹರಣೆಗೆ ಸಾಮಾಜಿಕ ಆಯ್ಕೆಯ ಸಿದ್ಧಾಂತದಲ್ಲಿ ಗಣಿತೀಯ ತರ್ಕವನ್ನು ಬಹಳವಾಗಿ ಬಳಸುತ್ತಾರೆ. ಜೊತೆಗೆ ಸೇನ್ ನೈತಿಕ ತತ್ವಶಾಸ್ತ್ರವನ್ನೂ ತಮ್ಮ ಅಧ್ಯಯನದಲ್ಲಿ ಒಟ್ಟಿಗೆ ತಂದಿದ್ದರು. ಅಸಮಾನತೆ ಹಾಗು ಬಡತನವನ್ನು ಕುರಿತಂತೆ ಅವರ ದೃಷ್ಟಿಕೋನದಲ್ಲೂ ಇವೆರಡೂ ಒಟ್ಟಿಗೆ ಹೆಣೆದುಕೊಂಡಿರುವುದನ್ನು ಕಾಣಬಹುದು. ಅರ್ಥಶಾಸ್ತ್ರ ಹಾಗೂ ತತ್ವಶಾಸ್ತ್ರಗಳೆರಡನ್ನು ಬೆಸೆದುಕೊಂಡೇ ಅವರ ದೃಷ್ಟಿಕೋನ ರೂಪುಗೊಂಡಿದೆ.

ಹಾಗೆ ಅವರ ಅಧ್ಯಯನದ ಹರಿವು ವಿಸ್ತಾರಗೊಳ್ಳುತ್ತಾ ಹೋಯಿತು. ನಂತರ ಟ್ರಿನಿಟಿ ಕಾಲೇಜಿನಿಂದ ರಜೆ ಪಡೆದುಕೊಂಡು ಎಂಐಟಿಯಲ್ಲಿ ಸೇವೆ ಸಲ್ಲಿಸಲು ಹೋದರು. ಅಲ್ಲಿ ಇವರು ಪಾಲ್ ಸ್ಯಾಮ್ಯುಯಲ್‌ಸನ್ ಮೊದಲಾದವರೊಂದಿಗೆ ಚರ್ಚಿಸುವುದಕ್ಕೆ ಸಾಧ್ಯವಾಯಿತು. ೧೯೬೩ರ ವೇಳೆಗೆ ಕೇಂಬ್ರಿಡ್ಜನ್ನು ಪೂರ್ಣವಾಗಿ ಬಿಟ್ಟು ದೆಹಲಿಗೆ ಮರಳಲು ನಿರ್ಧರಿಸಿದರು. ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸಿನಲ್ಲಿ ಹಾಗೂ ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಪ್ರೊಫೆಸರ್ ಆಗಿ ೧೯೭೧ರವರೆಗೆ ಕೆಲಸಮಾಡಿದರು. ಅಲ್ಲಿ ಕೆ ಎನ್ ರಾಜ ಅವರ ನೇತೃತ್ವದಲ್ಲಿ ಅಡ್ವಾನ್ಸ್ಡ್ ಸ್ಕೂಲ್ ಆಫ್ ಎಕನಾಮಿಕ್ಸನ್ನು ಬೆಳೆಸಿದರು. ಇವರ ಜೊತೆಗೆ ಅರ್ಥಶಾಸ್ತ್ರ ವಿಭಾಗಕ್ಕೆ ಸುಕುಮಾಯ್ ಚಕ್ರವರ್ತಿ, ಜಗದೀಶ್ ಭಗವತಿ, ಮನಮೋಹನ್ ಸಿಂಗ್, ಸುರೇಶ್ ತೆಂಡುಲ್ಕರ್ ಇವರೆಲ್ಲಾ ಸೇರಿಕೊಂಡರು. ಅಲ್ಲಿಯ ಸಮಾಜಶಾಸ್ತ್ರದ ವಿಭಾಗವು ಬಲವಾಗಿಯೇ ಇತ್ತು. ಎಂ ಎನ್ ಶ್ರೀನಿವಾಸ್, ಅಂಡ್ರೆ ಬೆಟೆಲ್, ವೀಣಾ ದಾಸ್ ಮೊದಲಾದವರು ಆ ವಿಭಾಗದಲ್ಲಿದ್ದರು. ಇವರು ೧೯೭೧ರಲ್ಲಿ ದೆಹಲಿ ಬಿಟ್ಟು ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಸೇರಿದರು. ಆ ವೇಳೆಗೆ ಅರ್ಥಶಾಸ್ತ್ರ ಹಾಗೂ ಸಮಾಜವಿಜ್ಞಾನದ ಬೋಧನೆಗೆ ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್ ಸಾಕಷ್ಟು ಪ್ರಖ್ಯಾತವಾಗಿತ್ತು.

ಸಾಮಾಜಿಕ ಆಯ್ಕೆಯ ಸಾಧ್ಯತೆ:

ಸಾಮಾಜಿಕ ಆಯ್ಕೆಗಳನ್ನು ನಿರ್ಧರಿಸುವ ವಿಧಾನವನ್ನು ಕುರಿತಂತೆ ಸೇನ್ ಅವರಿಗೆ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದುತ್ತಿರುವಾಗಲೇ ಆಸಕ್ತಿ ಮೂಡಿತ್ತು. ಆರೋ ಅವರ ಪುಸ್ತಕದ ಓದು, ಈ ಕುರಿತು ಅವರನ್ನು ಗಂಭೀರವಾಗಿ ಚಿಂತಿಸುವಂತೆ ಮಾಡಿತು. ಇದು ಒಂದು ಸಮಾಜದ ಪ್ರಜೆಗಳ ವೈಯಕ್ತಿಕ ಆದ್ಯತೆಗಳನ್ನು ಕ್ರೋಡೀಕರಿಸಿ, ಸಾಮುದಾಯಿಕ ಆದ್ಯತೆಗಳನ್ನು ರೂಪಿಸುವ ಸಮಸ್ಯೆಯತ್ತ ಗಮನ ಹರಿಸುತ್ತದೆ. ಇದು ಮುಖ್ಯ. ಯಾಕೆಂದರೆ, ಅರ್ಥಶಾಸ್ತ್ರ ಹಾಗೂ ರಾಜಕೀಯದಲ್ಲಿ ನಾವು ನಿರಂತರವಾಗಿ ಸಾಮಾಜಿಕ ವ್ಯವಸ್ಥೆಗಳ ಬಗ್ಗೆ, ಅಲ್ಲಿಯ ಕ್ರಮಗಳ ಬಗ್ಗೆ, ಅದರ ಫಲಿತಗಳ ಬಗ್ಗೆ ತೀರ್ಮಾನಗಳನ್ನು ವ್ಯಕ್ತಪಡಿಸುತ್ತಲೇ ಇರುತ್ತೇವೆ. ಒಂದು ರಾಜಕೀಯ ವ್ಯವಸ್ಥೆಯನ್ನು, ಸಮಾಜವನ್ನು ಹಾಗೂ ಆರ್ಥಿಕತೆಯನ್ನು ಅದು ಪ್ರಜಾಸತ್ತಾತ್ಮಕವಾಗಿದೆ ಅಥವಾ ಅದು ನಿರಂಕುಶ ಪ್ರಭುತ್ವ ಎಂದು; ಅದು ಭ್ರಷ್ಟವಾಗಿದೆ ಅಥವಾ ಶುದ್ಧವಾಗಿದೆ ಎಂದು; ಅದು ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಎಂದು ಹೇಳುತ್ತಲೇ ಇರುತ್ತೇವೆ. ಈ ಅಭಿಪ್ರಾಯಗಳು ನಮ್ಮ ನೈತಿಕ ನಿಲುವನ್ನೋ, ಅಭಿರುಚಿಯನ್ನೋ, ನಮ್ಮ ಆಸೆಯನ್ನೋ ಅಥವಾ ಇಂತಹ ಇನ್ಯಾವುದೋ ಅಂಶಗಳನ್ನು ಆಧರಿಸಿರುತ್ತವೆ. ಅವು ಒಟ್ಟಾರೆಯಾಗಿ ನಮ್ಮ ನಮ್ಮ ವೈಯಕ್ತಿಕ ಆದ್ಯತೆಗಳನ್ನು ಆಧರಿಸಿರುತ್ತವೆ ಎಂದು ಸಾಮಾಜಿಕ ಆಯ್ಕೆಯ ಸಿದ್ಧಾಂತ ಭಾವಿಸುತ್ತದೆ. ಸಾಮಾಜಿಕ ಆಯ್ಕೆಯ ಸಿದ್ಧಾಂತದ ಉದ್ದೇಶವೇ ನಿರ್ಧಾರಗಳು ಸಾಮೂಹಿಕವಾಗಿ ಹೇಗೆ ರೂಪುಗೊಳ್ಳುತ್ತವೆ ಎಂಬುದನ್ನು ಅಧ್ಯಯನ ಮಾಡುವುದು. ಅದು ಒಂದು ಸಮಾಜದಲ್ಲಿ ವ್ಯಕ್ತಿಗಳ ಆದ್ಯತೆಗಳನ್ನು ಕ್ರೋಡೀಕರಿಸಿ ಹೇಗೆ "ಸಾಮಾಜಿಕ ಆದ್ಯತೆಗಳನ್ನಾಗಿ" ರೂಪಿಸಬಹುದು ಎಂಬುದನ್ನು ಮುಖ್ಯವಾಗಿ ಗಮನಿಸುತ್ತದೆ. ಸಾಮಾಜಿಕ ಆಯ್ಕೆಯನ್ನು ನಿರ್ಧರಿಸುವುದಕ್ಕೆ ಹಲವಾರು ಪರ್ಯಾಯ ಕ್ರಮಗಳು ಹಾಗೂ ನಿಯಮಗಳು ಸಾಧ್ಯ. ಉದಾಹರಣೆಗೆ ವೈಯಕ್ತಿಕ ಉಪಯುಕ್ತತೆಯನ್ನು ಕ್ರೋಡೀಕರಿಸಬಹುದು. ಅಥವಾ ಯಾವುದಾದರೂ "ನ್ಯಾಯ"ದ ಕಲ್ಪನೆಯನ್ನು ಬಳಸಿಕೊಂಡು ಸಾಮಾಜಿಕ ಆದ್ಯತೆಯನ್ನು ಕಂಡುಹಿಡಿಯಬಹುದು. ಯಾವ ನಿಯಮವನ್ನು ಅನುಸರಿಸಬಹುದು ಅನ್ನುವುದನ್ನು ಕೆನೆತ್ ಆರೋ ಅವರ ಪ್ರಮೇಯ ಚರ್ಚಿಸುವುದಿಲ್ಲ. ಅದರ ಉದ್ದೇಶವೂ ಅದಲ್ಲ. ಸಮಾಜದ ವಿಭಿನ್ನ ವ್ಯಕ್ತಿಗಳು ತಮ್ಮ ನಂಬಿಕೆಯ ವಿಭಿನ್ನ ಕ್ರಮಗಳನ್ನು ಬಳಸಿಕೊಂಡು ಸಾಮಾಜಿಕ ಯೋಗಕ್ಷೇಮವನ್ನು ಕುರಿತಂತೆ ವಿಭಿನ್ನ ನಿಲುವನ್ನು ತಳೆಯುತ್ತಾರೆ. ಸಾಮಾಜಿಕ ಸ್ಥಿತಿಯನ್ನು ಅರಿಯುವುದಕ್ಕೆ ಈ ವೈಯಕ್ತಿಕ ನಿಲುವುಗಳನ್ನು ಕ್ರೋಡೀಕರಿಸುವುದಕ್ಕೆ ಸಾಧ್ಯವೇ ಅನ್ನುವುದು ಆರೋ ಎದುರಿಸುವ ಸಮಸ್ಯೆ. ಆರೋ ಅವರ ಪ್ರಮೇಯ ಇದು ಸಾಧ್ಯವಿಲ್ಲ ಎಂದು ಸೂಚಿಸುತ್ತದೆ. ಆ ಮೂಲಕ ಅದು ಪ್ರಜಾಸತ್ತಾತ್ಮಕ ನಿರ್ಧಾರಗಳನ್ನು ರೂಪಿಸುವ ಪ್ರಕ್ರಿಯೆಯ ಸಾಧ್ಯತೆಯ ಬಗ್ಗೆಯೇ ಅನುಮಾನವನ್ನು ಮೂಡಿಸುತ್ತದೆ. ಸೇನ್ ಅವರ ಅಧ್ಯಯನ ಈ ಕ್ಷೇತ್ರದಲ್ಲಿ ಕವಿದಿದ್ದ ನಿರಾಸೆಯನ್ನು ನಿವಾರಿಸುವ ನಿಟ್ಟಿನಲ್ಲಿ ಮಹತ್ವದ ಕೊಡುಗೆಯನ್ನು ನೀಡಿದೆ.

ಸಾಮಾಜಿಕ ಆಯ್ಕೆ ಸಿಧ್ಧಾಂತದ ಹರವು ತೀರಾ ವಿಶಾಲ. ಇದರಲ್ಲಿ ತೀರಾ ವಿಭಿನ್ನವಾದ ಸಮಸ್ಯೆಗಳಿಗೆ, ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ನಡೆದಿದೆ. ಸೇನರು ಎತ್ತಿಕೊಂಡ ಕೆಲವು ಪ್ರಶ್ನೆಗಳನ್ನು ಉದಾಹರಣೆಯಾಗಿ ಕೊಡಬಹುದು. ಬಹುಜನರ ಆಳ್ವಿಕೆಯಲ್ಲಿ ಯಾವ ಸಂದರ್ಭದಲ್ಲಿ ಅಸಂದಿಗ್ಧವಾದ ಹಾಗೂ ಸುಸಂಗತವಾದ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ? ಒಂದು ಸಮಾಜದ ಜನರ ಆಸಕ್ತಿಗಳು ಅಷ್ಟೊಂದು ಭಿನ್ನವಾಗಿರುವಾಗ ಒಂದು ಸಮಾಜ ಎಷ್ಟರ ಮಟ್ಟಿಗೆ ಸಮರ್ಪವಾಗಿ ಕೆಲಸ ನಿರ್ವಹಿಸುತ್ತಿದೆ




ಎಂದು ನಿರ್ಧರಿಸುವುದು ಹೇಗೆ? ಜನರ ಕಷ್ಟಕಾರ್ಪಣ್ಯಗಳೂ ತೀರಾ ಭಿನ್ನವಾಗಿರುವಾಗ ಒಟ್ಟು ಬಡತನವನ್ನು ಅಳತೆ ಮಾಡುವುದು ಹೇಗೆ? ಜನರ ಅದ್ಯತೆಗೆ ಸಾಕಷ್ಟು ಮಾನ್ಯತೆ ಕೊಡುವಾಗ ವ್ಯಕ್ತಿಯ ಹಕ್ಕು, ಸ್ವಾತಂತ್ರ್ಯಕ್ಕೆ ಅವಕಾಶ ಮಾಡಿಕೊಡುವುದು ಹೇಗೆ? ಇಂತಹ ಹಲವಾರು ಪ್ರಶ್ನೆಗಳು ಅವರ ಅಧ್ಯಯನದಲ್ಲಿ ಬಂದಿವೆ. ಜೊತೆಗೆ ಸಾಮಾಜಿಕ ಆಯ್ಕೆಯ ಸಿದ್ಧಾಂತಕ್ಕೆ ನೇರವಾಗಿ ಸಂಬಂಧಪಡದ ಕೆಲವು ವಿಚಾರಗಳು ಇವರ ಅಧ್ಯಯನದ ಭಾಗವಾಗಿವೆ. ಉದಾಹರಣೆಗೆ ಬರಗಾಲ ಹಾಗೂ ಹಸಿವಿಗೆ ಕಾರಣ ಮತ್ತು ಪರಿಹಾರ, ಲಿಂಗತಾರತಮ್ಯಕ್ಕೆ ಇರುವ ಕಾರಣ ಮುಂತಾದವು. ಸೇನ್ ಅವರ ಬರಹಗಳು ಸಾಮಾಜಿಕ ಆಯ್ಕೆಯ ಸಿದ್ಧಾಂತವನ್ನು ಶ್ರೀಮಂತಗೊಳಿಸಿದ್ದು ಮಾತ್ರವಲ್ಲ, ಅದರ ಅಧ್ಯಯನಕ್ಕೆ ಹೊಸದಾದ ಹಾಗೂ ತುಂಬಾ ಮುಖ್ಯವಾದ ಕ್ಷೇತ್ರಗಳನ್ನು ತೆರೆದವು. ಅನೇಕ ಸಂಶೋಧಕರಲ್ಲಿ ಯೋಗಕ್ಷೇಮ ಅರ್ಥಶಾಸ್ತ್ರವನ್ನು ಕುರಿತಂತೆ ಆಸಕ್ತಿ ಮೂಡಿಸಿತು.

ಸಾಮಾಜಿಕ ಆಯ್ಕೆಯಿಂದ ಅಸಮಾನತೆ ಹಾಗೂ ಬಡತನದ ಕಡೆಗೆ: ಸಾಮಾಜಿಕ ಆಯ್ಕೆಯ ಸಿದ್ಧಾಂತವನ್ನು ಕುರಿತಂತೆ ನಡೆದ ಅಧ್ಯಯನಗಳು ಹೊಸ ಹೊಸ ಕ್ರಿಯಾತ್ಮಕ ಸಾಧ್ಯತೆಗಳಿಗೆ ಅವಕಾಶಮಾಡಿಕೊಟ್ಟವು. ಲಭ್ಯವಿರುವ ಅಂಕಿಅಂಶಗಳನ್ನು ತೀರಾ ವಿಭಿನ್ನವಾದ ಆರ್ಥಿಕ ಹಾಗೂ ಸಾಮಾಜಿಕ ವಿಶ್ಲೇಷಣೆಗೆ ಬಳಸಿಕೊಳ್ಳುವ ನಿಟ್ಟಿನಲ್ಲಿ ಅರ್ಥಶಾಸ್ತ್ರಜ್ಞರು ಯೋಚಿಸತೊಡಗಿದರು. ಆರ್ಥಿಕ ಅಸಮಾನತೆ, ಬಡತನವನ್ನು ಅಳೆಯುವುದು, ನಿರುದ್ಯೋಗದ ವಿಶ್ಲೇಷಣೆ, ಲಿಂಗತಾರತಮ್ಯ ಹೀಗೆ ನೂರಾರು ಸಾಧ್ಯತೆಗಳ ಬಗ್ಗೆ ಸೇನ್ ಹಾಗೂ ಇತರರು ಯೋಚಿಸುವಂತಾಯಿತು. ಟೋನಿ ಅಟ್ಕಿನ್ಸನ್ ಅವರ ಸಂಶೋಧನೆ ಸೇನ್ ಅವರನ್ನು ಅಸಮಾನತೆ ಕಡೆ ಗಮನ ಹರಿಸಲು ಪ್ರೇರೇಪಿಸಿತು. ಅಲ್ಲಿಯವರೆಗೂ ಕೇವಲ ಸಿದ್ಧಾಂತದ ಮಟ್ಟದಲ್ಲಿ ಯೋಚಿಸುತ್ತಿದ್ದ ಸೇನ್ ಅವರು ಹೆಚ್ಚೆಚ್ಚು 'ಪ್ರಾಯೋಗಿಕ' ಸಮಸ್ಯೆಗಳ ಬಗ್ಗೆ ಗಮನ ಹರಿಸಲು ಪ್ರಾರಂಭಿಸಿದರು. ಆ ವೇಳೆಗೆ ಲಭ್ಯವಿದ್ದ ಅಪಾರ ಮಾಹಿತಿಯನ್ನು ಬಳಸಿಕೊಂಡು ಸಾಮಾಜಿಕ ಆಯ್ಕೆಯ ಸಿದ್ಧಾಂತ ಸಾಕಷ್ಟು ಬೆಳೆದಿತ್ತು. ಇದು ಇವರಲ್ಲಿ ಒಂದು ವಿಶ್ವಾಸ ಮೂಡಿಸಿತ್ತು. ಯಾಕೆಂದರೆ ಬಲವಾದ ಸೈದ್ಧಾಂತಿಕ ಬುನಾದಿ ಇಲ್ಲದ ಪ್ರಾಯೋಗಿಕ ವಿಶ್ಲೇಷಣೆಗಳು ಆಳದಲ್ಲಿ ಪೊಳ್ಳಾಗಿಬಿಡುವ ಅಪಾಯವಿರುತ್ತದೆ. ಇವರ ಅಧ್ಯಯನಕ್ಕೆ ಆ ಅಪಾಯವಿರಲಿಲ್ಲ. ಅದಕ್ಕೆ ಬಲವಾದ ಸೈದ್ಧಾಂತಿಕ ಅಧ್ಯಯನದ ಬುನಾದಿಯಿತ್ತು.

ಇವರು ಲಿಂಗತಾರತಮ್ಯ ಕುರಿತು ಮೊದಲು ಮಾಡಿದ ಅಧ್ಯಯನ ಭಾರತದಲ್ಲಿ ಸ್ತ್ರೀಪುರುಷ ಅಸಮಾನತೆಗೆ ಸಂಬಂಧಿಸಿದ ಅಂಕಿ ಅಂಶಗಳ ವಿಶ್ಲೇಷಣೆಗೆ ಸೀಮಿತವಾಗಿತ್ತು. ನಂತರದ ದಿನಗಳಲ್ಲಿ ಅಧ್ಯಯನದ ವ್ಯಾಪ್ತಿಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಿದರು. ಜೊತೆ ಜೊತೆಗೆ ಕೆಲವು ಸಾರ್ವತ್ರಿಕ ಸಿದ್ಧಾಂತಗಳನ್ನು ರೂಪಿಸುವ ಪ್ರಯತ್ನವನ್ನೂ ಮಾಡಿದರು. ಅವರು ತಮ್ಮ ಈ ಎಲ್ಲಾ ಅಧ್ಯಯನಗಳನ್ನು ಕೇವಲ ಲಭ್ಯವಿರುವ ಅಂಕಿಅಂಶಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳಲಿಲ್ಲ. ಸ್ವಂತವಾಗಿ ಅಂಕಿಅಂಶಗಳನ್ನು ಸಂಗ್ರಹಿಸತೊಡಗಿದರು. ಸುನಿಲ್ ಸೇನ್‌ಗುಪ್ತ ಅವರ ಜೊತೆ ಸೇರಿಕೊಂಡು ಪಶ್ಚಿಮ ಬಂಗಾಳದ ಹಳ್ಳಿಯೊಂದರಲ್ಲಿ ಐದು ವರ್ಷದವರೆಗಿನ ಮಕ್ಕಳಿಗೆ ಸಂಬಂಧಿಸಿದಂತೆ ಸ್ವತಃ ಟೇಪು ಹಿಡಿದು ಅಳತೆ ಮಾಡಿ ಮಾಹಿತಿ ಸಂಗ್ರಹಿಸಿದರು. ಆಗಿನ ಅವರ ಅನುಭವವೇ ರೋಚಕವಾಗಿದೆ. ಅಳತೆಗೆ ಒಲ್ಲದ ಮಕ್ಕಳನ್ನು ರಮಿಸಿ, ಒಲಿಸಿ, ಅಳತೆ ಮಾಡುವ ಕಲೆ ಇವರಿಗೆ ಕರಗತವಾಯಿತು. ಆ ಸಮಯದಲ್ಲಿ ಮಕ್ಕಳು ಇವರ ಜೊತೆಗಾರರನ್ನು ಕಚ್ಚಿದ ಘಟನೆಗಳೂ ಇವೆಯಂತೆ.

ದಾರಿದ್ರ್ಯ, ಬರಗಾಲ ಹಾಗೂ ಕೊರತೆ

ಆ ಸಮಯದಲ್ಲಿ ಇವರು ಬರಗಾಲಕ್ಕೆ ಕಾರಣ ಹಾಗು ಪರಿಹಾರವನ್ನು ಕುರಿತು ಕೂಡ ಅಧ್ಯಯನ ಮಾಡಿದರು. ಈ ಕ್ಷೇತ್ರದಲ್ಲಿ ಸೇನ್ ಅವರ ಮುಖ್ಯವಾದ ಪುಸ್ತಕ 'ಪಾವರ್ಟಿ ಅಂಡ್ ಫ್ಯಾಮಿನ್'. ಆಹಾರದ ಕೊರತೆ ಕ್ಷಾಮಕ್ಕೆ ಕಾರಣ ಅನ್ನುವುದು ಸಾಮಾನ್ಯ ನಂಬಿಕೆ. ಆದರೆ ಸೇನ್ ಈ ನಿಲುವನ್ನು ಪ್ರಶ್ನಿಸುತ್ತಾರೆ. ಭಾರತ, ಬಾಂಗ್ಲಾದೇಶ, ಸಹಾರಾದ ದೇಶಗಳಲ್ಲಿನ ಕ್ಷಾಮಗಳನ್ನು ಕುರಿತಂತೆ ಅಧ್ಯಯನ ನಡೆಸಿದರು. ಕ್ಷಾಮಕ್ಕೆ ನಿಜವಾದ ಕಾರಣ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದರು. ತೀವ್ರ ಕ್ಷಾಮ ಅನುಭವಿಸಿದ ಎಷ್ಟೋ ಪ್ರದೇಶಗಳಲ್ಲಿ ಹಿಂದಿನ ವರ್ಷಕ್ಕಿಂತ ಹೆಚ್ಚಿನ ಆಹಾರ ಉತ್ಪಾದನೆಯಾಗಿದೆ. ಅಷ್ಟೇ ಅಲ್ಲ, ಕ್ಷಾಮದಿಂದ ನರಳುತ್ತಿರುವ ಕೆಲವು ದೇಶಗಳು ಆಹಾರವನ್ನು ರಫ್ತು ಮಾಡಿರುವ ಉದಾಹರಣೆಗಳೂ ಇವೆ. ಹಾಗಾಗಿ ಕ್ಷಾಮಕ್ಕೆ ಆಹಾರದ ಪೂರೈಕೆಯ ಕೊರತೆ ಕಾರಣ ಎನ್ನುವುದಕ್ಕೆ ಆಗುವುದಿಲ್ಲ. ಕ್ಷಾಮವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ವಿವಿಧ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳು ಹೇಗೆ ಸಮಾಜದ ವಿಭಿನ್ನ ಗುಂಪುಗಳನ್ನು ಪ್ರಭಾವಿಸುತ್ತವೆ ಎಂಬುದನ್ನು ಪೂರ್ಣವಾಗಿ ವಿಶ್ಲೇಷಿಸಬೇಕಾಗುತ್ತದೆ. ಅವರಿಗಿದ್ದ ನಿಜವಾದ ಅವಕಾಶಗಳನ್ನು ಅರ್ಥಮಾಡಿಕೊಳ್ಳಬೇಕು. ಉದಾಹರಣೆಗೆ ಬಾಂಗ್ಲಾದೇಶದಲ್ಲಿ ೧೯೭೪ರ ಕ್ಷಾಮದ ಸಮಯದಲ್ಲಿ ಪ್ರವಾಹದಿಂದ ಆಹಾರದ ಬೆಲೆಗಳು ಗಣನೀಯವಾಗಿ ಏರಿದವು. ಕೆಲವು ಬೆಳೆಗಳನ್ನು ಕಟಾವು ಮಾಡುವುದಕ್ಕೆ ಸಾಧ್ಯವಾಗದೇ ಹೋಗಿದ್ದಕ್ಕೆ ರೈತರಿಗೆ ಹೆಚ್ಚಿನ ಉದ್ಯೋಗವಕಾಶಗಳು ತಪ್ಪಿಹೋದವು. ಇದರಿಂದ ಈ ಜನರ ಕೊಳ್ಳುವ ಶಕ್ತಿ ಕಡಿಮೆಯಾಯಿತು. ಈ ಗುಂಪಿನ ಜನ ತೀವ್ರ ಹಸಿವಿನಿಂದ ಬಳಲಬೇಕಾಯಿತು. ಹಾಗಾಗಿ ಜನರಲ್ಲಿ ಆಹಾರವನ್ನು ಕೊಳ್ಳುವ ಶಕ್ತಿ ಇಲ್ಲದ್ದು ಬಹುತೇಕ ಕ್ಷಾಮಗಳಿಗೆ ಕಾರಣ ಎಂದು



ಸೇನ್ ವಾದಿಸುತ್ತಾರೆ. ಅಂದರೆ ಇದಕ್ಕೆ ಪರಿಹಾರ ಸಾಧ್ಯ. ಸೇನ್ ಮುಂದುವರಿದು, ಕ್ಷಾಮವನ್ನು ಹೇಗೆ ತಪ್ಪಿಸುವುದು ಅನ್ನುವುದನ್ನು ಗಮನಿಸುತ್ತಾರೆ. ಇನ್ನೂ ಮುಂದುವರಿದು ಒಂದೊಮ್ಮೆ ಕ್ಷಾಮ ಕಾಣಿಸಿಕೊಂಡರೂ ಅದರ ಪರಿಣಾಮವನ್ನು ತಗ್ಗಿಸುವುದು ಹೇಗೆ ಅನ್ನುವುದನ್ನು ಚರ್ಚಿಸುತ್ತಾರೆ. ಕೆಲವರು ಪಾವರ್ಟಿ ಅಂಡ್ ಫ್ಯಾಮಿನ್ ಕೃತಿಯಲ್ಲಿ ಅವರು ನೀಡಿರುವ ಅಂಕಿಅಂಶಗಳ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಆದರೆ ಈ ಪುಸ್ತಕ ಅಭಿವೃದ್ಧಿ ಅರ್ಥಶಾಸ್ತ್ರಕ್ಕೆ ಮಹತ್ವದ ಕೊಡುಗೆ ಅನ್ನುವುದರಲ್ಲಿ ಅನುಮಾನವಿಲ್ಲ. ಪಾವರ್ಟಿ ಅಂಡ್ ಫ್ಯಾಮಿನ್ ಪುಸ್ತಕದಲ್ಲಿ ಅವರು ಮುಂದಿಡುವ ಮುಖ್ಯವಾದ ವಾದವೆಂದರೆ ಕ್ಷಾಮ ಆಹಾರದ ಲಭ್ಯತೆಯ ಕುಸಿತದಿಂದ ಉಂಟಾಗಿದ್ದಲ್ಲ. ಬದಲಿಗೆ ಜನರಿಗೆ ಕೊಳ್ಳುವ ಸಾಮರ್ಥ್ಯದಲ್ಲಿನ ಕುಸಿತ ಕ್ಷಾಮಕ್ಕೆ ನಿಜವಾದ ಕಾರಣ. ಹಾಗಾಗಿ ಅದನ್ನು ತಪ್ಪಿಸುವುದಕ್ಕೆ ಸಾಧ್ಯ. ಅದಕ್ಕೆ ಸಾರ್ವಜನಿಕ ಕ್ರಿಯೆಯ (ಪಬ್ಲಿಕ್ ಅಕ್ಷನ್) ಅವಶ್ಯಕತೆಯಿದೆ. ಸಾರ್ವಜನಿಕ ಒತ್ತಡದಿಂದ ಸರ್ಕಾರಗಳು ಕ್ರಮ ತೆಗೆದುಕೊಳ್ಳುವಂತಾಗಬೇಕು. ಅದು ಸಾಧ್ಯವಾಗಬೇಕಾದರೆ ಪತ್ರಿಕಾ ಸ್ವಾತಂತ್ರ್ಯ, ಹಾಗೂ ಇತರ ಪ್ರಜಾಸತ್ತಾತ್ಮಕ ಸಂಸ್ಥೆಗಳು ಸಕ್ರಿಯವಾಗಿರಬೇಕು. ಆಗ ಕ್ಷಾಮವನ್ನು ನಿರ್ಲಕ್ಷಿಸುವುದಕ್ಕೆ ಸರ್ಕಾರಗಳಿಗೆ ಕಷ್ಟವಾಗುತ್ತದೆ. ಹಾಗೆ ನಿರ್ಲಕ್ಷಿಸುವುದು ಅವರ ರಾಜಕೀಯ ಭವಿಷ್ಯಕ್ಕೆ ಕುತ್ತಾಗುತ್ತದೆ. ಅದೇ ರೀತಿಯಲ್ಲಿ ಬಡತನ, ಹಸಿವು ಇತ್ಯಾದಿ ಸಂಕಷ್ಟಗಳು ಕ್ಷಾಮದಷ್ಟು ತೀವ್ರವಲ್ಲದಿದ್ದರೂ ಅವು ಕೂಡ ಗಂಭೀರವಾದ ಸಮಸ್ಯೆಗಳೆ. ಮನುಷ್ಯನ ಇಂತಹ ಸಂಕಷ್ಟಗಳನ್ನು ನಿವಾರಿಸುವುದಕ್ಕೆ ಸಾರ್ವಜನಿಕ ಕ್ರಿಯೆ ಬೇಕಾಗುತ್ತದೆ. ಹಾಗೆಯೇ ಸೇನ್ ಅವರ ಇನ್ನೊಂದು ಕಾಳಜಿಯ ವಿಷಯ ಭಾರತೀಯರನ್ನು ಹಾಗೂ ಭಾರತದ ಬಹುತ್ವದ ಸಂಪ್ರದಾಯವನ್ನು ಒಡೆಯುವ ಪ್ರಯತ್ನ, ಮಿಲಿಟರಿವಾದ ಇತ್ಯಾದಿ ಜನವಿರೋಧಿ ಪ್ರವೃತ್ತಿಗಳನ್ನು ವಿರೋಧಿಸುವುದು. ಸೇನ್ ಅವರಷ್ಟು ಆಳವಾದ ನೈತಿಕ ಕಾಳಜಿ ಹಾಗೂ ಅಷ್ಟೇ ತೀಕ್ಷ್ಣವಾದ ತಾರ್ಕಿಕ ಮನಸ್ಸಿರುವ ಚಿಂತಕರು ಕಡಿಮೆ. ಸೇನ್ ಅವರ ಚಿಂತನೆಗಳಲ್ಲಿ ಇವೆರಡೂ ಸೊಗಸಾಗಿ ಬೆಸೆದುಕೊಂಡಿದೆ.

ಹಾಗಾಗಿಯೇ ಅಮರ್ತ್ಯಸೇನ್ ಅವರಿಗೆ ನೋಬೆಲ್ ಬಹುಮಾನ ಬಂದಾಗ ನೋಬೆಲ್ ಬಹುಮಾನದಲ್ಲಿ ವಿಶ್ವಾಸವೇ ಇಲ್ಲದವರೂ ಸಂಭ್ರಮಿಸಿದ್ದು. ನೋಬೆಲ್ ಕಮಿಟಿಯವರಿಗೆ ತಮ್ಮ ವಿಶ್ವಾಸಾರ್ಹತೆಯನ್ನು ಸ್ಥಾಪಿಸಿಕೊಳ್ಳಬೇಕಿದೆ ಎನ್ನುವುದರ ಅರಿವು ಬಂದಿದೆ ಎಂದು ಅವರೆಲ್ಲಾ ಭಾವಿಸಿದ್ದರು. ಕೇವಲ ಸಮಿತಿಗೆ ಮಾತ್ರವಲ್ಲ, ಪಟ್ನಾಯಕ್ ಗುರುತಿಸುವಂತೆ, “ಸಾಂಪ್ರದಾಯಿಕ ಅರ್ಥಶಾಸ್ತ್ರಕ್ಕೆ ತಾನು ಅನುಭವಿಸುತ್ತಿರುವ ಬಿಕ್ಕಟ್ಟನ್ನು ಇದು ಹೊರಗೆ ತಂದಿದೆ” ಎನ್ನುವುದೂ ನಿಜ. ಏನೇ ಇರಲಿ ಅಮರ್ತ್ಯಸೇನ್ ಅವರ ವಿಚಾರಗಳನ್ನು ಚರ್ಚಿಸುತ್ತಾ, ಅದರ ಹರವನ್ನು ವಿಸ್ತರಿಸುತ್ತಾ ಹೋಗಬೇಕಾಗಿದೆ. ಆ ಮೂಲಕ ಬಡತನ, ಅಸಮಾನತೆ ಇತ್ಯಾದಿ ಸೇನ್ ಚರ್ಚಿಸುವ ವಿಷಯಗಳು ಇನ್ನಷ್ಟು ವ್ಯಾಪಕವಾಗಿ ಚರ್ಚೆಯಾಗುವುದು ಒಳ್ಳೆಯದು. ಜೊತೆಗೆ ಈ ಬಗ್ಗೆ ಸರ್ಕಾರಗಳ ಕ್ರಮಕ್ಕಾಗಿ ಸಾರ್ವಜನಿಕ ಒತ್ತಾಯವೂ ಹೆಚ್ಚಾಗಬೇಕಾದ ಜರೂರು ಇದೆ.

[ಹೊಸತು ಮಾಸಿಕದಲ್ಲಿ ಪ್ರಕಟವಾಗಿದ್ದ ಲೇಖನ]